ಸಾಹಿತ್ಯ ದಾಸೋಹ – ೧೯೭

೧೧ ಡಿಸೆಂಬರ್ ೨೦೨೧ರ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ
ಲೇಖನಗಳು, ಕವನಗಳು, ವರದಿಗಳು

ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಪ್ರಿಯರೆ,

ಸಾಹಿತ್ಯ ದಾಸೋಹ ೧೯೬ರ ಸಂಚಿಕೆಯನ್ನು ನಿಮ್ಮ ಓದಿಗಾಗಿ ನೀಡುತ್ತಿದ್ದೇವೆ.

೧೧ನೇ ಡಿಸೆಂಬರ್ ೨೦೨೧ರಂದು ನಮ್ಮ ೧೯೬ನೇ ಸಾಹಿತ್ಯ ದಾಸೋಹ ಯಶಸ್ವಿಯಾಗಿ ನಡೆದಿದ್ದು ಅಧ್ಯಕ್ಷತೆಯನ್ನು ಶ್ರೀ ಕೆ. ಆರ್. ವೆಂಕಟೇಶ್ (ಮನು) ಅವರು ವಹಿಸಿದ್ದರು.

ಈ ಬಾರಿಯ ದಾಸೋಹದಲ್ಲಿ ಬಹಳ ಕಡಿಮೆ ಅಂದರೆ ೧೫ ದಾಸೋಹಿಗಳು ತಮ್ಮ ಸ್ವರಚಿತ ಪ್ರಸ್ತುತಿಗಳನ್ನು ಮಂಡಿಸಿದರು. ಕೊನೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಆರ್. ವೆಂಕಟೇಶ್ ಅವರು ಎಲ್ಲ ಬರಹಗಳನ್ನೂ ವಿಶ್ಲೇಷಿಸಿ ಮಾತನಾಡಿದರು.

ಈ ಹಿಂದಿನ ದಾಸೋಹದ ಸಂಚಿಕೆಗಳ ಆಕೃತಿ ಮತ್ತು ವಿನ್ಯಾಸದ ಬಗ್ಗೆ ನಿಮ್ಮೆಲ್ಲರಿಂದ ಬಂದ ಅಭಿಪ್ರಾಯಗಳು ನಮಗೆ ಸಂತಸ ನೀಡಿವೆ. ಕೃತಿಯ ಹೂರಣಕ್ಕೆ ದಾಸೋಹದಲ್ಲಿ ಭಾಗವಹಿಸುವ ನೀವೆಲ್ಲರೂ ಕಾರಣಕರ್ತರಾದರೆ, ವಿನ್ಯಾಸ ಅಂದವಾಗಿ ಬರಲು ಸಂಚಿಕೆಯನ್ನು ಮುತುವರ್ಜಿಯಿಂದ ಸಿದ್ಧಪಡಿಸುವ ಶ್ರೀ ಶೃಂಗೇಶ್ವರ ಶರ್ಮ ಅವರು ಕಾರಣ.

ನಿಮ್ಮ ಸಲಹೆ, ಅಭಿಪ್ರಾಯಗಳಿಗೆ ಸ್ವಾಗತ.

ಧನ್ಯವಾದಗಳು.

ಸಂಚಾಲಕ ಸಮಿತಿ.
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ . . .

೦೧	ನೋಡಿಯೋ ಸಾಹಿತ್ಯ ದಾಸೋಹ ೧೯೬ – ಸಂಕ್ಷಿಪ್ತ ವರದಿ	ಕೆ.ಎನ. ಮಹಾಬಲ	೦೪
೦೨	ನೀವು ನಕ್ಕಲರೇ?	ಗುರುರಾಜ ಶಾಸ್ತ್ರಿ	೦೫
೦೩	ಪ್ರಕೃತಿಯಲ್ಲಿ ಹೊಂಗಿರಣ	ಎನ್.ವಿ. ರಘುರಾಂ	೧೦
೦೪	ತೊದಲು ಮಾತು	ಶೀಲಾ ಅರಕಲಗೂಡು	೧೨
೦೫	ಸಮಾಜಸೇವೆ ಹಾಗೂ ರಾಜಕಾರಣ	ಜೀವಿ. ಹೆಗಡೆ	೧೩
೦೬	ಮನ್ವಂತರ	ಎನ್. ಶಂಕರ ರಾವ್	೧೫
೧೭	ಸಾಹಿತಿ ಬುಕ್ಕಪ್ಪ ಮತ್ತು ಪತ್ನಿ ಶಾಲು	ನಾಗರತ್ನ ಚಂದ್ರಶೇಖರ್	೧೬
೦೮	ಗಣೇಶ ದಂಡಕ	ರತ್ನ	೨೦
೦೯	ಮನಸ್ಸಿದ್ದರೆ ಮಾರ್ಗ – ಗಾದೆ ಮಾತು ಸುಳ್ಳಲ್ಲ	ಪ್ರಮೋದಾ ಎಸ್. ಮೂರ್ತಿ	೨೨
೧೦	ಕನ್ನಡ ಕಥಾ ಪ್ರಪಂಚ – ವೇದಾಂತ ಕಥೆಗಳು	ವಿಠ್ಠಲ್ ಇಜೇರಿ	೨೩
೧೧	ಗಿಣಿ ಕಚ್ಚಿದ ಹಣ್ಣು	ಎಂ.ಎಸ್. ನರಸಿಂಹ ಮೂರ್ತಿ	೨೭
೧೨	ಮಣ್ಣಿನ ಧೀರಧ್ಯಾನ	ಶಾಂತಿವಾಸು	೨೯
೧೩	ಪೆನ್ಸಿಲ್ ಎಂಬ ದಾರ್ಶನಿಕನ ಜೀವನ ದೃಷ್ಟಿ. . .!!	ರಾಧಿಕಾ ವಿ. ಗುಜ್ಜರ್	೩೦
೧೪	ಕಪ್ಪು ಬಿಳಿಯಾಟ	ರೇಣುಕಾ ದೇಸಾಯಿ	೩೨
೧೫	ಅಶ್ರು ತರ್ಪಣ	ರೇಣುಕಾ ದೇಸಾಯಿ	೩೨
೧೬	ಜೀವನ ಕಲಿಸಿದ ಪಾಠ	ಮಾಲತಿ ಶ್ರೀನಿವಾಸನ್	೩೩
೧೭	ಕೆಲವು ಕವನಗಳೇ ಹಾಗೆ	ಮಾಲತಿ ಶ್ರೀನಿವಾಸನ್	೩೩
೧೮	ಬೇರಿನ ಆಸರೆಯ ಸೆಲೆಯ ಹುಡುಕುತ್ತಾ	ಜಿ.ವಿ. ಅರುಣ	೩೪
೧೯	ದಾಸೋಹದ ಪ್ರಸ್ತುತಿಗಳು – ಅಧ್ಯಕ್ಷರ ಅನಿಸಿಕೆಗಳು	ಕೆ.ಆರ್.ವೆಂಕಟೇಶ್	೩೯

ಮುಖಚಿತ್ರ : ಆಗುಂಬೆ ಸಮೀಪದ ಬರ್ಕಣ ಪ್ರವಾಸ – ಚಿತ್ರಗಳು: ಶ್ರೀ ಗುರುರಾಜ ಶಾಸ್ತ್ರಿ

ನೋಡಿಯೋ ಸಾಹಿತ್ಯ ದಾಸೋಹ ೧೯೬–ಸಂಕ್ಷಿಪ್ತ ವರದಿ

ವರದಿ: ಕೆ ಎನ್ ಮಹಾಬಲ

೧೯೬ನೆಯ ನೋಡಿಯೋ ಸಾಹಿತ್ಯ ದಾಸೋಹವು ದಿನಾಂಕ ೧೧ನೆಯ ಡಿಸೆಂಬರ್ ೨೦೨೧ರಂದು ವೇದಿಕೆಯ ಕ್ರಿಯಾಶೀಲ ಸದಸ್ಯ, ಕವಿ, ಸಂಗೀತಜ್ಞ ಶ್ರೀ ಕೆ.ಆರ್.ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ಅರ್ಥಪೂರ್ಣವಾಗಿ ನಡೆಯಿತು. ಕಾರ್ಯಕ್ರಮದ ಆರಂಭದಲ್ಲಿ ರಾಷ್ಟ್ರದ ರಕ್ಷಣಾ ಪಡೆಯ ಮುಖ್ಯಸ್ಥರಾದ ಶ್ರೀ ಬಿಪಿನ್ ರಾವತ್, ಅವರ ಪತ್ನಿ ಮಲ್ಲಿಕಾ ರಾವತ್ ಹಾಗೂ ಇತರ ಹನ್ನೊಂದು ಜನ ವೀರಯೋಧರ ಮರಣಕ್ಕೆ ಶ್ರದ್ಧಾಂಜಲಿ ಸೂಚಿಸಲಾಯಿತು.

ಹದಿನೈದು ಸದಸ್ಯರು ತಮ್ಮ ವೈವಿಧ್ಯಮಯ ಪ್ರಸ್ತುತಿಗಳನ್ನು ವಾಚಿಸಿದರು. ಕೃತಿ ಪರಿಚಯ, ಕವನಗಳು, ಹಾಡು, ಲಲಿತ ಪ್ರಬಂಧ, ವೈಚಾರಿಕ ಲೇಖನಗಳಿಂದ ದಾಸೋಹದ ಲೇಖನಗಳು ಸಂಪದ್ಭರಿತವಾಗಿದ್ದವು. ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಆರ್.ವೆಂಕಟೇಶ್ ಅವರು ಎಲ್ಲ ಲೇಖನಗಳ ಬಗ್ಗೆ ತಮ್ಮ ಅಧ್ಯಯನಪೂರ್ಣ ಅನಿಸಿಕೆಗಳನ್ನು ತಿಳಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಶ್ರೀ ಬಿ.ಎಸ್.ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ದಾಸೋಹ ವೇದಿಕೆಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀ ಗುರುರಾಜ ಶಾಸ್ತ್ರಿಯವರು ಸ್ವಾಗತ ಭಾಷಣ ಮಾಡಿ ಅಧ್ಯಕ್ಷರನ್ನು ಪರಿಚಯಿಸಿದರು.

ಈ ಸಂದರ್ಭದಲ್ಲಿ ದಾಸೋಹ ೧೯೬ರ ಪಿಡಿಎಫ್ ಆವೃತ್ತಿಯೂ ಬಿಡುಗಡೆಯಾಯಿತು. ಶ್ರೀಮತಿ ರೇಣುಕಾ ದೇಸಾಯಿಯವರು ಜಿ ಮೀಟ್ ಆತಿಥ್ಯ ವಹಿಸಿದ್ದರು. ಶ್ರೀ ಕೆ.ಎನ್.ಮಹಾಬಲ ಅವರ ವಂದನಾರ್ಪಣೆಯೊಂದಿಗೆ ದಾಸೋಹ ಮುಕ್ತಾಯವಾಯಿತು.

ಹೊಸವರ್ಷದಲ್ಲಿ ೦೮ನೆಯ ಜನವರಿ ೨೦೨೨ರಂದು ನಡೆಯಲಿರುವ ಸಾಹಿತ್ಯ ದಾಸೋಹ ೧೯೭ರ'ಲ್ಲಿ ಸದಸ್ಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಲು ಸ್ವಾಗತ.

*****

ಪ್ರವಾಸ ಕಥನ

ನೀವು ನಕ್ಸಲರೇ?

- ಗುರುರಾಜ ಶಾಸ್ತ್ರಿ

ಇದೇನಿದು, ಶಾಸ್ತ್ರಿಗಳು ಪ್ರವಾಸ ಕಥನ ಎಂದು ಹೇಳಿ ಶೀರ್ಷಿಕೆ ನಕ್ಸಲರ ಬಗ್ಗೆ ಕೊಟ್ಟಿದ್ದಾರಲ್ಲಾ, ತಪ್ಪಾಯಿತೇ ಎಂದು ನೀವು ಯೋಚಿಸುತ್ತಿರುವುದು ನನಗೆ ಗೊತ್ತಾಯಿತು ತಪ್ಪೇನಿಲ್ಲ, ಓದುತ್ತಾ ಹೋದರೆ ನಿಮಗೇ ತಿಳಿಯುತ್ತೆ.



ಇಸವಿ 1992, ನಾನು, ನನ್ನ ಅಣ್ಣ ಶ್ರೀನಾಥ ಮತ್ತು ನಮ್ಮ ಎದುರು ಮನೆಯ ಹುಡುಗ ವೆಂಕಟೇಶ ಆಗುಂಬೆ ಪ್ರವಾಸಕ್ಕೆ ಹೊರಟೆವು.

ಈಗಿನ ಆಗುಂಬೆ ಪ್ರವಾಸವೇ ಬೇರೆ ತರಹ ಬಿಡಿ; ಒಂದೆರೆಡು ದಿನ ಹೋಮ್ ಸ್ಟೇಯಲ್ಲಿ ಇರುವುದು, ಅಲ್ಲಿ ಸಮಯ ಸಮಯಕ್ಕೆ ಅವರು ಮಾಡಿಕೊಡುವ ಮಲೆನಾಡಿನ ಊಟವನ್ನು ಸವಿಯುತ್ತಾ ಆಗುಂಬೆಯ ಮಳೆಯನ್ನು ತೊಟ್ಟಿಯ ಮನೆಯಿಂದ ವೀಕ್ಷಿಸುವುದು, ಸೂರ್ಯಾಸ್ತ ಕಾಣುವ ಜಾಗಕ್ಕೆ ಹೋಗಿ ಮೋಡಗಳ ಅಡ್ಡಗೋಡೆಯಿಂದ ಸೂರ್ಯನ ದರ್ಶನವಾಗದಿದ್ದರೂ ಅಲ್ಲಿ ಮಾರುವ ಬೇಲ್ಪುರಿ, ಸೌತೇಕಾಯಿ ತಿನ್ನುವುದು, ನಂತರ ಬೆಂಗಳೂರಿಗೆ ಹಿಂದಿರುಗುವುದು.

ಆದರೆ ಆಗಿನ ನಮ್ಮ ಪ್ರವಾಸವೇ ಬೇರೆ ತರಹ. ಚಿಕ್ಕದೊಂದು ಬರ್ನರ್ ಸಹಿತ ಗ್ಯಾಸ ಸಿಲಿಂಡರ್ ಜೊತೆ ನಾವು ಚಾರಣಕ್ಕೆ ಹೋಗುತ್ತಿದ್ದೆವು. ಬಸ್‌ನಲ್ಲಿ ಸಿಲಿಂಡರ್ ತೆಗೆದುಕೊಂಡು ಹೋಗುವುದಕ್ಕೆ ಕಂಡಕ್ಟರ್ ಹಾಗೂ ಬಸ್ ಡ್ರೈವರ್ ಗೆ ವಿನಂತಿಸಿಕೊಂಡರೆ ಸಾಕಾಗುತ್ತಿತ್ತು. ಅಕ್ಕಿ, ಬೇಳೆ, ತರಕಾರಿ, ಬ್ರೂ ಕಾಫಿ ಪುಡಿ, ಹಾಲಿನ ಪುಡಿ, ಗೊಜ್ಜವಲಕ್ಕಿ ಇನ್ನೂ ಏನೇನೋ ಆಹಾರ ಸಾಮಗ್ರಿಗಳನ್ನು ನಾವೇ ಕೊಂಡೊಯ್ಯುತ್ತಿದ್ದೆವು. ಜಿಮ್‌ಗೆ ಹೋಗುತ್ತಿದ್ದ ನಾನಂತೂ ಹಿಮಾಲಯದ ಶೆರ್ಪಾಗಳಂತೆಯೇ ಮೈಕಟ್ಟು ಬೆಳೆಸಿದ್ದೆ ಆಗ. ಹಾಗಾಗಿ ಹೆಚ್ಚು ತೂಕ ನನ್ನ ಬ್ಯಾಗಿನದೇ. ಇನ್ನು ರಾತ್ರಿಯ ಹೊತ್ತು ತಂಗುವುದು ನಮ್ಮದೇ ಟೆಂಟಿನಲ್ಲಿ. ಅಣ್ಣನ ಗೆಳೆಯನ ಟೆಂಟ್ ಅದು. ನಾಲ್ಕು ಜನ ಅದರಲ್ಲಿ ಮಲಗಲು ಸಾಧ್ಯವಿತ್ತು ಮತ್ತು ಮಳೆಯ ಛತ್ರಿಯಂತಿದ್ದ ಟೆಂಟ್ ಜೋಡಿಸಲು ಸುಮಾರು 30 ನಿಮಿಷ ಬೇಕಾಗುತ್ತಿತ್ತು.

ಬೆಂಗಳೂರಿನಿಂದ ರಾತ್ರಿಯ ಬಸ್ ಹತ್ತಿ ಬೆಳಿಗ್ಗೆ ನಾವು ಆಗುಂಬೆ ತಲುಪಿದಾಗ ಸುಮಾರು ಎಂಟು ಗಂಟೆ. ಬಸ್ಸಿನಿಂದ ನಾವು ಇಳಿಯುತ್ತಿದ್ದಾಗಲೇ ನಮ್ಮನ್ನು ಪ್ರವಾಸಿಗರೆಂದು ಗುರುತಿಸಿದ ನಾಯಿಯೊಂದು ಪ್ರವಾಸದ ಕೊನೆಯವರೆವಿಗೂ ನಮ್ಮೊಂದಿಗಿತ್ತು. ಬಸ್ ಸ್ಟ್ಯಾಂಡಿನ ಒಂದು ಹೋಟಲ್ಲಿನಲ್ಲಿ ಮಂಗಳೂರು ಬನ್ಸ್ ತಿಂದು, ಕಷಾಯ ಕುಡಿದು ನಮ್ಮ ಚಾರಣ ಶುರು. ಎತ್ತ ಕಡೆ ಎಂದು

ಕೇಳುತ್ತೀರಾ? ಕಾಡಿನ ಮಧ್ಯೆ ಬರ್ಕಣ ಎಂಬ ಒಂದು ಸಿಮೆಂಟ್ ಕಟ್ಟೆ ಇರುವ ಜಾಗಕ್ಕೆ. ಇದು ಬ್ರಿಟಿಷರು ಆಗಿನ ಕಾಲದಲ್ಲಿ ಕಟ್ಟಿದ ಸಿಮೆಂಟ್ ಕಟ್ಟೆಯಂತೆ. ನಿಖರವಾಗಿ ಆ ಜಾಗ ಬಸ್ ತಂಗುದಾಣದಿಂದ ಎಷ್ಟು ದೂರ ಜ್ಞಾಪಕ ಇಲ್ಲ, ಆದರೆ ನನ್ನ ಪ್ರಕಾರ ಊರಿನಲ್ಲಿ ಒಂದೆರೆಡು ಕಿಲೋಮೀಟರ್ ನಡೆದು ನಂತರ ಕಾಡಿನಲ್ಲಿ ಮೂರ್ನಾಲ್ಕು ಕಿಲೋಮೀಟರ್ ನಡೆದರೆ ಸಾಕು ಅನಿಸುತ್ತೆ.

ಬರ್ಕಣಕ್ಕೆ ಹೋಗುವ ದಾರಿಯಲ್ಲಿ ಜೋಗಗುಂಡಿ ಎಂಬ ಒಂದು ಚಿಕ್ಕ ನೀರಿನ ಜರಿ ಹರಿಯುತ್ತೆ. ನೀರಿನ ಮಧ್ಯೆಯೇ ದೊಡ್ಡ ದೊಡ್ಡ ಬಂಡೆಗಳಿದ್ದು ಸ್ನಾನ ಮಾಡಲು ಅನುಕೂಲವಾಗು ವಂತಿದೆ. ಸ್ನಾನ ಮತ್ತು ಇತರ ಪ್ರಾತಃ ಕರ್ಮಗಳನ್ನೆಲ್ಲಾ ಮುಗಿಸಿ ಅಲ್ಲಿಂದ ಬರ್ಕಣದ ಕಡೆಗೆ ಹೆಜ್ಜೆ ಹಾಕಿದೆವು.

ಶನಿವಾರದ ಬೆಳಗಿನ ತರಗತಿಯನ್ನು ಮುಗಿಸಿಕೊಂಡು ದಾರಿಯಲ್ಲಿ ನಡೆದು ಬರುತ್ತಿದ್ದ ಆರನೇ ತರಗತಿ ಹುಡುಗ ಸತೀಶ (ಹೆಸರು ಸರಿಯಾಗಿ ನೆನಪಿಲ್ಲ). ಸ್ಪಷ್ಟವಾದ ಕನ್ನಡದಲ್ಲಿ ಮಾತನಾಡುತ್ತಾ ನಮ್ಮೊಂದಿಗೆ ಅವನೂ ಬರ್ಕಣದ ಕಡೆಗೆ ಹೆಜ್ಜೆ ಹಾಕಿದ.

ದಾರಿಯಲ್ಲಿ ಅವನ ಹಳ್ಳಿಯ ಒಬ್ಬ ಆಸಾಮಿ ಸೈಕಲ್ ಮೇಲೆ ಬರುತ್ತಿದ್ದ. ಈ ಸತೀಶ ಅವನಿಗೆ "ನಾನು ಈ ಪ್ರವಾಸಿಗರಿಗೆ ಬರ್ಕಣಕ್ಕೆ ದಾರಿ ತೋರಿಸಲು ಹೋಗುತ್ತಿದ್ದೇನೆ" ಎಂದು ಹೇಳಿದ. 'ನಮಗೆ ದಾರಿ ಗೊತ್ತಿದೆ ನೀನು ಮನೆಗೆ ಹೋಗು' ಎಂದು ಹೇಳಿದರೂ ಸತೀಶ ನಮ್ಮ ಮಾತು ಕೇಳಲಿಲ್ಲ. "ಇರಲಿ, ನಮ್ಮ ಹಳ್ಳಿಯ ಆಸಾಮಿ, ತಮ್ಮ ಮನೆಯವರಿಗೆ ತಿಳಿಸಿರುತ್ತಾನೆ ಅವರೇನು ಹೆದರುವುದಿಲ್ಲ ಬಿಡಿ" ಎಂದು ಹೇಳಿ ರಾತ್ರಿ ನಮ್ಮ ಜೊತೆಯೇ ಇರುವುದಾಗಿ ನಿಶ್ಚಯಿಸಿದ. ಮಧ್ಯಾಹ್ನಕ್ಕೆ ಟೊಮೇಟೋ ಸೂಪ್, ತರಕಾರಿ ಹುಳಿ ಎಲ್ಲಾ ನೀರಿನ ಜರಿಯ ಹತ್ತಿರವೇ ತಯಾರಿ ಮಾಡಿದ್ದೆವು.

ಬರ್ಕಣಕ್ಕೆ ಬಂದಾಗ ಅಂದಾಜು ಸುಮಾರು ಒಂದು ಗಂಟೆ ಇರಬಹುದು. ಬರ್ಕಣದ ಸಿಮೆಂಟ್ ಸ್ಲಾಬ್ ಮೇಲೆ ನಿಂತರೆ ಪೂರ್ತಿ ಆಗುಂಬೆಯ ದಟ್ಟ ಹಸಿರಾದ ಕಾಡನ್ನು ವೀಕ್ಷಿಸಬಹುದು. ನೇರಕ್ಕೆ ಸುಮಾರು ಎಷ್ಟೋ ಕಿಲೋಮೀಟರ್ ದೂರದಲ್ಲಿ ಸೀತಾ ನದಿಯ ಜಲಪಾತ ಕೂಡ ನೋಡಬಹುದು. ಸಿಮೆಂಟ್ ಸ್ಲಾಬಿನಿಂದ ಸ್ವಲ್ಪ ಮುಂದೆ ಹೋದರೆ ಸಾವಿರಾರು ಅಡಿಗಳ ಪ್ರಪಾತ. ಈ ಸಿಮೆಂಟ್ ಸ್ಲಾಬ್ ಮೇಲೆ ನಮ್ಮ ಟೆಂಟ್ ಕಟ್ಟಿದೆವು. ಮಾಡಿಟ್ಟಿದ್ದ ಅಡುಗೆಯನ್ನು ಮತ್ತೆ ಬಿಸಿ ಮಾಡಿ ಆ ಕೊರೆಯುವ ಛಳಿಯಲ್ಲಿ ಬಿಸಿಯಾದ ಟೊಮೆಟೋ ಸೂಪ್ ಕುಡಿದು ಊಟ ಮಾಡಿದ್ದು ಜ್ಞಾಪಿಸಿಕೊಂಡರೆ ಈಗಲೂ ಬಾಯಲ್ಲಿ ನೀರು ತರಿಸುತ್ತದೆ.

ಸತೀಶನ ಕೈಯಲ್ಲಿ ಚಂದಮಾಮ ಕತೆಗಳನ್ನು ಮತ್ತು ಅವನ ತರಗತಿಯ ಪದ್ಯವನ್ನು ಓದಿಸಿದೆವು. ನಾನು ಮಂಕುತಿಮ್ಮನ ಕಗ್ಗವನ್ನು ಓದಿ ಅದರ ಬಗ್ಗೆ ಎಲ್ಲರೂ ಸ್ವಲ್ಪ ಹೊತ್ತು ಚರ್ಚೆ ಮಾಡಿದೆವು. ಕತ್ತಲಾಗುವ ಮುನ್ನ ರಾತ್ರಿಯ ಅಡುಗೆ

ತಯಾರಾಗಬೇಕಿತ್ತು. ಅದಕ್ಕಾಗಿ ನನ್ನೊಬ್ಬನನ್ನು ಬಿಟ್ಟು ಮಿಕ್ಕ ಮೂವರು ಮತ್ತೆ ಜೋಗಗುಂಡಿಗೆ ಹೊರಟರು. ಬರ್ಕಣದಲ್ಲಿ ಒಬ್ಬನೇ ಪಕ್ಷಿಗಳ ಗಾನವನ್ನು ಕೇಳಿಸಿಕೊಳ್ಳುತ್ತಾ ಇದ್ದದ್ದೇನೋ ನಿಜ, ಆದರೆ ಕಾಡು ಪ್ರಾಣಿ ಯಾವುದಾದರೂ ಬರಬಹುದೆಂಬ ಹೆದರಿಕೆ ಈ ನಿಸರ್ಗದ ವಿಸ್ಮಯವನ್ನು ಅನುಭವಿಸಲು ಬಿಡಲಿಲ್ಲ. ಗಾಳಿಗೆ ಯಾವುದಾದರೂ ಪ್ಲಾಸ್ಟಿಕ್ ಕವರ್ ಸದ್ದಾದರೆ ಆ ಕಡೆ ನೋಡುವುದು, ಯಾವುದಾದರೂ ಪ್ರಾಣಿ ಬಂತೆ ಎಂಬ ಶಂಕೆ. ಮನದಲ್ಲೇ ಒಬ್ಬನೇ ಅದೆಷ್ಟು ದೇವರ ಸ್ತೋತ್ರಗಳನ್ನು ಹೇಳಿಕೊಂಡೆನೋ ಜ್ಞಾಪಕವಿಲ್ಲ.

ಈ ಮೂವರು ಬಂದ ಕೂಡಲೇ ಮನದಲ್ಲೇನೋ ಧೈರ್ಯ. ಕತ್ತಲಾಗುವ ಮುನ್ನ ಊಟ ಮುಗಿಸಿ, ರಾತ್ರಿ ಕ್ಯಾಂಪ್‌ಫೈರ್‌ಗಾಗಿ ಒಣಗಿದ ಕಟ್ಟಿಗೆಗಳನ್ನು ಹುಡುಕಿತಂದು ಸಿಮೆಂಟ್ ಸ್ಲಾಬ್ ಮೇಲೆ ಜೋಡಿಸಿಟ್ಟೆವು. ರಾತ್ರಿ ಬೆಂಕಿ ಕಾಯಿಸಿಕೊಳ್ಳುತ್ತಾ ನಮಗೆ ಗೊತ್ತಿದ್ದ ಚಿತ್ರಗೀತೆಗಳು, ಭಾವಗೀತೆಗಳನ್ನು ಹಾಡುತ್ತಾ ಸುಸ್ತಾಗಿ ಟೆಂಟ್ ಒಳಗೆ ನಿದ್ದೆಗೆ ಶರಣಾದೆವು. ಕಾಡಿನಲ್ಲಿ ನಡೆದು ಹೆಚ್ಚು ದಣಿದಿದ್ದರಿಂದ ನಿದ್ದೇ ಜೋರಾಗಿಯೇ ಹತ್ತಿತ್ತು.

ಸುಮಾರು ರಾತ್ರಿ ಹನ್ನೆರಡು ಗಂಟೆ ಇರಬಹುದು. ಟೆಂಟ್‌ನ ಹೊರಗೆ ಜನರ ಮಾತುಗಳು ಕೇಳಿಸಲು ಪ್ರಾರಂಭವಾಯಿತು. ಏನಾಗುತ್ತಿದೆ ಎಂದು ನಾವು ನೋಡುವಷ್ಟರಲ್ಲಿ ಸುಮಾರು ಐವತ್ತು ಜನ ಕೈಯಲ್ಲಿ ಬೆಂಕಿಯ ಪಂಜುಗಳನ್ನು ಹಿಡಿದು ನಮ್ಮ ಟೆಂಟ್ ಸುತ್ತ ನಿಂತಿದ್ದರು. ಕೆಲವರು ಟೆಂಟ್ ಒಳಗೇ ಏನೋ ಹುಡುಕುತ್ತಿದ್ದರೆ, ಮತ್ತೆ ಕೆಲವರೂ ಟೆಂಟ್ ಸುತ್ತ ಹುಡುಕಲಾರಂಭಿಸಿ ಏನೂ

ಸಿಗಲಿಲ್ಲ ಎಂದು ಜೋರಾಗಿ ಹೇಳಿದರು. ಅವರು ಹುಡುಕುತ್ತಿದ್ದದ್ದು ತುಪಾಕಿ, ಮದ್ದು ಗುಂಡು ಎಂದು ಆಮೇಲೆ ನಮಗೆ ತಿಳಿಯಿತು. ಸತೀಶ ಆ ಗುಂಪಿನಲ್ಲಿದ್ದ ತನ್ನ ತಂದೆಯನ್ನು ಗುರುತಿಸಿದ. ಅವರು ಇವನಲ್ಲಿ ಬಂದು, "ಏನ್ ಹೇಳಿಕೊಟ್ಟರು, ಬೆಳಗ್ಗೆ ಇಂದ ಇವರ ಜೊತೆ ಏನ್ ಮಾಡ್ತಿದ್ದೆ" ಎಂದು ಜೋರಾಗಿ ಕೇಳಿದರು. ಅವನು ತಾನು ಓದಿದ ತರಗತಿಯ ಪಠ್ಯದ ಬಗ್ಗೆ ಚಂದಮಾಮದ ಕಥೆಗಳ ಬಗ್ಗೆ, ಕಗ್ಗದ ಚರ್ಚೆಯ ಬಗ್ಗೆ ಮತ್ತು ಹಾಡಿದ ಹಾಡುಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದ. ಅಲ್ಲಿಯವರೆಗೆ ಆ ಜನರು ನಮ್ಮನು ಮಾತನಾಡಲು ಬಿಟ್ಟೇ ಇರಲಿಲ್ಲ.

"ನೀವು ನಕ್ಸಲರಾ?" ಎಂಬುದು ನಮ್ಮಕಡೆಗೆ ಅವರ ಮೊದಲ ಪ್ರಶ್ನೆ. ನಾವು ನಮ್ಮ ಗುರುತಿನ ಚೀಟಿಯನ್ನು ತೋರಿಸಿ ನಾವು ಚಾರಣಕ್ಕಾಗಿ ಮಾತ್ರ ಬೆಂಗಳೂರಿನಿಂದ ಬಂದಿರುವುದೆಂದು ತಿಳಿಸಿದಾಗ ಅವರಿಗೆ ನಮ್ಮಲ್ಲಿ ನಂಬಿಕೆ ಬಂದಿತು. "ಅವರೆಲ್ಲಾ ಮನೆಗೆ ವಾಪಸ್ ಹೋಗು ಎಂದರು, ನಾನೇ ಹಟ ಮಾಡಿ ಇಲ್ಲಿರುತ್ತೇನೆ ಎಂದೆ" ಎಂದು ಸತೀಶ ಹೇಳಿದ. "ಅಲ್ಲಾ ಸ್ವಾಮಿ, ಅವನ ತಾಯಿ ಒಂದೇ ಸಮನೆ ಅಳ್ತಾ ಇದ್ದಾಳೆ, ನೀವಾದರೂ ಸ್ವಲ್ಪ ಬುದ್ಧಿ ಹೇಳೋದಲ್ವೇ" ಎಂದು ಸತೀಶನ ಅಪ್ಪ ನಮ್ಮನ್ನು ಕೇಳಿದಾಗ ನಮ್ಮ ಬಳಿ ಅವರಿಗೆ ಉತ್ತರಿಸಲು ಪದಗಳೇ ಇರಲಿಲ್ಲ. ಆ ರಾತ್ರಿಯ ಪಂಜುಗಳ ಬೆಳಕಲ್ಲೇ ನಮ್ಮೊಂದಿಗೆ ಫೋಟೋ ತೆಗೆಸಿಕೊಂಡರು. ನಂತರ ಹೊರಡುವಾಗ, "ಹುಡುಗನಿಗೆ ಒಳ್ಳೇ ಪಾಠಾನೇ ಹೇಳಿಕೊಟ್ಟಿದ್ದೀರಿ, ರಾತ್ರಿ ಇಲ್ಲೇ ಇರಲಿ ಬಿಡಿ, ಬೆಳಿಗ್ಗೆ ನೀವು ವಾಪಸ್ ಹೋಗುವಾಗ ಊರಿಗೆ ಬರಲಿ" ಎಂದು ಹೇಳಿ ಸತೀಶನನ್ನು ನಮ್ಮೊಂದಿಗೆ ಬಿಟ್ಟು ಹೋದರು. ಸಜೀವ ದಹನ ಎಂದರೆ ಏನೆಂಬುದನ್ನು ಪುಸ್ತಕದಲ್ಲಿ ಓದಿದ್ದೆ. ಆದರೆ ಆ ರಾತ್ರಿ ಅದರ ಅನುಭವವೂ ಆಗುತ್ತೇನೋ ಎಂಬುವ ತವಕ. ನನ್ನ ಅಪನಂಬಿಕೆ ಹೋಗಿತ್ತು.

ಮಾರನೇ ದಿನ, ಸತೀಶನನ್ನು ಅವನ ಹಳ್ಳಿಗೆ ಹೋಗಲು ತಿಳಿಸಿ, ನಾವು ಸಂಜೆಯವರೆಗೂ ಅಲ್ಲೇ ಬರ್ಕಣದಲ್ಲಿ ಸಮಯ ಕಳೆದು ನಂತರ ಆಗುಂಬೆಗೆ ಬಂದು ರಾತ್ರಿಯ ಬಸ್ ಹತ್ತಿದೆವು. ಎಲ್ಲೋ ಕಳೆದು ಹೋದ ಮಗನ ಬಗ್ಗೆ ತಂದೆ ತಾಯಿಗೆ ಇರುವ ಆತಂಕ ನಾವು ಈ ಚಾರಣದಲ್ಲಿ ಅರಿತೆವು. ಇದು ನಮ್ಮ ಮುಂದಿನ ಎಲ್ಲಾ ಚಾರಣಕ್ಕೆ ಒಳ್ಳೇ ಪಾಠ ಕಲಿಸಿತು.

ನಕ್ಸಲ್ ಚಟುವಟಿಕೆ ಹೆಚ್ಚಾದ ನಂತರ ಬರ್ಕಣಕ್ಕೆ ಹೋಗಲೂ ಅರಣ್ಯ ಇಲಾಖೆಯು ಯಾರಿಗೂ ಅವಕಾಶ ಕೊಡುತ್ತಿಲ್ಲವಂತೆ. ಇನ್ನೂ ನೂರು ವರ್ಷವಾದರೂ ಆ ಬರ್ಕಣದ ಸಿಮೆಂಟ್ ಕಟ್ಟೆ ಹಾಗೆ ಇರುತ್ತದೆ ಎಂಬುವುದರಲ್ಲಿ ಅನುಮಾನವಿಲ್ಲ. ಮುಂದೆಂದಾದರೂ ಇಲಾಖೆ ಮತ್ತೆ ಮನಸ್ಸು ಮಾಡಿ ಚಾರಣಿಗರಿಗೆ ಈ ಬರ್ಕಣವನ್ನು ತೆರೆದಿಟ್ಟರೆ ನಮ್ಮ ಅದೃಷ್ಟವಷ್ಟೆ.

ಈ ಚಾರಣದ ಹಾಗೂ ಅನುಭವಗಳ ಫೋಟೋಗಳನ್ನು ಹಂಚಿಕೊಳ್ಳುತ್ತಿದ್ದೇನೆ

*****

ಪ್ರಕೃತಿಯಲ್ಲಿ ಹೊಂಗಿರಣ

- ಎನ್. ವಿ.ರಘರಾಂ

ರಾತ್ರಿ ಸಿಂಫೋನಿ ಆರ್ಕೆಸ್ಟ್ರಾ ಮುಗಿಸಿ ಬರುವಾಗ ಆಗಲೇ ತಡವಾಗಿತ್ತು. ನಾಳೆ ಬೆಳಿಗ್ಗೆ ಎಂಟಕ್ಕೆ ರೆಡಿಯಾಗಿರಿ, ಉಪಹಾರ ಮುಗಿಸಿ ಆಂಡರ್ಸನ್ ಕೆರೆಯ ಹತ್ತಿರಕ್ಕೆ ಹೊಗೋಣ. ಅದು ಊರಿನ ಪಕ್ಕ ಇರುವ ನವದಂಪತಿಗಳಿಗೆ ಹೇಳಿ ಮಾಡಿಸಿದ ಜಾಗ ಎಂದು ನಮ್ಮ ಗೈಡ್ ಕಣ್ಣಂಚಿನಲ್ಲಿ ನಸುನಗುತ್ತಾ ಹೇಳಿ ಹೋದ. ಊಟ ಮುಗಿಸಿ ರೂಮಿಗೆ ಹೋಗಿ ಮಲಗಿದ್ದಷ್ಟೇ ಗೊತ್ತು. ಬೆಳಿಗ್ಗೆಯಿಂದ ಸುತ್ತಿ ಸುಸ್ತಾಗಿದ್ದ ನಮಗೆ ನಿದ್ದೆಗೆ ಜಾರಿದ್ದು ಗೊತ್ತಾಗಲಿಲ್ಲ.

ಈ ವರ್ಷ ಜನವರಿಯಲ್ಲಿ ವಿಶ್ರಾಂತಿ ಜೀವನಕ್ಕೆ ಅಡಿಯಿಟ್ಟ ನಾನು, ಕೊರೋನ ಗಲಾಟೆಯಿಂದ ಎಲ್ಲೂ ಹೋಗಲು ಆಗಿರಲಿಲ್ಲ. ಈಗ ಸಧ್ಯ ಅದೆಲ್ಲಾ ಮುಗಿಯಿತಲ್ಲಾ. ಹಳೆಯದನ್ನು ಮರೆತು ಹೊಸ ಜೀವನ ಪ್ರಾರಂಭ ಮಾಡಲು ಸಮಯ ಕೂಡಿ ಬಂದಿತ್ತು. ಈಗ "ಕನಸಿನ ರಾಜ್ಯ"ವಾದ "ಅಮೇರಿಕಾ" ನೋಡಲು ಹೊರಟ್ಟಿದ್ದೆ, ನನ್ನ ಪತ್ನಿಯ ಜೊತೆ. ಟ್ರಾವೆಲ್ ಏಜೆನ್ಸಿಯವರು ನಡೆಸುವ ಹದಿನೆಂಟು ದಿನಗಳ ಪ್ರವಾಸ. ಈಗಾಗಲೇ ಎಂಟು ದಿನಗಳು ಕಳೆದಿವೆ. ನಮ್ಮ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದವರಲ್ಲಿ ನಾವೇ ಹಿರಿಯರು!. ಯುವ ಜೊಡಿಗಳೇ ಜಾಸ್ತಿ. ಹಾಗಾಗಿ ಗೈಡ್ ಆಗಾಗ ನವದಂಪತಿಗಳಿಗೆ ಹೇಳಿದ ಜಾಗ ಎಂದು ನಮ್ಮ ಮುಖ ನೋಡಿ ಹೇಳುತ್ತಿದ್ದ!

ಬೆಳಗ್ಗೆ ಎದ್ದು ಉಪಹಾರ ಮಾಡಿ ಬಿ.ಪಿ. ಮಾತ್ರೆ ತಿಂದು ಬಸ್ ಹತ್ತಲು ಬಂದಾಗ ಬಸ್ಸು ಅರ್ಧ ಮಾತ್ರ ತುಂಬಿತ್ತು. ಉಳಿದವರು ಶಾಪಿಂಗ್ ಮಾಡಲು ಅಲ್ಲೇ ಉಳಿದುಕೊಂಡರು.

"ಈಗೀನವರೇ ಹೀಗೆ" ಎಂದು ಗೊಣಗಿಕೊಳ್ಳುತ್ತಾ ಎಂದಿನಂತೆ ನಮ್ಮ ಮಾತು ಪ್ರಾರಂಭ ಮಾಡಿದೆವು. ಬಸ್ಸು ನಿಧಾನವಾಗಿ ಒಂದು ಘಾಟಿ ಹತ್ತಲು ಶುರುಮಾಡಿತು. ನಾವು ಪ್ರಥಮ ಬಾರಿಗೆ ಊಟಿಗೆ ಹೋದ ದಾರಿಯ ನೆನಪಲ್ಲಿ ಕಳೆದು ಹೋದೆವು!

ಆ ಗುಡ್ಡದ ಮೇಲಿರುವ ರೆಸಾರ್ಟಿನ ಬಳಿ ಬಸ್ ನಿಲ್ಲಿಸಿದ. ಬೆಳಗ್ಗೆ 10.30 ಆಗಿದೆ. ಸೂರ್ಯ ಬಂದಿದ್ದಾನೆ. ಅದೂ ವಿಶೇಷವೇ ಇಲ್ಲಿ! ತಂಪನೆಯ ತಿಳಿಗಾಳಿ ಬೀಸುತ್ತಿದೆ. ಇಬ್ಬನಿ ಕರಗಿದೆ. ನವದಂಪತಿಗಳು ಕೈ-ಕೈ ಹಿಡಿದುಕೊಂಡು ಹೊರಟಿದ್ದಾರೆ.

ನಿಧಾನವಾಗಿ ನೋಡುತ್ತಾ ಅಲ್ಲಿಯೇ ಬಂಡೆಯ ಮೇಲೆ ಮಾಡಿದ್ದ ಕಲ್ಲಿನ ಕುರ್ಚಿಯ ಮೇಲೆ ನಾನು ನನ್ನ ಮನದೊಡತಿಯ ಜೊತೆ ಕೂತೆ. ಅಲ್ಲಿಯ ಪ್ರಶಾಂತತೆ ನಿಧಾನವಾಗಿ ಮನಸ್ಸಿಗೆ ಇಳಿಯಲು ಪ್ರಾರಂಭವಾಯಿತು. ಕಳೆದ ಎಂಟು ದಿನಗಳಿಂದ

ಬಿಡುವಿಲ್ಲದೇ ನೋಡಿದ ಬಹುಮಹಡಿ ಕಟ್ಟಡಗಳು, ಮಾಲ್ ಗಳು, ನೂರಾರು ಕಾರುಗಳು ನಿಧಾನವಾಗಿ ಮನದಿಂದ ದೂರವಾದುವು. ಮನಸ್ಸಿನಲ್ಲಿ ಪ್ರಶಾಂತತೆ ನೆಲಸಿತು.

ಎದುರುಗಡೆ ಹಸಿರು ರಾಶಿ. ಮಧ್ಯದಲ್ಲಿ ಪ್ರಶಾಂತವಾದ ಕೆರೆ. ಆಗೊಮ್ಮೆ ಈಗೊಮ್ಮೆ ಕೇಳಿಸುವ ಪಾರಿವಾಳಗಳ ಸದ್ದು. ಮಧ್ಯದಲ್ಲಿ ಒಂದು "ಹಸಿರುಮನೆ"! ಎಲ್ಲಾ ನೈಸರ್ಗಿಕ ಚಮತ್ಕಾರ ನೀರಿನಲ್ಲಿ ಪ್ರತಿಬಿಂಬವಾಗಿ ಗೋಚರವಾಗಿದೆ. ಎಂತಹ ರಮಣೀಯ ದೃಶ್ಯ. ಆಕಾಶದಿಂದ ಮೆಟ್ಟಿಲುಗಳನ್ನು ಕಟ್ಟಿ ಈ ಕೆರೆಯ ದಡಕ್ಕೆ ಬಿಟ್ಟಿದ್ದಾರೆ! ಕೇಳಿದೆ ಮನದನ್ನೆಯನು- "ಹುಣ್ಣಿಮೆಯ ರಾತ್ರಿಯಲಿ ರಂಭಾ, ಮೇನಕಾ ರಾತ್ರಿ ಇಲ್ಲಿ ಬಂದು ಈ ಕೆರೆಯಲ್ಲಿ ಮೀಯಬಹುದೇ?" ನಗುನಗುತಾ ಅವಳೆಂದಳು- “ಯಾಕೆ ನಿಮಗೆ ಸ್ವರ್ಗದ ಹುಡುಗಿಯರ ಸಹವಾಸ? ಅದೂ ಕೃತಯುಗದ ಪಳೆಯುಳಿಕೆಗಳಿಗೆ! ಕಾಣಬಾರದೇ ಕೊನೆಯ ಪಕ್ಷ ಕನಸನ್ನು ಕತ್ರೀನಾ ಬಗ್ಗೆ!" ಓಡುತ್ತಿದ್ದ ಮನಕ್ಕೆ "ತನ್ನತನ" ಸಿಕ್ಕಿದ ಆನಂದ!

ನಮ್ಮ ಮನಸ್ಸು ಕವಿಶೈಲದ ಬಳಿ ನಿಂತು ನೋಡಿದ ಸಹ್ಯಾದ್ರಿ ಪರ್ವತ ಶ್ರೇಣಿಯ ಜ್ಞಾಪಕ ತಂದಿತು. "ಮೂಡಲ ಮನೆಯ ಮುತ್ತಿನ ನೀರಿನ.... " ಹಾಡನ್ನು ಆ ಮನೆ ನೆನಪಿಸಿತು. ಕಾಫಿ ತೋಟದಲ್ಲಿ ಗುಡ್ಡದ ಮೇಲೆ ಆ ಮನೆ ಇದ್ದರೆ, ಇಲ್ಲಿ ಗುಡ್ಡದ ಕೆಳಗೆ ಈ ಹಸಿರು ಮನೆ ಇದೆ. ಈ ರೀತಿ ಕೆರೆ ತೀರದಲ್ಲಿ ತೋಟದ ಮಧ್ಯೆ ಮನೆ ಹೊನ್ನಾವರದ ಕಡೆ ಇದೆಯಲ್ಲ!

ಆದರೆ ನಾನು ಪ್ರಕೃತಿಯ ಮಧ್ಯೆ ಇದ್ದರೂ ನನ್ನ ಮನ ಪ್ರಕೃತಿಯಲ್ಲಿ ಬೆರೆತು ಪ್ರಸನ್ನಚಿತ್ತಳಾಗಿ ಮುಖದಲ್ಲಿ ಹೊಂಗಿರಣ ಬೀರುತ್ತಿರುವ ನನ್ನ ಮನದನ್ನೆಯಲ್ಲಿತ್ತು!. ಈ ಮುಖಭಾವ ನಾನು ಊಟಿಯಲ್ಲಿ ಮುವತ್ತು ವರುಷಗಳ ಹಿಂದೆ ಅವಳ ಮುಖದಲ್ಲಿ ಪ್ರಥಮ ಬಾರಿ ನೋಡಿದ ನೆನಪು. ಕಳೆದು ಹೋದ ಬಂಗಾರ ಮತ್ತೆ ಸಿಕ್ಕಿದ ಸಂತೋಷ!

ಗೈಡ್ ಬಂದು ಹೊರಡಲು ಸೂಚಿಸಿದಾಗ, ಹಗುರವಾದ ಮನಸ್ಸು "ವ್ಯಾರಿಕೋಸ್ ವೈನ್ಸ್" ನಿಂದ ದಪ್ಪಗಾದ ಕಾಲುಗಳನ್ನು ಎಳೆದುಕೊಂಡು ಹೊರಟಿತು!

ಇನ್ನೇನು ಬಸ್ ಹತ್ತಬೇಕು, ಅಷ್ಟರಲ್ಲಿ....ಟಣ್...ಟಣ್.. ಜೋರಾದ ಕಾಲಿಂಗ್ ಬೆಲ್ ಸದ್ದು! ದಡಕ್ಕನೆ ಎದ್ದೆ ಮಧ್ಯಾಹ್ನದ ನಿದ್ದೆಯಿಂದ! ಪಕ್ಕದ ಮನೆಯ ಆಂಟಿ ನಂಮನೆಯವರ ಜೊತೆ ಮಾತನಾಡಲು ಬಂದಿದ್ದಾರೆ!

ಅಂತೂ ಹನಿಯೂ ಇಲ್ಲದ ಚಂದ್ರನೂ ಇಲ್ಲದ ಎರಡನೇ ಹನಿಮೂನ್ ಮುಗಿದಿತ್ತು ಮನೆಯ ಹೊಸ ರಿಕ್ಲೈನರ್ ಸೋಫಾದ ಮೇಲೆ ಒಬ್ಬಂಟಿಯಾಗಿ!!

*****

ಪ್ರಸ್ತುತಿಗೂ ಮೊದಲೆರಡು ಮಾತು :

'ರೇಶ್ಮೆ ವಸ್ತ್ರದಲ್ಲಿ ಕಗ್ಗ' ಎನ್ನುವ ಕ್ಲಬ್ ಹೌಸ್‌ನಲ್ಲಿ ಪ್ರತಿದಿನ ಸಂಜೆ ಡಿವಿಜಿಯವರ 'ಮಂಕುತಿಮ್ಮನ ಕಗ್ಗ'ದಿಂದ ಒಂದು ಮುಕ್ತಕದ ವ್ಯಾಖ್ಯಾನ ನಡೆಯುತ್ತದೆ. ಒಂದೇ ಮುಕ್ತಕವನ್ನು ಕುರಿತು ನಾಲ್ಕಾರು ಜನ ವ್ಯಾಖ್ಯಾನ ಮಾಡುವುದರಿಂದ ಹೊಸ ಹೊಸ ಹೊಳಹುಗಳು ಕಂಡಂತಾಗುತ್ತದೆ. ನಾನು ಕೂಡ ತೋಚಿದ ಕೆಲ ಮಾತುಗಳನ್ನಾಡುವ ಪ್ರಯತ್ನ ಮಾಡುತ್ತಿದ್ದೇನೆ. ಆಗ ಸ್ಫುರಿಸುವ ಹೊಸ ಭಾವಗಳಲ್ಲಿ ಒಂದನ್ನು ಹಿಡಿದು ಬೇರೊಂದು ಚೌಪದಿಯನ್ನು ಅತ್ಯಂತ ಸರಳವಾಗಿ ರಚಿಸಲು ಪ್ರಯತ್ನಿಸುತ್ತಿದ್ದೇನೆ. ಮಂಕುತಿಮ್ಮನ ಕಗ್ಗದ ಮುಕ್ತಕದ ಸಂಖ್ಯೆಗಳಿಗೆ ಅನುಗುಣವಾಗಿ ನನ್ನ ಮುಕ್ತಕಗಳಿವೆ. ಹಾಗೆಂದು ಇವು ಕಗ್ಗದ ಮುಕ್ತಕಗಳ ಭಾವಾನುವಾದಗಳಲ್ಲ. ಆ ಮಟ್ಟದ ಯೋಗ್ಯತೆಯೂ ನನಗಿಲ್ಲ. ನನಗೆ ತೋಚಿದಂತೆ, ಪುಟ್ಟ ಮಗು ತೊದಲು ಮಾತನಾಡುವಂತೆ, ರಚಿಸಿದ್ದೇನೆ. ಆದ್ದರಿಂದ, 'ತೊದಲು ಮಾತು' ಎನ್ನುವ ಅಂಕಿತವನ್ನೇ ಬಳಸಿದ್ದೇನೆ. ಈಗ ಕೇವಲ ಮೊದಲ ಹನ್ನೆರಡು ಮುಕ್ತಕಗಳನ್ನು ಪ್ರಸ್ತುತಪಡಿಸುತಿದ್ದು, ಕ್ರಮೇಣ ಹತ್ತು ಹತ್ತರಂತೆ ಗುಂಪಿನಲ್ಲಿ ಹಾಕುವ ವಿಚಾರವಿದೆ. – ಶೀಲಾ ಅರಕಲಗೂಡು

ತೊದಲು ಮಾತು

– ಶೀಲಾ ಅರಕಲಗೂಡು

ಒಬ್ಬೊಬ್ಬರೊಂದೊಂದು ದೇವರನು ಪೂಜಿಪರು ।
ಒಬ್ಬೊಬ್ಬನೇ ಹಲವು ದೇವರಿಗೆ ನಮಿಸೆ ॥
ತಬ್ಬಿಬ್ಬುಗೊಳ್ಳದೆಯೆ ಪ್ರೀತಿಯಿಂ ನೀ ಭಜಿಸೆ ।
ಇಬ್ಬಂದಿ ಎಲ್ಲಿಹುದು? – ತೊದಲು ಮಾತು ॥ (೧)

ಎಲ್ಲಿ ನೋಡಿದರಲ್ಲಿ ದೈವ ಕಾಣುವುದಂತೆ ।
ಹುಲ್ಲಿನಿಂ ಹಿಡಿದು ಗಿರಿ ಶಿಖರದಲ್ಲಂತೆ ॥
ಬಲ್ಲದನ ನೋಟದಲಿ ಒಳಚಕ್ಷು ದೃಷ್ಟಿಯಲಿ ।
ನಿಲ್ಲುವುದು ನೀನರಸು – ತೊದಲು ಮಾತು ॥ (೨)

ಹರಡಿ ತಾನೆಲ್ಲೆಡೆಯು ನಮ್ಮೊಳಗು ಅವನಿದ್ದು ।
ಹರಸುತ್ತ ಚಲಿಸುತ್ತ ವಿಹರಿಸುವನಂತೆ ॥
ತೆರೆದಂಥ ಮನಸಿನಲಿ ನಂಬುತವನಿರುವಿಕೆಯ ।
ಪರಮಾರ್ಥ ತಿಳಿಯೋಣ – ತೊದಲು ಮಾತು ॥ (೩)

ಕಾಣಲಿಕೆ ಸಿಕ್ಕುವುದು ಎಲ್ಲವೀ ಬದುಕಿನಲಿ ।
ಕಾಣಬೇಕಿದೆ ನಾವು ಪಕ್ವ ನೋಟದಲಿ ॥
ಸಾಣೆ ಹಿಡಿಯುತ ಮನವ ಬಾಳ ಸಾರವ ಹೀರೆ ।
ಕಾಣುವುದು ಬದುಕರ್ಥ – ತೊದಲು ಮಾತು ॥ (೪)

ದೇವರನು ಹುಡುಕುತ್ತ ಹೊರಟವರು ನಾವೆಲ್ಲ ।
ಕಾವನವ ದೂರದಲಿ ಅವಿತಿರುವನೇನು? ॥
ಸಾವು ನೋವಿನ ಭಯದಿ ನಾವಿಲ್ಲ ನೋಯುತಿರೆ ।
ದೇವರೆಂಬುವನೆಲ್ಲಿ? – ತೊದಲು ಮಾತು ॥ (೫)

ಏನೆಲ್ಲ ಆಶ್ಚರ್ಯ ತುಂಬಿಹುದು ಜಗದಲ್ಲಿ ।
ತಾನೊಬ್ಬ ರಚಿಸಿದನೆ ಬ್ರಹ್ಮ ನೀ ಸೃಷ್ಟಿ? ॥
ಏನೇನೊ ಪ್ರಶ್ನೆಗಳು ಮಾನಸದ ಪಟಲದಲಿ ।
ನಾನೇಕೆ ಹೀಗಿರುವೆ? – ತೊದಲು ಮಾತು ॥ (೬)

ಬದುಕಿನಲಿ ಕಾಡುವುವು ನೂರೆಂಟು ವಿಷಯಗಳು।
ವಿಧಿಯಾಟ ಜೊತೆಗೂಡಿ ಧರ್ಮ ಕರ್ಮದಲಿ ॥
ಹೆದರಿಕೆಯು ಜೊತೆಯಲ್ಲಿ ಮುನ್ನೋಟ ಕಂಗೆಡಿಸೆ ।
ನದಿಯ ದಡ ಕಾಣುವುದೆ? – ತೊದಲು ಮಾತು ॥ (೭)

ಭಗವಂತ ತಾಯ್ತಂದೆಯೊಲು ನಮ್ಮನೆಲ್ಲರನು।
ಸೊಗದಿ ಕಾಯುವನೆಂಬ ಭರವಸೆಯು ನಮಗೆ ॥
ಗಗನದಲ್ಕುಳಿತವನು ಮರೆತಿಹನೆ ನಮ್ಮನ್ನು? ।
ಮೊಗ ತಿರುಗಿ ನೋಡುವನೆ? – ತೊದಲು ಮಾತು॥ (೮)

ಭೂ ಗಗನದೆಲ್ಲೆಡೆಯು ವಿಸ್ಮಯದ ದೃಶ್ಯಗಳು ।
ಸಾಗಿಹವು ಮರೆದಿಹವು ಅದ್ಭುತವ ತೋರಿ॥
ಹೀಗೆ ಸೃಷ್ಟಿ ತಾ ತನ್ನಂತರಂಗವ ತೋರಿ ।
ಬೀಗಿಹುದು ಮಾಯೆಯೊಲು – ತೊದಲು ಮಾತು॥ (೯)

ಹರಿದಿಹುದು ಎಲ್ಲೆಡೆಯು ಪರಬ್ರಹ್ಮನಾ ಶಕ್ತಿ ।
ಪರಿಪರಿಯ ರೀತಿಯಲಿ ತೋರಿಹುದು ಸೃಷ್ಟಿ ॥
ನರರ ಪಾತ್ರವದೇನು ಕಾರ್ಯ ಕಾರಣವೇನು? ।
ಅರಿಯದಾಗಿದೆ ಗುರಿಯು – ತೊದಲು ಮಾತು ॥ (೧೦)

ನೋಡಿದೆಡೆಯಲ್ಲೆಲ್ಲ ಮಾರಣಾಂತಿಕ ದೃಶ್ಯ ।
ಬಾಡಿ ಬಸವಳಿದು ಜನ ನೊಂದು ಬೆಂದಿಹರು॥
ಕಾಡುತ್ತಲೆಲ್ಲರನು ರೋಗ ರುಜಿನವ ತರುವ ।
ಪೀಡನೆಗೆ ಕೊನೆಯೆಲ್ಲಿ? – ತೊದಲು ಮಾತು ॥ (೧೧)

ನಾವೆಲ್ಲ ಒಂದೆನುವ ಭಾವವನು ಮರೆಯುತ್ತ ।
ತಾವುಂಟು ಜಗವುಂಟು ಎಂಬ ಭಾವದಲಿ ॥
ಕೋವಿ ಕೈಯಲಿ ಹಿಡಿದು ಕ್ರೌರ್ಯ ಮೆರೆಸುವ ಜನರೆ ।
ದಾವಾಗ್ನಿ ಇದು ಸರಿಯೆ? – ತೊದಲು ಮಾತು ॥ (೧೨)

*****

ಸಮಾಜ ಸೇವೆ ಹಾಗೂ ರಾಜಕಾರಣ

- ಜೀವಿ.ಹೆಗಡೆ

ಸಮಾಜ ಸೇವೆ ಹಾಗೂ ರಾಜಕಾರಣ ಇವು ಒಂದೇ ಅಲ್ಲದೇ ಇದ್ದರೂ ಒಂದಕ್ಕೊಂದು ಪೂರಕವಾದವುಗಳು. ಹಾಗಂತ ಒಂದೇ ನಾಣ್ಯದ ಎರಡು ಮುಖಗಳ ಹಾಗಲ್ಲ. ಸಮಾಜ ಸೇವೆ ಮಾಡುವವರನ್ನೆಲ್ಲಾ ಒಬ್ಬ ರಾಜಕಾರಣಿ ಅಂತ ಕರೆಯುವದೋ ಅಥವಾ ರಾಜಕಾರಣಿಯನ್ನು ಸಮಾಜಸೇವಕ ಅಂತಲೋ ಗುರುತಿಸುವದೋ ಸರಿಯಲ್ಲ. ಸಮಾಜಸೇವೆಯನ್ನು ಮಾಡುವವರು ರಾಜಕಾರಣದಲ್ಲಿ ಮಿಂಚುವದು ಸಾಧ್ಯ. ಹಾಗೆಯೇ ರಾಜಕಾರಣಿಗಳಿಗೆ ಸಮಾಜ ಸೇವೆ ಮಾಡುವದು ಅನುಕೂಲ.

ಜನರಿಗೆ ಉಪಕಾರವಾಗುವ ಹಾಗೆ ಅಥವಾ ಅನುಕೂಲವಾಗುವ ಹಾಗೆ ನಡೆದುಕೊಳ್ಳುವದು ಸಮಾಜಸೇವೆ. ತಾನೇ ಸ್ವತಃ ದುಡಿದು ಅಥವಾ ಬೇರೆಯವರ ಸಹಾಯವನ್ನು ಪಡೆದು ಜನರಿಗೆ ಅನುಕೂಲವಾಗುವ ಹಾಗೆ ನಡೆದುಕೊಳ್ಳಬಹುದು. ಇಲ್ಲಿ ಸಮಾಜಸೇವಕನನ್ನು ಅನುಸರಿಸುವವರು ಹಾಗೂ ಅವನ ಕೆಲಸಕ್ಕೆ ಬೆಂಬಲ ಕೊಡುವವರು ಸ್ವತಂತ್ರರು. ಯಾವುದೇ ಸಂದರ್ಭದಲ್ಲಿ ಅವನನ್ನು ಬಿಡಬಹುದು ಅಥವಾ ಕೂಡಿಕೊಳ್ಳಬಹುದು.

ಸಮಾಜ ಸೇವಕನನ್ನು ಅನುಸರಿಸುವವರು ಅವನು ಕೈಗೆತ್ತಿಕೊಂಡ ಕಾರ್ಯವ್ಯಾಪ್ತಿ ಹಾಗೂ ಸ್ಥಳವ್ಯಾಪ್ತಿಯನ್ನು ಅವಲಂಬಿಸಿರುತ್ತಾರೆ. ಒಂದು ಊರಿನಿಂದ ಹಿಡಿದು ರಾಷ್ಟ್ರದ ತನಕ ಬೇರೆ ಬೇರೆ ಕಾರಣಗಳಿಗಾಗಿ ಮುಂದೆ ನಿಲ್ಲುವವರಿದ್ದಾರೆ. ಧಾರ್ಮಿಕ, ಭಾಷಿಕ, ಒಟ್ಟೂ ಸಮಾಜ, ಇವುಗಳ ಅನುಕೂಲಗಳನ್ನು ಗಮನಿಸಿ ವ್ಯಕ್ತಿಯು ಸಮಾಜ ಸೇವೆಯ ಸಂಬಂಧದಿಂದ ಮುಂದುವರಿಯುತ್ತಾನೆ.

ಸಮಾಜಕ್ಕೆ ಬೇಕಾದ ಮೂಲ ಅವಶ್ಯಕತೆಗಳಾದ ಶಾಲೆ-ಕಾಲೇಜುಗಳು, ರಸ್ತೆ-ಮೈದಾನಗಳು, ಆಸ್ಪತ್ರೆ ಮುಂತಾದ ವೈದ್ಯಕೀಯ ಅನುಕೂಲತೆಗಳು, ನೀರಾವರಿಯೇ ಮೊದಲಾದ ಕೃಷಿಗೆ ಸಂಬಂಧಿಸಿದ ವಿಷಯಗಳು, ಸಾರಿಗೆ ವ್ಯವಸ್ಥೆ, ಅತಿವೃಷ್ಟಿ-ಅನಾವೃಷ್ಟಿಗೆ ಸಂಬಂಧಿಸಿದ ಅನುಕೂಲ, ಅನನುಕೂಲಗಳು, ಮುಂತಾದವು ಸಮಗ್ರವಾದ ಸಮಾಜಕ್ಕೆ ಸಂಬಂಧಿಸಿದಂತವುಗಳು.

ಇನ್ನು ಸಮಾಜದಲ್ಲಿ ಬೇರು ಬಿಟ್ಟಿರಬಹುದಾದ ಕೆಡುಕುಗಳನ್ನು, ದುಷ್ಟ ಶಕ್ತಿಗಳನ್ನು, ಅಸಮಾನತೆಗಳನ್ನು ಹೋಗಲಾಡಿಸಲು ಜನಜಾಗ್ರತೆಗೊಳಿಸಲು ಸಮಾಜ ಸುಧಾರಕನಾಗಿ ಸಮಾಜ ಸೇವೆ ಮಾಡುವವರಿದ್ದಾರೆ. ಇಂಥವರು ಸಮಾಜದಲ್ಲಿಯೇ ಕೆಲವರು ಎನ್ನುವದಕ್ಕಿಂತ ಹಲವರನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ. ಇಂತಹ ಸಮಾಜ ಸೇವಕರನ್ನು ಬೆಂಬಲಿಸುವವರ ಪ್ರಮಾಣವೂ ಕಡಿಮೆ. ಎಷ್ಟೋ ಸಲ ಸಾಮಾಜಿಕವಾದ ಘರ್ಷಣೆಯನ್ನೂ ಎದುರಿಸಿ ರಕ್ಷಣೆಗೆ ಪ್ರಭುತ್ವದ ಮೊರೆ ಹೋಗ ಬೇಕಾಗುತ್ತದೆ.

ಸರಕಾರದ ಕಾಯಿದೆಯ ದೆಸೆಯಿಂದಾಗಿ ಜನರಿಗಾಗುವ ತೊಂದರೆಗಳನ್ನು ಹೋಗಲಾಡಿಸುವ ಸಲುವಾಗಿಯೂ ಕೆಲವು ಸಮಾಜ ಸೇವಕರು ಮುಂದಾಗುತ್ತಾರೆ. ಇಂತವರು ನೇರವಾಗಿ ಪ್ರಭುತ್ವವನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಜನಬೆಂಬಲದ

ಜೊತೆಗೆ ಕಾಯಿದೆಯ ಅವಲಂಬನವನ್ನೂ ಸಮಾಜ ಸೇವಕನು ಪಡೆಯಬೇಕಾಗುತ್ತದೆ. ಆದರೆ ಇಲ್ಲಿ ರಾಜಕೀಯ ಕಾರಣಕ್ಕಾಗಿ ಇಂತಹ ಸಮಾಜ ಸೇವಕರನ್ನು ವಿರೋಧಿಸವವರೂ ಇರುತ್ತಾರೆ.

ಧಾರ್ಮಿಕ ಹಾಗೂ ಭಾಷಿಕ ವಿಷಯಗಳಿಗೆ ಸಂಬಂಧಿಸಿ ಸೇವೆ ಮಾಡಲು ಮುಂದೆ ಬರುವವರು ತಮ್ಮ ಸೇವೆಯ ವ್ಯಾಪ್ತಿಯನ್ನು ಮಿತಗೊಳಿಸಿಕೊಂಡಿರುತ್ತಾರೆ. ಬೇರೆ ಧರ್ಮದ ಹಾಗೂ ಭಾಷೆಯ ಜನರಿಗೆ ತೊಂದರೆಯಾಗದ ಹಾಗೆ ಕೇವಲ ತಮ್ಮ ಗುಂಪಿಗೆ ಅನುಕೂಲವಾಗುವ ಹಾಗೆ ಮಾತ್ರ ಸಂಘಟನೆಯನ್ನು ಸೀಮಿತಗೊಳಿಸಿದಲ್ಲಿ ಪ್ರಾರಂಭದಲ್ಲಿ ಜನಬೆಂಬಲ ದೊರೆಯುವದು ಸರಿ. ಆದರೆ ಕ್ರಮೇಣ ತೀವ್ರವಾದಿಗಳು ಎನ್ನಿಸಿಕೊಳ್ಳುವವರು ಈ ಚಳುವಳಿಯನ್ನು ಆಕ್ರಮಿಸಿ ಮೂಲ ಉದ್ದೇಶವನ್ನೇ ಹಾಳುಗೆಡವಿ ಮೂಲ ಸಮಾಜ ಸೇವಕನನ್ನು ಮೂಲೆಗೆ ಸರಿಸುವದುಂಟು.

ಸಮಾಜ ಸೇವಕನಾದವನು ಆತ್ಮತೃಪ್ತಿಗಾಗಿ ಸೇವೆ ಮಾಡಲು ಪ್ರಾರಂಭಿಸಿದರೂ ಕ್ರಮೇಣ ಯಶಸ್ಸಿನ ಹಂಬಲ ಹೆಚ್ಚಾಗುತ್ತದೆ. ಎಲ್ಲಾ 'ಅಮಲು' ಗಳಲ್ಲಿ 'ಯಶಸ್ಸಿನ ಅಮಲೇ' ಹೆಚ್ಚು ಹಾನಿಕಾರಕ ಎನ್ನುವದುಂಟು. ಯಶಸ್ಸನ್ನು ಹೆಚ್ಚಿಸಿಕೊಳ್ಳಲೋ ಅಥವಾ ಉಳಿಸಿಕೊಳ್ಳಲೋ ತನ್ನ ಹೊಗಳುಭಟರನ್ನು ಹಾಗೂ ಅನುಯಾಯಿಗಳನ್ನು ಬೆಳೆಸಬೇಕು ಎನ್ನುವ ಹಟಕ್ಕೆ ಬೀಳುವದೂ ಉಂಟು. ಅದಿಲ್ಲವಾದಲ್ಲಿ ತನ್ನನ್ನು ಅನುಸರಿಸಿ ಬಂದ ಹಿಂಬಾಲಕರೊಬ್ಬರು ಮುಂದಾಳ್ತನವನ್ನು ಕಸಿದುಕೊಳ್ಳುವ ಸಂಭವವೂ ಇರುತ್ತದೆ.

ಸಮಾಜ ಸರಿಯಾಗಿ ನಡೆಯಲು ಒಂದು ಅಧಿಕೃತವಾದ ಹಾಗೂ ಸಮರ್ಥವಾದ ವ್ಯವಸ್ಥೆಯ ಅವಶ್ಯಕತೆ ಇದೆ. ಇದೇ ಆಡಳಿತ ವ್ಯವಸ್ಥೆ. ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುವ ಪ್ರಕ್ರಿಯೆ ಹಾಗೂ ಆಡಳಿತವನ್ನು ನಡೆಸುವ ಸಲುವಾಗಿನ ಪೈಪೋಟಿಯೇ ರಾಜಕಾರಣ. ಆಡಳಿತವನ್ನು ಸರಿಯಾಗಿ ನಡೆಸಲು ವಿಧಿ ನಿಷೇಧಗಳುಳ್ಳ ನಿಯಮಾವಳಿಗಳಿರುತ್ತವೆ. ಈ ನಿಯಮಗಳನ್ನು ಅನುಷ್ಠಾನಗೊಳಿಸಲು ಸಮರ್ಪಕವಾದ ಹಾಗೂ ಅಧಿಕಾರಯುತ ಸರಕಾರೀ ಯಂತ್ರಗಳಿರುತ್ತವೆ. ಆದುದರಿಂದ ರಾಜಕಾರಣದ ಮೂಲಕ ನಡೆಸಲ್ಪಡುವ ಸಮಾಜಸೇವೆಗೆ ಆಡಳಿತಯಂತ್ರದ ಸಹಾಯ ಹಾಗೂ ರಕ್ಷಣೆ ಎರಡೂ ದೊರೆಯುತ್ತವೆ.

ಆದುದರಿಂದ ಸಮಾಜಸೇವೆ ಮಾಡಲು ಒಂದು ಕ್ರಮಬದ್ಧವಾದ ವ್ಯವಸ್ಥೆಯ ಅವಶ್ಯಕತೆ ಇರುವದರಿಂದ ನಮಗೆ ಆಡಳಿತದಲ್ಲಿ ಪಾಲು ಬೇಕು ಅಂತ ಕೆಲವರು ಸಮಾಜಸೇವಕರು 'ರಾಜಕಾರಣದಲ್ಲಿ' ಸೇರಲು ಮನಸ್ಸು ಮಾಡುತ್ತಾರೆ. ಕೆಲವು ಮಟ್ಟಿಗೆ ಇದು ಸಹಜವೂ ಹೌದು.

ಬೇರೆ ಬೇರೆ 'ಇಸಂ' ಗಳ ಜನರು ತಮ್ಮ ಜನರೇ ರಾಜಕಾರಣದ ಅಧಿಕಾರವನ್ನು ಹೊಂದಬೇಕು ಎನ್ನುವದೂ ಕೂಡ ತಮ್ಮ ನೀತಿಯನ್ನು ಪರಿಣಾಮಕಾರಿಯಾಗಿ ನಡೆಸಲು ಅನುಕೂಲವಾಗಲಿ ಅಂತಲೇ.

ಇಲ್ಲಿ ಒಮ್ಮೆ ಅಧಿಕಾರ ಸಿಕ್ಕಲ್ಲಿ ಅವರ ಹೇಳಿಕೆಯನ್ನು ಜನರು ನಡೆಸಲೇಬೇಕು. ಜನರಿಗೆ ಒಪ್ಪುವ ಅಥವಾ ಒಪ್ಪದಿರುವ ಸ್ವಾತಂತ್ರ್ಯ ದೊರೆಯುವದಿಲ್ಲ. ಆಡಳಿತ ಯಂತ್ರವನ್ನು ಬದಲಾಯಿಸಲು ಚುನಾವಣೆಯ ತನಕ ಕಾಯಬೇಕಾಗುತ್ತದೆ.

ಅಧಿಕಾರ ನಡೆಸಿ ಸಾಮಾಜಿಕ ಮನ್ನಣೆ ಪಡೆಯುವ ಇಚ್ಛೆಯಿಂದಲೋ ಅಥವಾ ನಿಜವಾದ ಸಮಾಜ ಸೇವೆಯ ಆಶಯದಿಂದಲೋ ರಾಜಕಾರಣ ನಡೆಸುವವರು ಕೆಲವರಿರುತ್ತಾರೆ. ಮೊದಮೊದಲು ಕೇವಲ ಸಮಾಜಸೇವೆ ಅಂತ ಹೇಳುವ ಜನರೂ ಕ್ರಮೇಣ ರಾಜಕಾರಣವನ್ನು ಅಪೇಕ್ಷಿಸಲು ಇದೂ ಒಂದು ಕಾರಣ.

*****

ಭವಿಷ್ಯದ ಕನ್ನಡ

ಮನ್ವಂತರ

– ಎಸ್.ಶಂಕರ ರಾವ್

ಚೆಂದದ ಅನನ್ಯ ಶಾಸ್ತ್ರೀಯ ನುಡಿ
ಅಂದದ ಸತ್ವಯುತ ಭಾಷೆಯಂದದಿ ಹೊರಹೊಮ್ಮಲಿ/
ಮಾತೃ ಭಾಷೆಯು ಆತ್ಮ ಭಾಷೆಯಾಗುತ
ಮತ್ತೆ ಬೆಳೆಯಲಿ ಬೆಳಗಲಿ ಭವಿಷ್ಯದಲಿ//

ಕಲಿಕೆಯ ಭಾಷೆಯಾಗಿ ವೈದ್ಯ ವಿಜ್ಞಾನ ಕ್ಷೇತ್ರದಲಿ
ವಿಜೃಂಭಿಸಲಿ ಆಡಳಿತದ ಮುಖ್ಯ ಸೂತ್ರದಲಿ/
ಕನ್ನಡವಿರಲಿ ಎಲ್ಲರ ಮನೆ ಮನದಲಿ
ಭುವನೇಶ್ವರಿಯರ್ಚನೆಯು ಶ್ರೀಗಂಧ ಸೌರಭದಲಿ//

ಅಷ್ಟ ದಿಕ್ಕುಗಳ ವೈವಿಧ್ಯತೆಯು
ಅಭಿವ್ಯಕ್ತವಾಗಲಿ ಭಾಷೆಯ ರೂಪದಲಿ/
ಕನ್ನಡದ ಸ್ಥಿತಿ ಗತಿಯ ಭವ್ಯ ಇತಿಹಾಸವು
ಮುಂದಿನ ಪೀಳಿಗೆಯ ಭಾಷಾಪ್ರೇಮದ ಬುನಾದಿಯಾಗಲಿ//.

ಭವಿಷ್ಯದ ಕನ್ನಡವು ಭಾವನೆಗಳ ಸಂಗಮದಿ
ಸೌಮ್ಯತೆಯ ಸರಹದ್ದು ದಾಟಿ ಆತ್ಮವಿಶ್ವಾಸದಿ/
ಅನ್ಯ ಭಾಷೆಗಳ ಒಳಿತ ತನ್ನ ಉದರದಲಳವಡಿಸಿ
ಗಮ್ಯದೆಡೆಗೆ ಸಾಗಲಿ ಆವಿಷ್ಕಾರದ ಮನ್ವಂತರದಲಿ//.

*****

ನಗೆ ಲೇಖನ

ಸಾಹಿತಿ ಬುಕ್ಕಪ್ಪ ಮತ್ತು ಪತ್ನಿ ಶಾಲು

-ನಾಗರತ್ನ ಚಂದ್ರಶೇಖರ

ಕಟ್ಟೆಚ್ಚರ ಕನ್ನಡ ಸಂಘದವರು ಕನ್ನಡ ರಾಜ್ಯೋತ್ಸವಕ್ಕೆ ಹೆಸರಾಂತ ಸಾಹಿತಿಯೊಬ್ಬರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಬೇಕೆಂದು ತೀರ್ಮಾನಿಸಿದ್ದರು. ಈಗಾಗಲೇ ಕರ್ನಾಟಕದ ಹೆಚ್ಚು ಕಡಿಮೆ ಎಲ್ಲಾ ಖ್ಯಾತನಾಮರೂ ಬಂದು ಹೋಗಿದ್ದರು. ಹಾಗಾಗಿ ಇದುವರೆಗೂ ಯಾರ ಕಣ್ಣಿಗೂ ಬೀಳದೆ ಎಲೆಮರೆಯ ಕಾಯಿಯಂತಿರುವವರನ್ನೇ ಕರೆಸಬೇಕೆಂದು ಸಿದ್ದರಾಜು ಪಟ್ಟು ಹಿಡಿದಿದ್ದ. ಆಗ ಅವನಿಗೆ ನೆನಪಾದದ್ದೇ ಬುಕ್ಕಪ್ಪ ಮಾಸ್ತರು. ಹೈಸ್ಕೂಲಿನಲ್ಲಿ ಕನ್ನಡ ಪಾಠ ಅವರಿಂದ ಕಲಿತ ಮೇಲೇ ಅವನು ಕನ್ನಡದ ಕಟ್ಟಾಭಿಮಾನಿಯಾದದ್ದು. ಗುರು ಕಾಣಿಕೆ ಕೊಡಲು ಈಗ ಸರಿಯಾದ ಸಮಯ ಎನಿಸಿತು ಅವನಿಗೆ. ಜೊತೆಗೆ ಊರಿನವರೆಂಬ ಅಭಿಮಾನ. ಸದ್ಯ ಅವರು ನಿವೃತ್ತರಾದ ಮೇಲೆ ಬೆಂಗಳೂರಿನ ಗೋರಿಪಾಳ್ಯದಲ್ಲೇ ಇದ್ದಾರೆ ಎಂದು ತಿಳಿದುಕೊಂಡ. ಬುಕ್ಕಪ್ಪಮಾಸ್ತರರ ಕಾದಂಬರಿಯೊಂದು ಚಲನಚಿತ್ರವಾಗಿಯೂ ಹೆಸರು ಮಾಡಿತ್ತು. ಅನೇಕ ಚಲನಚಿತ್ರಗಳಿಗೆ ಸಂಭಾಷಣೆ ಬರೆಯುವ ಅವರ ಬಗ್ಗೆ ಸಿದ್ದರಾಜುವಿನ ಗೆಳೆಯರಿಗೆ ತುಂಬಾ ಅಭಿಮಾನವೂ ಇತ್ತು.

ಗೋರಿಪಾಳ್ಯದ ಅನೇಕ ಸುಂದರ ಮನೆಗಳನ್ನು ಜಾಲಾಡಿ ಅವರ ವಿಳಾಸ ಪತ್ತೆಯಾಗದೆ ಪೆಚ್ಚುಮೋರೆ ಹಾಕಿಕೊಂಡು ನಿಂತಿದ್ದ ಸಿದ್ದರಾಜು ಮತ್ತು ಗೆಳೆಯರ ತಂಡಕ್ಕೆ ದಾರಿಹೋಕರೊಬ್ಬರು ಆಶಾದೀಪವನ್ನು ತೋರಿಸಿದ್ದರು. 22ನೇ ಕ್ರಾಸಿನಲ್ಲಿ ಡಾ.ಬೂಕಪ್ಪ ಅಂತ ಇದ್ದಾರೆ. ಅವರು ಪ್ರಾಕ್ಟೀಸ್ ಮಾಡ್ತಾ ಇಲ್ಲಾಂತ ಕಾಣುತ್ತೆ! ಅಷ್ಟು ಮಾಹಿತಿ ಸಾಕಿತ್ತು, ಡಾ.ಬುಕ್ಕಪ್ಪ ಎನ್ನುವ ಬೋರ್ಡ್ ನೇತಾಡುತ್ತಿದ್ದ ಮನೆ ಮುಂದೆ ಹಾಜರಾಗಿದ್ದರು. ಅದೊಂದು ಸಾಧಾರಣ ಹೆಂಚಿನ ಮನೆ. ಸಾಹಿತಿ ಬುಕ್ಕಪ್ಪ ಮೇಷ್ಟ್ರ ಕಾದಂಬರಿಯಲ್ಲಿ ಬರುವ ವರ್ಣನೆಗಳಿಗೂ ಇಲ್ಲಿನ ವಾತಾವರಣಕ್ಕೂ ಯಾವುದೇ ಹೋಲಿಕೆ ಸಿಗುತ್ತಿರಲಿಲ್ಲ. ಯಾರಿಗೂ ಇಂಜೆಕ್ಷನ್, ಔಷಧಿ ಕೊಡದೆ ಇರುವ ಈ ನಕಲಿ ವೈದ್ಯರನ್ನು ಒಮ್ಮೆ ನೋಡೇಬಿಡುವ ಎಂದು ಗೇಟು ತೆಗೆದು ಒಳಗೆ ನುಗ್ಗೇಬಿಟ್ಟರು. ಯಾವುದೋ ಕಥಾನಾಯಕಿಯ ಸುಂದರ ಮುಖದ ಕಲ್ಪನೆಯಿಂದಲೇ ಬಾಗಿಲಲ್ಲಿ ನಿಂತವರಿಗೆ ಬಾಗಿಲು ತೆಗೆದದ್ದು ಮೊಂಡು ಮೂಗಿನ, ಉಬ್ಬು ಹಲ್ಲಿನ, ಸಾದಾ ಮೈಗಪ್ಪಿನ ಚೀಟಿ ಸೀರೆಯ ಮಧ್ಯ ವಯಸ್ಸಿನ ಗೃಹಿಣಿ. ಸಿದ್ದರಾಜುವಿಗೆ ಈ ಮುಖವನ್ನು ಊರಲ್ಲಿ ಅನೇಕ ವರ್ಷಗಳ ಹಿಂದೆ ನೋಡಿದ್ದ ನೆನಪು ಅಲ್ಪಸ್ವಲ್ಪ ಇದ್ದಿದ್ದರಿಂದ ಧೈರ್ಯವಾಗಿ 'ಬುಕ್ಕಪ್ಪ ಮೇಷ್ಟ್ರು ಇದ್ದಾರಾ ಅಮ್ಮ' ಎಂದ.

"ಅವರು ರೇಷನ್ ಅಂಗಡಿಯಲ್ಲಿ ಕ್ಯೂ ನಿಂತಿದ್ದಾರೆ, ಎಷ್ಟು ಸಮಯ ಹಿಡಿಯತ್ತೊ ಗೊತ್ತಿಲ್ಲ, ಏನಾಗಬೇಕಿತ್ತು ಹೇಳಿ!"

"ನಾನೂ ಕೂಡ ಅವರೂರಿನವನೇ, ಈ ಸಾರಿ ಕನ್ನಡ ರಾಜ್ಯೋತ್ಸವಕ್ಕೆ ಮೇಷ್ಟ್ರನ್ನ ಆಹ್ವಾನಿಸೋಣ ಅಂತ ಬಂದಿದ್ದೇವೆ".

“ಹೌದಾ, ತುಂಬಾ ಸಂತೋಷ, ಒಳಗೆ ಬನ್ನಿ, ಮಾತಾಡೋಣ”, ಬಾಗಿಲು ಪೂರ್ತಿ ತೆಗೆದದ್ದೇ ತಡ, ಸಿದ್ದರಾಜು ಅಂಡ್ ಕಂಪನಿ ಒಳಗೆ ದಢಕ್ಕನೆ ನುಗ್ಗಿ ಸುತ್ತಾಟದ ಸುಸ್ತನ್ನೆಲ್ಲಾ ಕಳೆದುಕೊಳ್ಳಲು ಅಲ್ಲಿದ್ದ ಹಳೇ ಮಂಚ ಕಮ್ ದಿವಾನದ ಮೇಲೆ ಕೂತೇ ಬಿಟ್ಟರು.

“ಏ ಸಿದ್ದರಾಜು, ಡಾ.ಬುಕ್ಕಪ್ಪ ಅಂತ ಬೋರ್ಡ್ ಇತ್ತಲ್ಲ, ಇವ್ರೇನಾ ಆ ಸಾಹಿತಿ ಅಂತ ಕೇಳೋಲ್ವಾ”, ಪಿಸುಗುಟ್ಟಿದ ಕೇಶವ.

“ಲೋ, ನೋಡಿದ್ರೆ ಗೊತ್ತಾಗೊಲ್ವೆನೋ, ಮನೆಯ ಕಿಟಕಿ, ಬಾಗಿಲು, ನಾವು ಕೂತಿರೋ ಮಂಚ, ಎಲ್ಲಾ ಶಾಲುಗಳಿಂದ ಅಲಂಕೃತವಾಗಿದೆಯಲ್ಲ, ಇವೆಲ್ಲಾ ಸಾಹಿತಿಗಳ ಸನ್ಮಾನದಲ್ಲಿ ಸಿಕ್ಕ ಶಾಲುಗಳಲ್ಲದೆ ಮತ್ತೇನೂಂತೀಯಾ!” ಕೇಶವನ ಕಿವಿಯಲ್ಲಿ ಗಟ್ಟಿಯಾಗೇ ಹೇಳಿದ ರಾಘವ. ಹಜಾರಕ್ಕೆ ಸೇರಿದಂತಿದ್ದ ಬೆಡ್ ರೂಮಿನ ಅರ್ಧ ತೆರೆದ ಬಾಗಿಲಿಂದ ಮೂರು ಮುದ್ದಾದ ತರುಣಿಯರ ಮುಖಗಳು ಇಣುಕಿ ನೋಡುತ್ತಿದ್ದವು. ಆ ಕೋಣೆಯಲ್ಲಿ ಹಾಸಿಗೆ, ಬೆಡ್ ಶೀಟ್, ಹೊದಿಕೆಗಳು ಶಾಲುಗಳೇ ಆಗಿದ್ದರೆ ಆಶ್ಚರ್ಯವಿಲ್ಲ ಎಂದುಕೊಂಡ ಕೇಶವ. ಅಷ್ಟರಲ್ಲಿ ನೀರಿನ ತಂಬಿಗೆ, ಲೋಟಗಳನ್ನು ಹಿಡಿದು ಆಕೆ ಹೊರಗೆ ಬಂದರು.

"ಬಿಸಿಲಲ್ಲಿ ಬಂದಿದ್ದೀರಿ, ನೀರಾದರೂ ಕುಡಿಯಿರಿ, ನಮ್ಮ ಯಜಮಾನರು ಬಂದ ಮೇಲೆ ಸಕ್ಕರೆ ತಂದರೆ ಟೀನೋ, ಕಾಫಿನೋ ಮಾಡಬಹುದು” ಎಂದರು.

“ಮೇಷ್ಟ್ರು ಗೋರಿಪಾಳ್ಯದಲ್ಲಿದ್ದಾರೆ ಅಂತ ಗೊತ್ತಾಯ್ತು, ಹಾಗೇ ಹುಡುಕೋಂತ ಬಂದ್ವಿ, ಆದ್ರೆ ಬೋರ್ಡ್ ನೋಡಿ ಡಾ.ಬೂಕಪ್ಪ ಅಂತ ಇತ್ತಲ್ಲ, ಸ್ವಲ್ಪ ಅನುಮಾನ ಬಂತು,” ಸಿದ್ದರಾಜು ಮೆಲ್ಲಗೆ ಮಾತು ಪ್ರಾರಂಭಿಸಿಯೇಬಿಟ್ಟ.

“ಹೌದಪ್ಪ, ಎಂ.ಬಿ.ಬಿ.ಎಸ್. ಡಾಕ್ಟ್ರು ಅಂತ ತುಂಬಾ ಜನ ಔಷಧಿಗೇಂತ ಬಾಗಿಲು ತಟ್ತಾನೆ ಇರ್ತಾರೆ. ಹೋದ ವರ್ಷ ಅದ್ಯಾವುದೋ ಯೂನಿವರ್ಸಿಟಿಯವರು ಡಾಕ್ಟರೇಟ್ ಕೊಟ್ಟರು, ದುಡ್ಡಿಲ್ಲ, ಕಾಸಿಲ್ಲ. ಔಷಧಿ, ಇಂಜೆಕ್ಷನ್ ರಗಳೆ ಇಲ್ಲ, ಇರ್ಲಿ ಬಿಡು ಅಂತ ಇವರೂ ಗೌರವದಿಂದಲೇ ಅದನ್ನು ತೆಗೆದುಕೊಂಡು ಹೆಸರಿನ ಮುಂದೆ ಅಲ್ಲ ಹಿಂದೆ ಹಾಕ್ಕೊಂಡ್ರು ಅಷ್ಟೆ”, ಅಕೆ ಸಮಜಾಯಿಷಿ ಕೊಟ್ಟರು.

“ಅರ್ಥ ಆಯಿತು ಬಿಡಿ, ನಮ್ಮ ಮೇಷ್ಟ್ರಿಗೆ ಮೊದ್ಲಿಂದ ಡಾಕ್ಟರ್ ಆಗ್ಬೇಕಂತ ಆಸೆ ಇತ್ತಂತೆ, ನಾನು ಹೈಸ್ಕೂಲ್ನಲ್ಲಿದ್ದಾಗ ಆಗಾಗ ಹೇಳ್ತಾ ಇದ್ರು, ಒಳ್ಳೇ ನಂಬರ್ ತೆಗೀರಿ, ಕರೆದು ಸೀಟು ಕೊಡ್ತಾರೆ ಅಂತ. ನಂಬರು, ಹಣ ಎರಡೂ ಇಲ್ಲದ ಹಳ್ಳಿ ಹುಡುಗನಿಗೆ ಕೊನೆಗೆ ಕನಸು ಮಾತ್ರ ಗಟ್ಟಿಯಾಗಿ ಉಳೀತು ಅನ್ನೋರು. ಈಗ ಭಾರೀ ಸಂತೋಷ ಆಗಿರಬೇಕಲ್ಲರಿ”,

ಸಿದ್ದರಾಜುವಿನ ಹಳೇ ನೆನಪುಗಳು ಉಕ್ಕಿ ಹರಿಯಲು ಆಕೆ ಬಿಡಲೇ ಇಲ್ಲ. “ಅಯ್ಯೋ, ಈ ಡಾಕ್ಟರುಗಿರಿಯಿಂದ ಹೊಟ್ಟೆ ಬಟ್ಟೆ ತುಂಬುತ್ತೇನಪ್ಪ! ರೋಗಿ ಇರಲಿ ಮನೆಯವರಿಗೂ ಔಷಧ ಬರೆದು ಕೊಡಲಾಗದ ಈ ಡಾಕ್ಟರುಗಿರಿ, ಬಿರುದುಬಾವಲಿ ಯಾತಕ್ಕೆ?

ಎಂ.ಬಿ.ಬಿ.ಎಸ್. ಪಾಸ್ ಮಾಡಿ ಡಾಕ್ಟರ್ ಅಂತಾನಾದ್ರೂ ಆಗಿದ್ದಿದ್ರೆ ಕೊನೆಪಕ್ಷ ನಮ್ಮ ಮೂವರು ಹೆಣ್ಣುಮಕ್ಕಳಿಗೆ ಒಳ್ಳೇ ಗಂಡುಗಳಾದ್ರು ಸಿಗಬಹುದಿತ್ತು".

ಸಿದ್ದರಾಜು ಅಂಡ್ ಕಂಪನಿಗೆ ಮೇಷ್ಟ್ರ ಹೆಂಡತಿಯ ಮಾತುಗಳಿಂದ ಮೊದಲಿಗೆ ಶಾಕ್ ಆಯಿತಾದರೂ ಆಕೆಯ ಮುಂದುವರಿದ ನುಡಿಮುತ್ತುಗಳನ್ನು ಕೇಳುತ್ತಾ, ಕೇಳುತ್ತಾ ಬೆವರೊರಸಿಕೊಳ್ಳುವಂತಾಗಿತ್ತು.

"ನೋಡಪ್ಪ ಸಿದ್ದರಾಜು, ನಿಮ್ಮ ಮೇಷ್ಟ್ರು ಸನ್ಮಾನಕ್ಕೆ ಖಂಡಿತಾ ಬರ್ತಾರೆ, ಒಳ್ಳೇ ಭಾಷಣಾನೂ ಮಾಡ್ತಾರೆ, ಯೋಚನೆ ಮಾಡಬೇಡಿ. ಆದರೆ ಅದಕ್ಕೆ ಮೊದಲು ನನ್ನದು ಕೆಲವು ಕಂಡೀಷನ್ಗಳಿವೆ, ಅವಕ್ಕೆ ನೀವು ಒಪ್ಪಿಕೊಳ್ಳಬೇಕು".

"ಹೇಳೀಮ್ಮಾ, ಸನ್ಮಾನ ಅಂದ ಮೇಲೆ ಹಾರ, ತುರಾಯಿ, ಶಾಲು, ನೆನಪಿನ ಕಾಣಿಕೆ ಅಂತ ಸಾಕಷ್ಟು ಖರ್ಚು ಮಾಡ್ತೀರಲ್ವೆ?"

"ಹೌದಮ್ಮಾ, ತುಂಬಾ ಗ್ರಾಂಡ್ ಆಗಿ ಅದನ್ನೆಲ್ಲಾ ಏರ್ಪಾಟು ಮಾಡ್ತೀವಿ, ಅದಕ್ಕಾಗಿ ಕನಿಷ್ಟ ಅಂದರೂ ಒಂದೆರಡು ಸಾವಿರವಾದರೂ ಖರ್ಚು ಮಾಡ್ತೀವಿ, ನೀವೇನೂ ಯೋಚನೆ ಮಾಡಬೇಡಿ".

"ಅದನ್ನೇ ಹೇಳ್ಬೇಕೂಂತಿದ್ದೆ, ಈ ಒಣಗಿ ಹೋಗೋ ಹೂಹಾರಗಳು, ಕೆಲಸಕ್ಕೆ ಬಾರದ ಮೊಮಂಟೊಗಳು, ಉಡಲು ಬಾರದ ಶಾಲುಗಳು ಯಾವತ್ತೂ ಹೊಟ್ಟೆಬಟ್ಟೆ ತುಂಬಿಸಲ್ಲ, ಅದಕ್ಕಾಗಿ ಖರ್ಚು ಮಾಡುವ ಹಣವನ್ನು ಟಿಎ ಎಲ್ಲಾ ಸೇರಿಸಿ ಜೊತೆಯಲ್ಲಿ ಕವರಲ್ಲಿ ಹಾಕಿ ಕೊಟ್ಟುಬಿಡಿ".

"ಅಲ್ಲಮ್ಮ, ಇದೆಲ್ಲಾ ಇಲ್ಲದಿದ್ದರೆ ಸಮಾರಂಭ ಕಳೆ ಕಟ್ಟುವುದಿಲ್ಲ, ಈಗ ಜನ ಅದ್ದೂರಿ, ಆಡಂಬರ ಇಲ್ಲದಿದ್ದರೆ ಮರ್ಯಾದೆನೇ ಸಿಗೊಲ್ಲ ಅಂತಾರೆ".

"ಅದೆಲ್ಲಾ ನಿಮ್ಮ ಹೊಟ್ಟೆ ತುಂಬಿದ ರಾಜಕಾರಣಿಗಳನ್ನು ಕರೆದಾಗ ಮಾಡಿಕೊಳ್ಳಿ, ಬೇಡಾಂದವರು ಯಾರು? ನಮ್ಮನೆ ನೋಡಿದ್ರಲ್ಲ, ಎಲ್ಲಾ ಕಿಟಕಿ, ಬಾಗಿಲು, ಹಾಸಿಗೆ, ಹೊದಿಕೆ ಎಲ್ಲಾ ಶಾಲುಮಯವಾಗಿದೆ. ಇದರಿಂದ ಪ್ಯಾಂಟು, ಶರ್ಟು, ಲಂಗ, ರವಿಕೆ ಹೊಲಿಸಲಾಗುತ್ತದೆಯೆ? ಹಾರ, ತುರಾಯಿಗಳಿಂದ ಹೊಟ್ಟೆ ತುಂಬುವುದಿಲ್ಲ. ಇನ್ನು ಆ ಮೊಮೆಂಟೊಗಳೋ ಇಡಲು ಜಾಗವಿಲ್ಲದೆ ಧೂಳು ತುಂಬಿಕೊಂಡು ಒಲೆ ಉರಿಸಲೂ ಬಾರದಂತಾಗುತ್ತದೆ. ನಿಮ್ಮ ಮೇಷ್ಟ್ರು ನಿವೃತ್ತಿಯ ನಂತರ ಶಾಲಿನ ಅಂಗಡಿ ಇಡೋವಷ್ಟು ಶಾಲುಗಳಿವೆ. ರೇಷನ್ ಅಂಗಡಿ ಗೋಧಿ, ಅಕ್ಕಿ ತಿಂದರೂ ಅವರ ಕಥೆ, ಕಾದಂಬರಿಯ ನಾಯಕ, ನಾಯಕಿಯರು ಪಂಚತಾರಾ ವೈಭವವನ್ನೇ ಅನುಭವಿಸುತ್ತಾರೆ. ನಾವು ಹೆಂಚಿನ ಮನೆಯಲ್ಲಿ ಸೋರುವ ಸೂರಿನಡಿ ಮಳೆ ಹಾಡು ಹಾಡುತ್ತಿದ್ದರೂ ಬಂಗಲೆಗಳ ಬದುಕಿನಲ್ಲಿ ಓದುಗರನ್ನು ತೇಲಾಡಿಸುತ್ತಾರೆ. ಜಂಜಾಟದ ಬದುಕಿನಲ್ಲಿ ಸಾಯ್ತಾ ಸಾಯ್ತಾ ಸಾಹಿತ್ಯ ರಚನೆ ಮಾಡುವ ಸಾಹಿತಿಗೇನು ಬೇಕು ಎಂದು ಸನ್ಮಾನಿಸುವ ಸಂಘಗಳು ಕೇಳಬೇಕು, ಅಲ್ಲವೆ?"

ಅಬ್ಬಾ! ಎಂಥ ಕಠೋರ ಸತ್ಯವನ್ನು ಹೀಗೆ ಬಿಚ್ಚಿಡುವ ಎದೆಗಾರಿಕೆ ಎಷ್ಟು ಜನ ಸಾಹಿತಿಗಳ ಹೆಂಡತಿಯರಿಗಿದೆ? ಎನಿಸಿತು ಸಿದ್ದರಾಜನಿಗೆ. ಸಾಹಿತಿಯ ವಾಸ್ತವ ಜೀವನದ ಒಂದು ಪಕ್ಷಿನೋಟ ಆ ದಿನ ಕಟ್ಟೆಚ್ಚರ ಕನ್ನಡ ಸಂಘದವರಿಗಾಯಿತು. ಅಷ್ಟರಲ್ಲಿ ರೇಷನ್ ಬ್ಯಾಗುಗಳನ್ನು ಹೊತ್ತು ಬುಕ್ಕಪ್ಪ ಮಾಸ್ಟರ್ ಒಳ ಬಂದರು. ಬೆವರಿಳಿಯುತ್ತಿದ್ದ ಮುಖವನ್ನು ಹೆಗಲ ಮೇಲಿದ್ದ ಟವಲಿನಿಂದ ಒರೆಸಿಕೊಳ್ಳುತ್ತಾ ಅಲ್ಲಿದ್ದವರ ಪರಿಚಯ ಮಾಡಿಕೊಂಡರು. ಶಾಲೂ, ಒಂದು ಚೊಂಬು ತಣ್ಣನೆಯ ನೀರು ತಗೊಂಡು ಬಾ, ಎಂದರು. ಅಂದರೆ ಬುಕ್ಕಪ್ಪ ಮಾಸ್ಟರ್‌ರವರ ಹೆಂಡತಿಯ ಹೆಸರು ಶಾಲು, ಅರ್ಥಾತ್ ಶಾಲಿನಿ, ಶಾಲು ಕಂಡರೆ ಅವರಿಗೇಕೆ ಅಷ್ಟು ಸಿಡಿಮಿಡಿ ಎಂದು ಸಿದ್ದರಾಜನಿಗೆ ಕೂಡಲೇ ಅರ್ಥವಾಯಿತು, ಸವತಿ ಮತ್ಸರ!

"ಸರ್, ನಿಮ್ಮ ಶ್ರೀಮತಿಯವರು ಹೇಳಿದ ಎಲ್ಲಾ ಕಂಡೀಷನ್ಗಳನ್ನು ನಾವು ಒಪ್ಪಿಕೊಂಡಿದ್ದೇವೆ. ನೀವು ದಯಮಾಡಿ ನಮ್ಮ ಕಟ್ಟೆಚ್ಚರ ಕನ್ನಡ ಸಂಘ ಆಚರಿಸುವ ರಾಜ್ಯೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬರಬೇಕು". ಸಿದ್ದರಾಜು ಮೇಷ್ಟ್ರ ಕಾಲಿಗೇ ಬಿದ್ದು ಕೇಳಿಕೊಂಡ. ಹಳೇ ಶಿಷ್ಯನ ನೆನಪು ಬಾರದಿದ್ದರೂ, ಅವನ ಅಭಿಮಾನ ಕಂಡು ಅವರ ಹೃದಯ ತುಂಬಿತು.

"ಸರ್, ನಿಮ್ಮ ಖರ್ಚಾಗದೇ ಉಳಿದಿರುವ ಪುಸ್ತಕಗಳಲ್ಲಿ ನೂರು ಪುಸ್ತಕಗಳನ್ನು ನಮ್ಮ ಸಂಘ ಖರೀದಿಸುತ್ತದೆ. ಅದನ್ನು ಇನ್ನು ಮುಂದೆ ನಮ್ಮ ಅತಿಥಿಗಳಾಗಿ ಬರುವವರಿಗೆ ಹಾರ, ತುರಾಯಿಗಳ ಬದಲಿಗೆ ಕೊಡುತ್ತೇವೆ, ಪುಸ್ತಕದ ಹಣ, ನಿಮ್ಮ ಟಿಎ ಎಲ್ಲಾ ನಗದು ರೂಪದಲ್ಲಿ ನಿಮಗೆ ಸನ್ಮಾನದ ದಿನ ಫಲ ತಾಂಬೂಲಗಳೊಂದಿಗೆ ನೀಡುತ್ತೇವೆ".

ಮೇಷ್ಟ್ರಿಗೆ, ಅವರ ಹೆಂಡತಿ, ಮಕ್ಕಳಿಗೆ ಸಿದ್ದರಾಜುವಿನ ಆಶ್ವಾಸನೆಯ ಮಾತುಗಳನ್ನು ಕೇಳಿ "ಬೂಕರ್" ಪ್ರಶಸ್ತಿಯೇ ಬಂದಷ್ಟು ಸಂತೋಷವಾಯಿತು. ಗೋರಿಪಾಳ್ಯದ ಜನರಿಗೆ ಇದುವರೆಗೂ ಪ್ರಾಕ್ಟೀಸ್ ಮಾಡದ ನಕಲೀ ವೈದ್ಯರೆಂಬ ಅನುಮಾನ ಮೂಡಿಸಿದ್ದ ಡಾ.ಬುಕ್ಕಪ್ಪನವರನ್ನು ಸಾಹಿತಿಯಾಗಿ ಪರಿಚಯಿಸಲೇಬೇಕು ಎಂದು ನಿರ್ಧರಿಸಿ ಸಿದ್ದರಾಜು ಅಂಡ್ ಕಂಪನಿ ಅವರ ಮನೆಯಿಂದ ಹೊರಬಂದರು. ಮುಂದೆ ಡಾ.ಬುಕ್ಕಪ್ಪ ಸಾಯ್ತಿ ಬುಕ್ಕಪ್ಪ ಅಂತಲೇ ಪ್ರಸಿದ್ಧರಾದದ್ದು ಆಶ್ಚರ್ಯವೇನಿಲ್ಲ.

ಡಾಕ್ಟರ್ ಬೋರ್ಡ್ ನಿಂದ ಜನರ ದಿಕ್ಕು ತಪ್ಪಿಸುತ್ತಿದ್ದ ಬುಕ್ಕಪ್ಪ ಮುಗ್ಧ ಜನರು ಬಾಯಿಂದ ಬರುತ್ತಿದ್ದ ಸಾಯ್ತಿ, ಸಾಯ್ತಿ ಮಾತು ಕೇಳಿ ಕೊನೆಗೂ ಬದುಕುಳಿದರು.

*****

ಗಣೇಶ ದಂಡಕ

– ರತ್ನ

ಶರಣು ಶರಣು ಹೇ ಸರ್ವೇಶ ವಿಶ್ವೇಶ ವಿಘ್ನೇಶ ಹಾರೀಶ ವಾಗೀಶ ಬುದ್ಧೀಶ, ವೃದ್ಧೀಶ ಸಿದ್ಧೀಶ ಶ್ರೀಗಣೇಶ; ಶ್ರೀದಾಯ ಸುಖದಾಯ ಚಂಡಾಯ ವರದಾಯ ಸೌಮ್ಯಾಯ ಸುಭಗಾಯ ವೃದ್ಧಾಯ ಶುದ್ಧಾಯ ಬುದ್ಧಿಪ್ರದಾಯ, ದಾಂತಾಯ ಶಾಂತಾಯ ಕಾಂತಾಯ ಮಂತ್ರಾಯ ತಂತ್ರಾಯ ಸಿದ್ಧಾಯ ಶಾಶ್ವತಾಯ ನಮೋ ನಮೋ ನಮೋ ನಮೋನ್ನಮಃ;

ಶರಣು ಗೌರೀಸುತನೆ ಈಶ್ವರನ ನಂದನನೆ ಸಚ್ಚಿದಾನಂದನೆ ನಿತ್ಯಾನಂದನೆ ಭವಹಾರನೆ, ಶರಣು ಶರಣು ಶರಣೆಂಬೆ ಪೊರೆಯೊ ಕೈ ಬಿಡದೆ ಹೊರೆಯೊ, ಎನ್ನೆಲ್ಲ ಅಪರಾಧ ಮರೆಯೊ, ನಿನ್ನ ಬಳಿ ಕರೆಯೊ ಕ್ರೌಂಚಾನುಜಾ ತನುಜಾ;

ಶಿವನೊಂದು ನಾಮದವನೆನ್ನನ್ನು ತಂದವನು, ಸಿರಿಲಕುಮಿ ನಾಮದವಳವಳಿಂದ ಬಂದೆ, ಜಗದಲ್ಲಿ ನಿಂದೆ, ನಿಂದೆಯಲಿ ನೊಂದೆ, ಬನ್ನದಲಿ ಬೆಂದೆ, ಸಲಹಯ್ಯ ನೀ ಗಣಪನೆಂದೆ, ನೀ ದೂರ ಮಾಡದಿರು, ಉಪೇಕ್ಷೆಯಲಿ ನೋಡದಿರು, ಕಷ್ಟಕ್ಕೆ ದೂಡದಿರು, ತವ ಲೀಲೆಯೆಂದೆನುತ ಎನ್ನನ್ನು ಕಾಡದಿರು, ಸಿದ್ಧಿದಾಯ, ಸುಭಗಾಯ ವೃದ್ಧಾಯಾ; ಮೃಢ ಮಹೇಶನ ತನಯ ಮೌಢ್ಯವನು ಕಳೆಯೆಂದೆ, ನೀಲಲೋಹಿತ ಸೂನು ಎನ್ನ ಹುಲು ಭಕ್ತಿಯನು ಸ್ವೀಕರಿಸು ಇಂದೆ, ಅಂಬಿಕಾರ್ಭಕ ನಿನ್ನ ನಂಬಿ ನಾ ಬಳಿ ಬಂದೆ, ಗುಹನಗ್ರಜನೆ ಎನ್ನ ತ್ಯಜಿಸದಿರು ತಂದೇ;

ಹೇರಂಬ ಚತುರನೆ, ಉದರ ಉರಗ ನಿಬದ್ಧ, ಚತುರಾಯ ನೀ ದ್ವೈಮಾತುರ, ನೀ ಸ್ಥಿರನು ಶೂರ ಮಹಾ ಪಾಪಹಾರ, ಗಣಪ ಲಂಬೋದರ, ಭಯವರ್ಜಿತನು ನೀನು, ಶೂರ್ಪಕರ್ಣನು ನೀನು, ಸ್ಥೂಲಕಂಠನು ನೀನು, ಪುರುಷೋತ್ತಮನು ನೀನು, ಸ್ತುತಿಹರ್ಷಿತನು ನೀನು, ರಾಮಾರ್ಚಿತನು ನೀ ಕೃಷ್ಣಾರ್ಚಿತ, ಅಮರೇಶ್ವರನೆ ಪ್ರಭೋ ಪಾಹಿ ಪಾಹಿ ಪ್ರಭೋ, ಪ್ರಭೋ ತ್ರಾಹಿ ತ್ರಾಹೀ;

ಪಾರ್ವತಿ ಅಂಗರಾಗರೂಪಿತ ಕಂದ ಪ್ರೇಮದ ಬಾಲಕನೆ ನೀ ಶಿವನನೆದುರಿಸಿ ಕನಲುತ್ತ ನಿಲಲು, ರಾಜಧರ ರುದ್ರನವ ವೃದ್ಧನವ ಸಿದ್ಧಾರ್ಥ, ಕ್ರುದ್ಧನಾಗಲು ಘೋರ ಯುದ್ಧದಿ ಕ್ರೋಧಮೀರಿದ ಕಾರಣ ರಣಾಂಗಣ ಭೀಕರ ಯುದ್ಧ ಕಾರಣ ಎಳೆಯ ನಿನ್ನ ಶಿರಹರಣದಿಂ ವಿಲಪಿಸಿದ ಪಾರ್ವತೀ ಕಾರುಣ್ಯ ಶೋಕರಸಭರಿತ ಕರುಳಿರಿವ ದರ್ಶನಕೆ ಶಿವಚಲಿಸಿ ಪರಿತಪಿಸಿ ನಿರ್ಧರಿಸಿ, ಧನದ ದಿಶೆಯಲಿ ನಿದ್ರಿಸಿಹರಾರಾದರೂ ಸರಿಯೆ ಆವುದಾದರು ಸರಿಯೆ ಶಿರವನ್ನು ಛೇದಿಸುತ ಶೀಘ್ರದಲಿ ತರುವುದೆಂದಾಜ್ಞಾಪಿಸೆ, ಖಡುಗವನು ಹಿರಿಯುತ್ತ ಅಪ್ಪಣೆಯ ಪಾಲಿಸಲು, ಮಲಗಿದ್ದ ಮಾತಂಗ ಮೂರ್ಧವನು ತರಿಯುತ್ತ, ಸಡಗರದಿ ತಂದೀಯೆ, ನಿನಗದನು ಜೋಡಿಸುತ, ನವ ರೂಪವೀಯುತ್ತ ಹೊಸ ಶಕುತಿ ನೀಡುತ್ತ ಗಣಪದಕೇರಿಸುತ, ಮಮತೆಯಲಿ ನೋಡುತ್ತ ಕೊಂಡಾಡಿ ಮುಂಡಾಡಿ ಎತ್ತಾಡಿಸಿದ ತ್ರೈಲೋಕ್ಯ ನಮಿತರಿಗೆ ತವ ಜನ್ಮದಾತರಿಗೆ, ಅಂಬಿಕೆಗೆ ಪರಶಿವಗೆ, ಶಾಂಭವಿಗೆ ಶಂಭುವಿಗೆ ನಮಿಸುವೆನು ನೀಕಾಯೊ ವಿಘ್ನೇಶ್ವರ, ಗುಣ ಗಣಾಧೀಶ್ವರಾ, ಸ್ವಾಮಿ ಅಮರೇಶ್ವರಾ;

ನಿಖಿಲ ನಿರ್ಜರವೃಂದ ನಮಿತನೆ, ಏಕದಂತನೆ, ವಕ್ರತುಂಡನೆ, ಪಾಶಹಸ್ತನೆ ಮೋದಕಪ್ರಿಯನೆ, ಧೂರ್ತ ಕರ್ಬುರ ಲಂಕೆಯಧಿಪತಿ, ತಪದಿ ಹರನನು ತಣಿಸಿ ಒಲಿಸುತ, ಶಂಭುವಿನಾತ್ಮಲಿಂಗವಂ ಪಡೆದು ನಡೆದಿರೆ ಲಂಕೆಯೆಡೆ ಬಲು ಗರ್ವದಿಂದ, ತೃಪ್ತ ಮನದಿಂದ, ಭೀತ ಸುರವೃಂದ ಚೋದಿತನು ತಾನಾಗಿ, ರಾವಣನ ಬಳಿ ಸುಳಿಯೆ, ರವಿಯಿಳಿಯೆ ನಿನ್ನ ಕರೆದಿರಲು ತನ್ನ ಬಳಿಯೆ, ಆತ್ಮಲಿಂಗವನು ತವ ಹಸ್ತಗತಮಾಡಿ ಎಚ್ಚರವ ನೀಡುತಂಬೋಧಿಗಿಳಿಯೆ, ಚದುರತನದಲಿ ಕೂಗಿ ಕರೆಯುತ್ತ ದಿವ್ಯವಹ ಲಿಂಗವನು ನೆಲಕಿರಿಸಿ ತಿರೆಗಿಳಿಸಿ ವಂಚಿಸುತ, ರಕ್ಕಸನ ಕಿನಿಸೇರಿಸಿ, ಮುದವಿಳಿಸಿ ಮದವಿಳಿಸಿ, ಸುರರ ಭಯವನ್ನಿಳಿಸಿ ಮುದಗೊಳಿಸಿ ಚಿಂತೆಹರಿಸಿ, ಬರಿಗೈಲಿ ದಶಶಿರನ ಕಳಿಸಿದ ಪ್ರಸನ್ನಾತ್ಮನೇ ನಿನಗೆ ಶರಣೆಂಬೆನು; ನಿನ್ನ ಕರುಣೆಗೆ ಋಣಿಯೆಂಬೆನು; ಇಡಗುಂಜೀಶ್ವರಾ; ಸ್ವಾಮಿ ಸರ್ವೇಶ್ವರಾ;

ಸುಂದರನು ಚಂದಿರನು ತನ್ನ ಅಂದಕೆ ಸೊಕ್ಕಿ, ಆಖು ವಾಹನನೆ, ಸಿಂಧುರವದನನೆ, ಲಂಬೋದರಾ ನಿನ್ನಂದವನು ಕಾಣುತ್ತ, ಮದವುಕ್ಕಿ ಅಣಕಿಸುತ, ಗಹಗಹಿಸಿ ನಗುತಿರಲು, ಮುನಿಸುಕ್ಕಿ ಕಿನಿಸೇರಿ ಕ್ರೂರಶಾಪದಿಯಿಕ್ಕೆ, ಹಳವಳಿಸಿ ಪರಿತಪಿಸಿ ಹಳವಿಸುತ ಮೈಯಿಕ್ಕಿ ಕ್ಷಮಿಸು ಕ್ಷಮಿಸೆನ್ನುತ ತ್ರಾಹಿ ತ್ರಾಹಿ ಎನುತಾರ್ತತೆಯ ತಳೆದು ಬೇಡಿಕೊಳಲು, ಕರುಣಾಳು ಮನ್ನಿಸುತ, ಶಾಪದ ತೀವ್ರ ತಾಪವನ್ನಿಳಿಸುತ್ತ, ಮುದವನ್ನು ಅರಳಿಸುತ, ಇಂದುವಿಗಾನಂದ ತಂದ ಉಮೆನಂದನ ಶಿವನಪ್ರಿಯನಂದನ, ತಂದೆತಾಯ್ಗಳನು ಬಲವಂದು, ಸ್ಕಂದನನು ಹಿಂದಿಕ್ಕಿ, ಪಣವನ್ನು ಗೆಲ್ದಂತ ಸ್ಥೂಲತುಂಡ, ಕೈಟಭಾರಿಗೆ ಬಂದ ನಿಂದೆಯನು ಕಳೆದಂಥ ವಕ್ರತುಂಡಾ;

ನಿನಗೆ ಮಂಗಳವೆಂಬೆ, ಸಜ್ಜನರ ಕಾಯೆಂಬೆ, ದುರ್ಜನರ ಮರ್ದಿಸೆಂಬೆ, ಗಜಮುಖನೆ ಎನ್ನೆಲ್ಲ ಪಾಪೌಘ ನಿಶ್ಶೇಷ ಉರಿಸೆಂಬೆನು, ಸತ್ಪಥದಿ ನಿರುತ ನಿಲಿಸೆಂಬೆನು, ಸತ್ಕಾರ್ಯಕೆದುರಾಗೊ ಸಂಕಷ್ಟ ಹರಿಸೆಂಬೆನು, ಚೆನ್ನಕೇಶವಗೆ ನೀನತಿ ಪ್ರಿಯನೆಂಬೆನು, ಸಾಷ್ಟಾಂಗ ನಮಿಸುತ್ತ ಶರಣೆಂಬೆನು, ಕಿಂಕರನು ಅನವರತ ನಾನೆಂಬೆನು, ಎನ್ನ ದಾಸ್ಯವ ಕೊಂಡು ಸೇವೆಯನು ಸ್ವೀಕರಿಸಿ ಭೀತಿಯೆಲ್ಲವ ಹರಿಸಿ ಪೊರೆಯೆಂಬೆ ಪೊರೆಯೆಂಬೆ ಹೇರಂಬನೇ.

*****

ಮನಸ್ಸಿದ್ದರೆ ಮಾರ್ಗವಿದೆ – ಗಾದೆಮಾತು ಸುಳ್ಳಲ್ಲ

- ಪ್ರಮೋದಾ ಎಸ್. ಮೂರ್ತಿ

"ಅಯ್ಯೋ, ನಾನು ಏನೂ ಮಾಡಿಲ್ಲ ಸುಮ್ಮನೆ ಸಮಯ ಹಾಳು ಮಾಡುತ್ತಿದ್ದೇನೆ ಎಂದು ನಿಮಗೆ ಅನ್ನಿಸುತ್ತಿದ್ದರೆ ನೀವು ನನ್ನ ತರಹದವರು. ಒಂದು ಬಾರಿ ತಲೆ ಕೊಡವಿಕೊಂಡು ಎದ್ದೇಳಿ. ಮೊದಲು ನಿಮಗೆ ಯಾವುದರಲ್ಲಿ ತುಂಬಾ ಆಸಕ್ತಿ ಇದೆ ಎಂಬುದರ ಬಗ್ಗೆ ನಿಮ್ಮನ್ನು ನೀವೇ ಕೇಳಿಕೊಳ್ಳಿ. ನಿಮ್ಮನ್ನು ನೀವು ಅರ್ಥಮಾಡಿಕೊಳ್ಳಿ. ಮನೆ ಕೆಲಸ ಬೆಟ್ಟದಷ್ಟಿರುತ್ತವೆ. ಅದೇ ಮಾಡುತ್ತಾ ಇದ್ದರೆ ನಮ್ಮ ಮನಸ್ಸಿಗೆ ಆಪ್ತವಾದದ್ದನ್ನು ಮಾಡಲು ನಮಗೆ ಸಮಯ ದೊರೆಯುವುದೇ ಇಲ್ಲ. ನಾವು ಸಮಯ ಮಾಡಿ ಕೊಳ್ಳಬೇಕು ಅಷ್ಟೆ. ಎಲ್ಲಾ ನಮ್ಮ ಕೈಯಲ್ಲೇ ಇರುತ್ತದೆ. ಆಗುತ್ತೆ ಅಂದರೆ ಆಗುತ್ತೆ, ಆಗಲ್ಲ ಅಂದರೆ ಆಗಲ್ಲ." ಇಷ್ಟೆಲ್ಲಾ ಹೇಳುತ್ತಿರುವುದು ನಾನಲ್ಲಪ್ಪ! ಇದು ನನ್ನ ವಾಕಿಂಗ್ ಸ್ನೇಹಿತೆ ಹೇಮಾಶ್ರೀ ಮಾತು.

ಒಂದು ದಿವಸ ಇದ್ದಕ್ಕಿದ್ದಂತೆ ದೂರವಾಣಿ ಕರೆ ಮಾಡಿ "ನಾವೆಲ್ಲಾ ಭಾವಗೀತೆ ಕಲಿಯಲು ಶುರುಮಾಡಿದ್ದೇವೆ. ನೀವು ಬಂದು ನಮ್ಮ ಜೊತೆ ಸೇರಿಕೊಳ್ಳಿ" ಎಂದು ಹೇಮಾಶ್ರೀ ಹೇಳಿದಾಗ ನಾನು "ಅಯ್ಯೋ, ನನಗೆ ಪುರುಸೊತ್ತೇ ಇಲ್ಲಪ್ಪ, ಅದೂ ಅಲ್ಲದೆ ನನಗೆ ಹಾಡಲೂ ಬರುವುದಿಲ್ಲ" ಎಂದೆ. ಅಷ್ಟು ಹೇಳಿದ್ದೇ ಸಾಕಾಯಿತು ಅವರಿಗೆ. "ಸಾಯಂಕಾಲ ವಾಕಿಂಗಿನಲ್ಲಿ ಸಿಗುತ್ತೀರಲ್ಲ ಮಾತನಾಡೋಣ" ಎಂದು ದೂರವಾಣಿಯನ್ನು ಇಟ್ಟಿದ್ದರು. ಇನ್ನು ಏನು ಬಲವಂತ ಮಾಡುತ್ತಾರೋ ಎಂದುಕೊಳ್ಳುತ್ತಲೇ ಸಾಯಂಕಾಲ ಅವರನ್ನು ಭೇಟಿ ಮಾಡಿದ್ದೆ.

"ಇಲ್ಲೇ ಕಲ್ಲುಹಾಸಿನ ಮೇಲೆ ಕುಳಿತುಕೊಳ್ಳೋಣ ಬನ್ನಿ. ಮನೆಗೆ ಹೋಗಲು ಅರ್ಜೆಂಟ್ ಏನೂ ಇಲ್ಲ ತಾನೇ?" ಎನ್ನುತ್ತಾ ಅಲ್ಲೇ ಇದ್ದ ಬೆಂಚಿನ ಕಡೆ ನಡೆದರು. ಯಾಕೋ ಇವತ್ತು ಇವರು ನನ್ನನ್ನು ಬಿಡುವ ಹಾಗೆ ಕಾಣುವುದಿಲ್ಲ ಎಂದು ಮನಸ್ಸಿನಲ್ಲೇ ಅಂದುಕೊಂಡು ಅವರ ಹಿಂದೆ ಹೆಜ್ಜೆ ಹಾಕಿದೆ.

ಈ ಹೇಮಾಶ್ರೀ ಯಾರು ಅಂತ ಅಂದುಕೊಂಡಿದ್ದೀರಿ? ನಮ್ಮ ಮನೆ ಹಿಂದುಗಡೆ ರೋಡಿನಲ್ಲಿ ಎಡಗಡೆಯ ರಸ್ತೆಗೆ ತಿರುಗಿದರೆ ಬಲಗಡೆಯಿಂದ ನಾಲ್ಕನೆಯ ಮನೆ ಅವರದು. ಅರವತ್ತರ ಹರೆಯದವರು.

"ಹಲೋ, ಹೇಗಿದ್ದೀರಾ?" ಅಂತ ಯಾವಾಗಲೂ ವಾಕಿಂಗ್ ನಲ್ಲಿ ಸ್ನೇಹದಿಂದ ನಗುನಗುತ್ತಾ ಮಾತನಾಡಿಸುವ ಹಸನ್ಮುಖಿ ವ್ಯಕ್ತಿ. ಅವರ ಸ್ವಭಾವ ನನಗೆ ಬಹಳ ಹಿಡಿಸಿತ್ತು. ಅವರ ಮಾತುಗಳೂ ಅಷ್ಟೇ. ನಿಧಾನವಾಗಿ ಮನಸ್ಸಿಗೆ ತಟ್ಟುವಂತೆ ಮಾತನಾಡುವುದರಲ್ಲಿ ಆಕೆ ತುಂಬಾ ನಿಪುಣೆ. ನಾನು ಕೇಳಿದೆ. "ಏನು ಈ ವಯಸ್ಸಿನಲ್ಲಿ ಭಾವಗೀತೆ ಕಲಿಯುವ ಆಸೆ?"

ಅದಕ್ಕೆ ಅವರಂದರು "ಯಾವುದೇ ವಿದ್ಯೆ ಕಲಿಯುವುದಕ್ಕೆ ವಯಸ್ಸು ಅಡ್ಡ ಬರುವುದಿಲ್ಲಾರೀ.. ಮನಸ್ಸು ಮುಖ್ಯ. ನಾನು ನನ್ನ ವಿಷಯ ಹೇಳುತ್ತೇನೆ ಕೇಳಿಸಿಕೊಳ್ಳಿ. ಆಮೇಲೆ ನಿಮಗೇನನ್ನಿಸುತ್ತದೊ ಹಾಗೆ ಮಾಡಿ" ಎಂದರು. "ಏನಪ್ಪಾ ವಿಷಯ?" ಎಂದು ನಾನು ಅವರನ್ನು ಕೇಳಿದೆ. ಅದಕ್ಕೆ ಅವರು ಹೀಗೆ ಅಂದರು.

"ನನಗೆ ಬಾಲ್ಯದಲ್ಲಿ ಹಾಡು ಹಾಡುವುದರಲ್ಲಿ ತುಂಬಾ ಆಸಕ್ತಿ ಇತ್ತು. ಆದರೇನು ದೈವದತ್ತವಾಗಿ ಸಂಗೀತದ ಶಾರೀರ ಇರಲಿಲ್ಲ. ಆಸೆಯೇನೋ ಯಥೇಚ್ಛವಾಗಿ ಇತ್ತು. ಸ್ಕೂಲಲ್ಲಿ ಸಂಗೀತ ಕಲಿಯುತ್ತೇನೆ ಎಂದು ಆಸೆಯಾಗಿ ಕ್ಲಾಸಿಗೆ ಸೇರಿದ್ದೆ. ಅಲ್ಲಿ ನಮ್ಮ ಸಂಗೀತ ಮೇಷ್ಟ್ರು ನಾನು ಹಾಡುವಾಗ, ಹಾರ್ಮೋನಿಯಂ ಮುಚ್ಚಿಟ್ಟು, ತಾಳ ಹಾಕುತ್ತಾ ಹೇಳಿ ಕೊಡುತ್ತಿದ್ದರು. ಬೇರೆಯವರಿಗೆ ಆ ತರಹ ಏನೂ ಮಾಡುತ್ತಿರಲ್ಲಿಲ್ಲ. ನನಗೆ ಅವಾಗ ತುಂಬಾ ಬೇಸರವಾಗುತ್ತಿತ್ತು.. ಮುಂದೆ ದೊಡ್ಡವಳಾಗಿ ಶ್ರುತಿ, ರಾಗ, ತಾಳ ಎಲ್ಲಾ ತಿಳಿಯುತ್ತಾ ಬಂದಾಗ ಅಯ್ಯೋ ನಾನು ಎಂತಹ ದಡ್ಡಿ ಎಂಬ ಕೀಳರಿಮೆ ಕಾಡತೊಡಗಿತ್ತು, ನನ್ನ ಕಣ್ಣಿನ ಮುಂದೆ, ಸಂಗೀತದ ಜ್ಞಾನವೇ ಇರದ, ನನಗೆ ತಿಳಿದ ಎಷ್ಟೋ ಮಕ್ಕಳು ಕಷ್ಟಪಟ್ಟು ಅಭ್ಯಾಸ ಮಾಡಿ ಸುಶ್ರಾವ್ಯವಾಗಿ ಹಾಡುವ ಮಟ್ಟಿಗೆ ಆಗಿದ್ದರು. ನನ್ನ ಸಣ್ಣ ವಯಸ್ಸಿನಲ್ಲೇ ಯಾರಾದರೂ ನನಗೆ 'ಹಠ ಹಿಡಿದು ಕಲಿ ಆಗುತ್ತೆ' ಅಂತ ಸರಿಯಾಗಿ ಮಾರ್ಗದರ್ಶನ ಮಾಡಿದ್ದರೆ ನಾನೂ ನನ್ನ ಗುರಿ ಸಾಧಿಸುತ್ತಿದ್ದೆ ಎಂದು ಎಷ್ಟೋ ಸಲ ನನಗೆ ಅನ್ನಿಸಿತ್ತು. ಬರಿದೇ ನನಗೆ ಸಂಗೀತ ಬರುವುದಿಲ್ಲ ಎಂದು ದುಃಖಪಟ್ಟಿದ್ದೆ. ನನ್ನ ಅಣ್ಣನಂತೂ ಯಾವಾಗಲೂ ನನ್ನ ಸಂಗೀತ ಪಾಠದ ವಿಷಯ ಬಂದಾಗಲೆಲ್ಲಾ ಛೇಡಿಸುತ್ತಿದ್ದ. "ಮನೆಯಲ್ಲಿ ಆಗ ಅಷ್ಟು ಗಲಾಟೆ ಮಾಡಿ ಸಂಗೀತ ಕ್ಲಾಸಿಗೆ ಹೋಗಲೇಬೇಕು ಅಂತ ಹೋದೆ, ಏನು ಪ್ರಯೋಜನವಾಯ್ತು?" ಅಂತ. ಮನಸ್ಸಿಗೆ ಆ ಮಾತು ಕೇಳಿದಾಗೆಲ್ಲಾ ಬೇಜಾರಾಗುತ್ತಿತ್ತು. ಬೆಳೆಯುತ್ತಾ ಹೋದಂತೆ ನಾನು ಕೇಳಿದ ಹಾಡುಗಳು ಇಷ್ಟವಾದಲ್ಲಿ ಅದನ್ನು ನನಗೆ ಬಂದ ರೀತಿಯಲ್ಲಿ ಮನೆಯ ನಾಲ್ಕು ಗೋಡೆಗಳ ಮಧ್ಯೆ ಹಾಡಿಕೊಂಡು ಸಮಾಧಾನಪಡುತ್ತಿದ್ದೆ. ಮದುವೆ, ಮಕ್ಕಳು ಆದ ಮೇಲೆ ಗಂಡ ಹಾಗೂ ಮಕ್ಕಳಿಗೂ ನನ್ನ ಸಂಗೀತ ಸುಧೆಯನ್ನು ಉಣಬಡಿಸತೊಡಗಿದೆ. ಪಾಪ ಎಷ್ಟು ಕಷ್ಟಪಟ್ಟು ಅದನ್ನು ಸಹಿಸಿಕೊಂಡರೋ ಅಂತ ನನಗೆ ಈವಾಗ ಅನಿಸುತ್ತೆ".

ಹೀಗೆ ತಮ್ಮ ಬಾಲ್ಯದ ನೆನಪಿನಲ್ಲಿ ಮುಳುಗಿ ಹೋಗಿ ಉದ್ದಕ್ಕೂ ಒಂದೇ ಸಮನೆ ಮಾತನಾಡುತ್ತಿದ್ದ ಹೇಮಾಶ್ರೀಯವರ ಮಾತು ಕೇಳಿ ನನಗೆ ನಗು ಬಂತು. ನಾನು ನಕ್ಕಿದ್ದಕ್ಕೆ ಹೇಮಾಶ್ರೀ "ನಿಜ ಕಣ್ರಿ. ಈವಾಗ ಅದನ್ನೆಲ್ಲಾ ಜ್ಞಾಪಿಸಿಕೊಂಡರೆ ನನಗೂ ನಗು ಬರುತ್ತೆ. ಹಾಡು ಹಾಡುವಾಗ ಆಗುವ ತನಕ ಅದೇ ಶ್ರುತಿಯಲ್ಲಿ ಹಾಡುವುದು ಪದ್ಯದ ಸಾಲಿನ ಕೊನೆ ಮುಟ್ಟುವಾಗ ಎತ್ತರದ ಸ್ಥಾಯಿಯಾದರೆ ಅದನ್ನು ಕೆಳಗಿನ ಶ್ರುತಿಯಲ್ಲಿ ಹಾಡಿಬಿಡುತ್ತಿದ್ದೆ. ಮುಂದಿನ ಸಾಲನ್ನು ತಗ್ಗಿದ ಶ್ರುತಿಯಲ್ಲೇ ಮುಂದುವರೆಸಿ ಬಿಡುತ್ತಿದ್ದೆ. ಆದರೆ ಹಾಡುವುದನ್ನು ಮಾತ್ರ ಬಿಡುತ್ತಿರಲಿಲ್ಲ. ನನಗೂ ಸಹ, ಈಗ ನಾನು ನಿಮಗೆ ಹೇಳುತ್ತಿರುವ ಹಾಗೆ, ಒಂದು ಸಲ ನನ್ನ ಸ್ನೇಹಿತರು ಸಂಗೀತ ಕಲಿತುಕೊಳ್ಳಲು ಸೇರುವಂತೆ ಒತ್ತಾಯಿಸಿದರು. ಆಸೆಯಿಂದ ಹೋದೆ. ಅಲ್ಲಿ ನನ್ನ ಜೊತೆಗಾರ ರೆಲ್ಲ ನನ್ನ ತರಹದವರೇ ಆಗಿದ್ದು ಸ್ವಲ್ಪ ಸಮಾಧಾನ ತಂದಿತ್ತು. ನಮ್ಮ ಶಿಕ್ಷಕಿ ಕೂಡ ತುಂಬಾ ಸಮಾಧಾನಿ. ನಮ್ಮಂತವರಿಗೆ ಹೇಳಿಕೊಟ್ಟು ಅವರಿಗೆ ಚೆನ್ನಾಗಿ ಅಭ್ಯಾಸವಾಗಿತ್ತೇನೊ, ಅಂತೂ ಅವರ ಭರವಸೆ ನನ್ನಲ್ಲಿ ಹಾಡುವಂತೆ ಮಾಡಿತ್ತು. ನೀವು ಶೃತಿ ಇಟ್ಟುಕೊಂಡು ಹಾಡಿ ಎಂದು ಉತ್ತೇಜಿಸಿದರು.

"ನಾವು ಶ್ರುತಿಯಲ್ಲೇ ಹಾಡುತ್ತಿದ್ದೇವೆ ಎಂಬುದು ನಮಗೆ ಗೊತ್ತಾಗಬೇಕಲ್ಲ ಮೇಡಂ" ಎಂದಾಗ, ಅಭ್ಯಾಸ ಮಾಡುತ್ತಾ ಇದ್ದರೆ ಒಂದು ದಿವಸ ನಿಮಗೆ ಗೊತ್ತಾಗುತ್ತೆ ಅದರ ಜೊತೆ ನೀವು ಹಾಡುತ್ತಿಲ್ಲ ಎಂಬುದು. ಆಗ ತಕ್ಷಣ ನಿಲ್ಲಿಸಿ ಮೊದಲಿನಿಂದ ಜೊತೆ ಸೇರಿಸಿ ಹಾಡಲು ಅಭ್ಯಾಸ ಮಾಡಿ. ಹಾಗೆ ಅಭ್ಯಾಸ ಮಾಡತೊಡಗಿದರೆ ಖಂಡಿತವಾಗಿಯೂ ನಿಮಗೆ ಹಾಡಲು ಬಂದೇ ಬರುತ್ತದೆ. ಅಭ್ಯಾಸ

ಮಾಡುವುದನ್ನು ಯಾವ ಕಾಲಕ್ಕೂ ನಿಲ್ಲಿಸಬಾರದು. ಆಮೇಲೆ ಹೊಸ ಹಾಡು ಕಲಿಯುತ್ತಾ ಇದ್ದಾಗ ಒಂದು ತರಹ ಚಡಪಡಿಕೆ ಇರುತ್ತದೆ ಹಾಡು ಬರುತ್ತಿಲ್ಲವಲ್ಲ ಎಂದು. ಅದು ಸಹಜವಾದದ್ದು. ನೀವು ಹೊಸ ಹಾಡು ಕಲಿಯುತ್ತಾ ಹೋದಂತೆಲ್ಲಾ ಈ ಚಡಪಡಿಕೆ ಇದ್ದೇ ಇರುತ್ತದೆ. ಆದ್ದರಿಂದ ಬೇಜಾರು ಮಾಡಿಕೊಳ್ಳದೆ ಶಾಂತಚಿತ್ತರಾಗಿ ಅಭ್ಯಾಸ ಮಾಡಿ. ಖಂಡಿತ ನಿಮಗೆ ಗೆಲುವು ಸಿಗುತ್ತದೆ ಎಂದು ಸಹ ಹೇಳಿದ್ದರು. ಇಷ್ಟು ಪ್ರೋತ್ಸಾಹ ನನಗೆ ಬಾಲ್ಯದಲ್ಲಿ ದೊರೆತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಈಗಲೂ ಬಹಳ ಸಲ ನನಗೆ ಅನ್ನಿಸಿದ್ದೂ ಉಂಟು..

“ಅಂತೂ ನಮ್ಮ ಟೀಚರ್ ಮಾತನ್ನು ನಂಬಿ ನಾನು ಹಾಡಲು ಪ್ರಾರಂಭಿಸಿದೆ. ಮೊದಮೊದಲು ಬಹಳ ಕಷ್ಟವಾಗುತ್ತಿತ್ತು. ನನ್ನ ಕೈಯಲ್ಲಿ ಇದು ಸಾಧ್ಯವಿಲ್ಲ ಎಂದು ಬಹಳ ಸಲ ಅಂದುಕೊಂಡೆ. ಏನು ಮಾಡಿದರೂ ಶ್ರುತಿ ಸೇರುತ್ತಿರಲಿಲ್ಲ. ಹಿಂಸೆಯಿಂದ ಅಳುತ್ತಿದ್ದೆ. ಆದರೂ ಹಠ ಬಿಡದೆ ಅಭ್ಯಾಸ ಮುಂದುವರಿಸಿದೆ. ಯಾಕೆ ಆಗಲ್ಲ ಅಂತ ನೋಡಿಯೇ ಬಿಡೋಣ ಅಂತ ಛಲ ಬಿಡದ ತ್ರಿವಿಕ್ರಮನಂತೆ ಅದನ್ನು ಒಂದು ಸವಾಲಿನಂತೆ ತೆಗೆದುಕೊಂಡೆ. ಅದರ ಪರಿಣಾಮ ಏನು ಗೊತ್ತಾ?" ಎಂದಾಗ ನಾನು ಏನು ಎನ್ನುವಂತೆ ನನ್ನ ಹುಬ್ಬೇರಿಸಿದ್ದೆ. "ಮೊನ್ನೆ ನಮ್ಮ ಬಡಾವಣೆ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸುವಷ್ಟು ಧೈರ್ಯ ನನಗೆ ಬಂತು ಅಂದರೆ ನೀವೇ ಊಹಿಸಿ" ಎಂದು ನುಡಿದರು. ಅವರ ಮಾತು ಕೇಳಿ ನಾನು ದಂಗಾಗಿ ಹೋದೆ. "ನಿಜಾನಾ? ಮುಂದೇನಾಯ್ತು?" ನಾನು ಕುತೂಹಲದಿಂದ ಕೇಳಿದೆ.

"ನಾನು ಎಷ್ಟು ಕಷ್ಟಪಟ್ಟು ಅಭ್ಯಾಸ ಮಾಡಿದೀನಿ ಗೊತ್ತಾ ನಿಮಗೆ. ಅದರ ಊಹೆಮಾಡಲು ಯಾರಿಗೂ ಸಾಧ್ಯವಿಲ್ಲ" ಎಂದು ಅವರು ನುಡಿದಾಗ "ಏನಾಯ್ತು ಸ್ಪರ್ಧೆಯಲ್ಲಿ?" ಎಂದು ಉತ್ಸುಕಳಾಗಿ ಕೇಳಿದೆ. "ನನಗೆ ಎರಡನೆಯ ಬಹುಮಾನ ಬಂತೂರೀ "ಅಂತ ಹೆಮ್ಮೆ ಯಿಂದ ಅವರು ಅಂದಾಗ ನನಗೆ ಪರಮಾಶ್ಚರ್ಯ! "ನಿಜ ಹೇಳ್ತಾ ಇದ್ದೀರಾ" ಅಂತ ಕೇಳಿದೆ.

"ಇನ್ನೇನು ಮತ್ತೆ... ನೀವು ಆಗ ಊರಲ್ಲಿ ಇರಲಿಲ್ಲ. ಅದರ ಧ್ವನಿಸುರುಳಿ ನಿಮಗೆ ಕೇಳಿಸುತ್ತೇನೆ. ಅದಕ್ಕೆ ಹೇಳಿದ್ದು ನಾನು, ನನ್ನ ಮಾತು ಕೇಳಿದ ಮೇಲೆ ನೀವು ಖಂಡಿತವಾಗಿ ಬರ್ತೀರಾ" ಎಂದು ನಕ್ಕು, "ಹೆಂಗಸರಿಗೆ ಸಂಗೀತ ಜ್ಞಾನ ಹುಟ್ಟಿನಿಂದಲೂ ಇದ್ದೇ ಇರುತ್ತೆ.ಕೆಲವರಿಗೆ ಹಾಡು ಸುಲಭವಾಗಿ ಬರುತ್ತದೆ. ಕೆಲವರು ಜಾಸ್ತಿ ಕಷ್ಟಪಡಬೇಕು ಅಷ್ಟೇ" ಅಂದರು.

" ಮನಸ್ಸಿದ್ದರೆ ಮಾರ್ಗವಿದೆ ಎಂಬ ಗಾದೆ ಸುಳ್ಳಲ್ಲ ಕಣ್ರೀ. ನನಗಿಂತ ಬೇರೆ ಉದಾಹರಣೆ ಬೇಕೆ ,ಇನ್ನು ನೀವೇ ಆಲೋಚನೆ ಮಾಡಿ ನನಗೆ ಹೇಳಿ" ಎಂದು ಕುಳಿತಲ್ಲಿಂದ ಎದ್ದಿದ್ದರು....

ನಾನೂ ಆಮೇಲೆ ಭಾವಗೀತೆ ಕ್ಲಾಸಿಗೆ ಸೇರಿಕೊಂಡೆ ಅಂತ ನಿಮಗೇನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ಅಲ್ವೇ?

*****

ಕನ್ನಡ ಕಥಾ ಪ್ರಪಂಚ

ವೇದಾಂತ ಕಥೆಗಳು

- ವಿಠ್ಠಲ್ ಇಜೇರಿ

ಕಳೆದ ಕೆಲವು ದಾಸೋಹಗಳಲ್ಲಿ ಕಥಾ ಪ್ರಪಂಚದ ವಿವಿಧ ಆಯಾಮಗಳೊಂದಿಗೆ ಕಥಾ ಸಂಕಲನಗಳಾದ *ವಡ್ಡರಾಧನೆ, ಕಥಾ ಸರಿತ್ಸಾಗರ, ಬುದ್ಧನ ಜಾತಕ ಕಥೆಗಳು, ಪಂಚತಂತ್ರ ಕತೆಗಳು, ಹಿತೋಪದೇಶ, ಅರೇಬಿಯನ್ ನೈಟ್ಸ್ ಇತ್ಯಾದಿ ಪ್ರಸ್ತುತ ಪಡಿಸಿದ್ದೇನೆ. ಆ ಕ್ರಮದಲ್ಲಿ ಇಂದು ವೇದಾಂತ ಕಥೆಗಳ ಬಗ್ಗೆ ಓದುತ್ತಿದ್ದೇನೆ.

ಭಾರತದ ಪ್ರಾಚೀನ ಮತ್ತು ಇತ್ತೀಚಿನ ಧಾರ್ಮಿಕ ಸಾಹಿತ್ಯ ಸಂಪದ್ಭರಿತವಾಗಿದೆ. ರಾಮಾಯಣ, ಮಹಾಭಾರತ, ಪುರಾಣಗಳು, ಹಿತೋಪದೇಶ, ಪಂಚತಂತ್ರ, ಜೈನ ಹಾಗೂ ಬೌದ್ಧರ ಕತೆಗಳು ಮತ್ತು ಈ ಸಾಲಿನಲ್ಲಿ ಬರುವ ಇನ್ನೂ ಅನೇಕ ಗ್ರಂಥಗಳು ಸಾಕಷ್ಟು ಮಾರ್ಮಿಕ, ನೈತಿಕ, ನೀತಿಬೋಧಕ ಮತ್ತು ಮನರಂಜನೆಯ ಕತೆಗಳನ್ನು ಹೊಂದಿವೆ. ಹೆಚ್ಚಿನ ವೇಳೆ ಕಥೆ ಅಂದರೆ ಕಲ್ಪನೆ. ಚಿತ್ರಕ್ಕೆ ಹಿನ್ನೆಲೆಯಾಗಿ ಗೋಡೆ ಏನೋ ಇರುತ್ತದೆ, ಆದರೆ ಆ ಸತ್ಯದ ಮೇಲೆ ಕಲ್ಪಿತವಾದ ಮಿಥ್ಯಕ್ಕೇ ಬೆಲೆ ಹೆಚ್ಚು. ಕಥೆಯ ಊರು, ದೇಶ, ರಾಜ, ಪ್ರಜೆಗಳು ಇವು ಕೆಲವು ಸಲ ಸತ್ಯವಾದರೂ ಘಟಿಸುವ ಘಟನೆಗಳು ಕಾಲ್ಪನಿಕವೇ ಹೆಚ್ಚು. ಆದ್ದರಿಂದ ಕೈಯಿಂದ ಕೈಗೆ ಬಾಯಿಂದ ಬಾಯಿಗೆ ವರ್ಗಾವಣೆಯಾಗುವಾಗ ಕಥೆಗಳ ಆಕಾರ, ಪ್ರಮಾಣ, ಅವುಗಳ ಹೂರಣ ಬದಲಾವಣೆ ಹೊಂದುವುದೂ ಉಂಟು. ಒಟ್ಟಿನಲ್ಲಿ ವೇದಾಂತ ಕಥೆಗಳ ಉದ್ದೇಶ ಮನಸ್ಸು ಮೃದುವಾಗಬೇಕು, ಮಧುರವಾಗಬೇಕು, ದಯಾದ್ರವಾಗಬೇಕು. ವಿವೇಕಯುತವಾದ ನಡೆ ನುಡಿಗಳು ಮೈಗೂಡಬೇಕು.

ವೇದಾಂತ ಕಥೆಗಳ ಜನಪ್ರಿಯತೆಯನ್ನು, ಕೃಷ್ಣನ ಕತೆ, ರಾಮಾಯಣ, ಮಹಾಭಾರತ ಮೊದಲಾದ ಪ್ರಾಚೀನ ಕತೆಗಳನ್ನು ದೂರದರ್ಶನದಲ್ಲಿ ಪ್ರಸಾರವಾದಾಗ ನಾವು ನೋಡಿದ್ದೇವೆ. ಸಂತರು, ಋಷಿಗಳು ಮತ್ತು ಮಹಾತ್ಮರು ಈ ನೀತಿಬೋಧಕ, ಮನರಂಜನೆಯನ್ನೂ ಹೊಂದಿದ ಕತೆಗಳನ್ನು ಹೇಳುವ ಮತ್ತು ಬರೆಯುವ ಮೂಲಕ ಸಮಾಜದಲ್ಲಿ ನೈತಿಕತೆ, ಸಹಕಾರ, ಸಹೃದಯತೆಗಳನ್ನು ಹೊಂದುವ ಅವಶ್ಯಕತೆಗಳನ್ನುತಿಳಿಸಿ ಕೊಟ್ಟಿದ್ದಾರೆ. ವೇದಾಂತ ನಮ್ಮ ಪುರಾತನ ಸಂಸ್ಕೃತಿ ಮತ್ತು ಆ ದಿನಗಳಲ್ಲಿಯ ಸಮಾಜ ರಚನೆಗೆ ಪೂರಕವಾಗುವ ಸಾಕಷ್ಟು ಕಥೆಗಳು ಇಂದಿಗೂ ಪ್ರಸ್ತುತವಾಗಿವೆ. ಮಕ್ಕಳಿಗೆ ಮತ್ತು ಯುವಜನತೆಗೆ ಸಾಕಷ್ಟು ತಿಳುವಳಿಕೆ ಮತ್ತು ಜ್ಞಾನ ನೀಡುವಲ್ಲಿ ವೇದಾಂತ ಕಥೆಗಳು ಬಹಳ ಸಹಕಾರಿ. ಹಿರಿಯರೂ ಬಿಡುವು ಮಾಡಿಕೊಂಡು ಓದಿ ರಂಜನೆ ಮತ್ತು ಜೀವನಪಾಠಗಳನ್ನು ಈ ಕಥೆಗಳಿಂದ ತಿಳಿಯಬಹುದು. ಸಾಮಾನ್ಯವಾಗಿ ಎಲ್ಲ ಹಿಂದೂಗಳು ತಮ್ಮ ಬಾಲ್ಯದಿಂದ ಈ ಕತೆಗಳನ್ನು ಒಂದಿಲ್ಲೊಂದು ಸಂದರ್ಭದಲ್ಲಿ ಕೇಳಿರುತ್ತಾರೆ, ಇಲ್ಲವೇ ಓದಿರುತ್ತಾರೆ. ಹಿಂದೆ ನಮ್ಮ ಚಲನಚಿತ್ರಗಳು, ನಾಟಕಗಳು, ಕೀರ್ತನೆಗಳು, ಸಾಧುಸಂತರ ಉಪನ್ಯಾಸಗಳು ಜನರಿಗೆ ಹಿತವಾಗುವಂತೆ, ಬಾಳಿಗೆ ಉಪಯೋಗವಾಗುವಂತೆ ಈ ವೇದಾಂತದ ಕತೆಗಳನ್ನು ತಮ್ಮಆಂತರ್ಯದ ಒಂದು ಭಾಗವಾಗಿ ಹೇಳುತ್ತಿದ್ದರು. ಈ ಕಥೆಗಳು ಮನಶುದ್ಧಿ ಮತ್ತು ಮನರಂಜನೆ ಹೀಗೆ ಎರಡು ಗುರಿಗಳನ್ನು ಹೊಂದಿದ್ದು, ಸಮಾಜ ಮತ್ತು ಕುಟುಂಬಗಳ ಸಾಮರಸ್ಯಕ್ಕೂ ಕಾರಣವಾಗುತ್ತಿದ್ದವು. ಈ ಮಾತು ಅಂದಿಗೂ ಸತ್ಯ ಮತ್ತು ಇಂದಿಗೂ ಸತ್ಯ. ಅತೀವ ಕಠಿಣ ತತ್ವಗಳನ್ನು ಈ ಕಥೆಗಳ ಮೂಲಕ ಸುಲಭವಾಗಿ ಅರಿಯಬಹುದಾಗಿದೆ. ಈಗ ಒಂದು ಮಹತ್ವದ

ಸಂದೇಶ ನೀಡುವ ವೇದಾಂತದ ಕತೆ ನೋಡೋಣ. ಇತ್ತೀಚೆಗೆ ಪತ್ರಿಕೆಯಲ್ಲಿ 'ವೇದಾಂತಿ ಹೇಳಿದ ಕತೆ' ಅಂಕಣದಲ್ಲಿ ಇದನ್ನು ಸಂಪಾದಿಸಿ ಪ್ರಕಟಿಸಿದವರು ಶಶಾಂಕ ಮದೂರಿ ಎಂಬವರು.

ಮನಸ್ಸು ಹಗುರಾಗಲಿ

ಒಬ್ಬನು ಪ್ರತಿ ಸಂಜೆ ಗುರುಗಳ ಬಳಿ ಸತ್ಸಂಗಕ್ಕೆ ಹೋಗುತ್ತಿದ್ದ. ಒಂದು ಸಂಜೆ ಅವನು ಇನ್ನೇನು ಹೋರಡಬೇಕು, ಆಗ ಅವನು ಸಾಕಿದ ಗಿಳಿ "ಪ್ರತಿದಿನ ಸಂಜೆ ಎಲ್ಲಿಗೆ ಹೋಗುವಿರಿ?" ಎಂದು ಕೇಳಿತು. ಅವನು "ನಾನು ದಿನವೂ ಈ ವೇಳೆಗೆ ಗುರುಗಳೊಬ್ಬರ ಬಳಿ ಸತ್ಸಂಗಕ್ಕೆ ಹೋಗುತ್ತೇನೆ" ಎಂದು ಹೇಳಿದ. ಗಿಳಿ "ಹಾಗಾದರೆ ನೀವು ನನಗೊಂದು ಉಪಕಾರ ಮಾಡುವಿರಾ? ನಿಮ್ಮ ಗುರುಗಳ ಬಳಿ ನನಗೆ ಸ್ವಾತಂತ್ರ್ಯ ಯಾವಾಗ ದೊರೆಯುತ್ತದೆ ಎಂದು ಕೇಳಿ ತಿಳಿಸುವಿರಾ?" ಅಂದಿತು. ಅಂದು ಸತ್ಸಂಗ ಮುಗಿದ ನಂತರ ಗುರುಗಳ ಬಳಿಹೋದ ಆ ಮನುಷ್ಯ "ಗುರುಗಳೇ, ಇಂದು ನಾನು ಸಾಕಿದ ಗಿಳಿ ತನಗೆ ಎಂದು ಸ್ವಾತಂತ್ರ್ಯ ಎಂದು ನಿಮ್ಮ ಬಳಿ ಕೇಳಿ ಬರುವಂತೆ ವಿನಂತಿಸಿದೆ" ಅಂದ. ಅವನು ಪ್ರಶ್ನೆ ಕೇಳಿದ್ದೇ ತಡ ಗುರುಗಳು ಸ್ಮೃತಿ ತಪ್ಪಿ ಮೂರ್ಛೆ ಹೋದರು. ಅವನು ಕೂಡಲೇ ಗುರುಗಳಿಗೆ ಗಾಳಿ ಹಾಕಿ, ಮುಖಕ್ಕೆ ನೀರು ಚಿಮುಕಿಸಿದ. ಗುರುಗಳು ಎಚ್ಚರವಾದ ನಂತರ ಮೌನವಾಗಿ ಧ್ಯಾನಕ್ಕೆ ತೊಡಗಿದರು. ಅವನು ಹೊರಟು ಬಂದ.

ಮನೆಗೆ ಬಂದಾಗ ಗಿಳಿ "ಗುರುಗಳ ಬಳಿ ನನ್ನ ಪ್ರಶ್ನೆ ಕೇಳಿದಿರಾ?" ಎಂದಿತು. ಅವನೆಂದ "ಕೇಳಿದೆ, ಆದರೆ ನಿನ್ನ ಪ್ರಶ್ನೆ ಕೇಳಿದ ಕೂಡಲೇ ಅವರು ಪ್ರಜ್ಞೆ ಕಳೆದುಕೊಂಡು ಬಿಟ್ಟರು, ನಾನೇ ಉಪಚರಿಸಿ ಬರಬೇಕಾಗಿ ಬಂತು. ಹೀಗಾಗಿ ನಿನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ" ಎಂದು ಹೇಳಿದ.

ಮರುದಿನ ಆತ ಸತ್ಸಂಗಕ್ಕೆ ಹೋಗುವಾಗ ಗಿಳಿ ಪಂಜರದಲ್ಲಿ ಸತ್ತುಹೋದಂತೆ ನಿಶ್ಚಲವಾಗಿ ಬಿದ್ದಿತ್ತು. ಅವನು ಪಂಜರ ತೆಗೆದು ಗಿಳಿಯನ್ನು ಪರೀಕ್ಷಿಸುವಾಗಲೇ ಪಕ್ಷಿ ರೆಕ್ಕೆ ಬಡಿದು ಹಾರಿ ಹೋಯಿತು. ಅವನು ಹೋಗಿ ಗಿಳಿಯ ವಿಚಾರ ಗುರುಗಳ ಬಳಿ ಹೇಳಿದ.

ಗುರುಗಳು "ಅದು ನನ್ನ ಆಜ್ಞೆಯನ್ನು ಪಾಲಿಸಿದೆ. ನೀನು ಎರಡು ವರ್ಷಗಳಿಂದ ಸತ್ಸಂಗಕ್ಕೆ ಬರುತ್ತೀಯಾ, ಆದರೆ ನನ್ನ ಮಾತುಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಲಿಲ್ಲ. ಸುಮ್ಮನೆ ಯಾಂತ್ರಿಕವಾಗಿ ಬಂದು ಕೂತು ಹೋಗುತ್ತೀಯಾ, ಆದರೆ ಗಿಳಿ ಇಲ್ಲಿಗೆ ಬರಲಿಲ್ಲ, ಆದರೆ ಇಲ್ಲಿ ನಡೆದುದನ್ನು ನೀನು ಹೇಳುತ್ತಲೇ, ಅದು ತಾನು ಹೇಗೆ ಸ್ವತಂತ್ರವಾಗಬಹುದು ಎಂಬುದನ್ನು ಅರ್ಥ ಮಾಡಿಕೊಂಡಿತು. ಸತ್ಸಂಗ ಸಮಯದಲ್ಲಿ ಮನಸ್ಸನ್ನು ಹಗುರುಗೊಳಿಸು. ನನ್ನ ಮಾತುಗಳೆಂದರೆ ಬರಿ ಮಾತುಗಳಲ್ಲ, ಅವುಗಳಲ್ಲಿ ಪರಂಪರೆಯ ಸಾರ ಅಡಗಿದೆ. ಮಾತುಗಳ ಒಳಾರ್ಥವನ್ನು ಅರಿತುಕೊ. ಸಂಕ್ರಮಣ ಅಂದರೆ ಸರಿಯಾದ ಸಮಯದಲ್ಲಿ ಆ ಗಿಳಿಯಂತೆ ರೆಕ್ಕೆ ಬಿಚ್ಚಿ ಹಾರಲು ತಯಾರಿರಬೇಕು. ಚಿಂತೆ ಇಲ್ಲದೇ ಇರುವಾಗ ಮಾತ್ರ ಸರಳವಾದ ವಿಚಾರಗಳನ್ನು ಕಲಿಯುವುದು ಸಾಧ್ಯ" ಎಂದು ಹೇಳಿದರು.

*****

ಗಿಣಿ ಕಚ್ಚಿದ ಹಣ್ಣು

– ಎಂ.ಎಸ್. ನರಸಿಂಹ ಮೂರ್ತಿ

ಪಿ.ಯು.ಸಿ. ಓದುತ್ತಿದ್ದ ದಿನಗಳು. ಪೋಲಿ ಪುಸ್ತಕಗಳನ್ನು ನನ್ನ ಕೆಲವು ಗೆಳೆಯರು ಕದ್ದು ಮುಚ್ಚಿ ಓದಿ ಖುಷಿ ಪಡುತ್ತಿದ್ದುದು ನನ್ನ ಗಮನಕ್ಕೆ ಬಂದಿತ್ತು. 'ಗಿಣಿ ಕಚ್ಚಿದ ಹಣ್ಣು' ಪುಸ್ತಕದ ಲೇಖಕ ಎನ್. ನರಸಿಂಹಯ್ಯ.

ನನ್ನ ಗೆಳೆಯನಿಂದ ಪುಸ್ತಕವನ್ನು ಎರವಲು ಪಡೆದು ನಾನೂ ಓದಿದೆ. ಮೈ ಜುಂ ಎಂದಿತು. ಇಡೀ ರಾತ್ರಿ ನಿದ್ದೆ ಬರಲಿಲ್ಲ. ಹೆಣ್ಣಿನ ವರ್ಣನೆ ಪರಾಕಾಷ್ಠೆ ಮುಟ್ಟಿತ್ತು. ಅವಳು ತೊಟ್ಟಿದ್ದ ಬಿಳಿ ಕುಪ್ಪಸ, ರಂಗುರಂಗಾದ ಸೀರೆ, ಅವಳು ಬಿಡುತ್ತಿದ್ದ ಏದುಸಿರು ಮತ್ತು ಪ್ರಿಯಕರನ ಜೊತೆಯಲ್ಲಿನ ಚೆಲ್ಲಾಟ ಇವೆಲ್ಲವನ್ನೂ ದೃಶ್ಯ ರೂಪದಲ್ಲಿ ಎನ್.ನರಸಿಂಹಯ್ಯ ಕಟ್ಟಿಕೊಟ್ಟಿದ್ದರು. ಬರೀ ಟೆಕ್ಸ್ಟ್ ಬುಕ್ ಓದಿ ಬೋರಾಗಿದ್ದ ನನಗೆ ಮತ್ತೆ ಮತ್ತೆ 'ಗಿಣಿ ಕಚ್ಚಿದ ಹಣ್ಣು' ಓದುವಂತೆ ಮಾಡಿತ್ತು.
ಹದಿಹರೆಯದ ಕ್ಲೈಮ್ಯಾಕ್ಸ್ ನಲ್ಲಿದ್ದೆ. ಹದಿನೆಂಟರ ರ ಪ್ರಾಯ. teen age ಎಂದರೆ thirteen ನಿಂದ nineteen ಗೆ ಮುಗಿಯುತ್ತೆ.

ಎನ್. ನರಸಿಂಹಯ್ಯನವರ ಪುಸ್ತಕಗಳಿಗಾಗಿ ಬಳೆಪೇಟೆಯ ಲೈಬ್ರರಿಗೆ ಹೋಗಲಾರಂಭಿಸಿದೆ. ಒಂದು ವಾರಕ್ಕೆ ಒಂದು ಪುಸ್ತಕಕ್ಕೆ 50 ಪೈಸೆ ಬಾಡಿಗೆ. ಸಾಲುಸಾಲಾಗಿ ಅಲ್ಲಿ ಅವರ ಪುಸ್ತಕಗಳಿದ್ದವು. 'ಪತ್ತೇದಾರಿ ಪುರುಷೋತ್ತಮ', 'ಗಾಳಿರಾಯ', 'ಅರಿಂಜಯ', 'ಮಧುಸೂದನ' ಮೊದಲಾದ ಹೀರೋಗಳಿದ್ದ ಕೃತಿಗಳನ್ನು ಎನ್.ನರಸಿಂಹಯ್ಯ ಬರೆದಿದ್ದರು. ಜನ ಹುಚ್ಚೆದ್ದು ಓದುವಂತೆ ಮಾಡಿದ್ದರು.

'ಭಯಂಕರ ಭೈರಾಗಿ' ಎಂಬ ಅವರ ಪುಸ್ತಕವನ್ನು ಓದಿದಾಗ ನಾನು ಅದೆಷ್ಟು ಭಯಪಟ್ಟಿದ್ದೆ ಎಂದರೆ ಇಡೀ ರಾತ್ರಿ ಲೈಟ್ ಹಾಕಿಕೊಂಡೇ ಮಲಗಿದ್ದೆ. ತಲೆ ದಿಂಬಿನ ಕೆಳಗೆ ಎಕ್ಕಡ ಇಟ್ಟುಕೊಂಡಿದ್ದೆ. ಮಂತ್ರ, ಮಾಟ, ಸ್ಮಶಾನ, ಬಾಳೆಎಲೆ ಮೇಲೆ ಮಲಗಿಸಿದ ಹೆಣ್ಣಿನ ಹೆಣ! ಭಯದಲ್ಲೂ ಬಿಡದೆ ಓದುವಂತಿದ್ದ ಶೈಲಿ! ಒಂದು ರಾತ್ರಿ ಹಾಸಿಗೆ ನೆನೆದು ತೊಪ್ಪೆಯಾಗಿತ್ತು. ಆ ಪುಸ್ತಕದ 35 ಸಾವಿರ ಪ್ರತಿಗಳು ಮಾರಾಟ ಆಗಿದ್ದು ಆ ಕಾಲಕ್ಕೆ ಬಹುದೊಡ್ಡ ದಾಖಲೆ.

ವರ್ಷ 1991. ಮೈಸೂರು ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿದ್ದಾಗ ಫ್ಲ್ಯಾಷ್ ಬ್ಯಾಕಿನಲ್ಲಿ ಇವನ್ನೆಲ್ಲಾ ಯೋಚಿಸುತ್ತಿದ್ದೆ. 550 ಕೃತಿಗಳನ್ನು ಬರೆದ ಎನ್.ನರಸಿಂಹಯ್ಯ ಅವರನ್ನು ಜನ ಮರೆತಿದ್ದರು. ಅವರು ಹದಿನೆಂಟು ಪೋಲಿ ಪುಸ್ತಕಗಳನ್ನು ಬರೆದಿರಬಹುದು. ಆದರೆ ಉಳಿದವು ಅದ್ಭುತ ಪತ್ತೇದಾರಿ ಕೃತಿಗಳು. ಬ್ಯಾಂಕಿನ ರಾಜ್ಯೋತ್ಸವಕ್ಕೆ ಅವರನ್ನು ಕರೆಸಿ ಸನ್ಮಾನ ಮಾಡಲು ನಿರ್ಧರಿಸಿ ಸಮಿತಿಯವರನ್ನು ಒಪ್ಪಿಸಿದೆ. ಕಾರ್ಯದರ್ಶಿ ಸೂರ್ಯಕಾಂತ್ ಸಹ ಎನ್.ನರಸಿಂಹಯ್ಯ ಅವರ ಕೃತಿಗಳನ್ನು ಓದಿ ಖುಷಿ ಪಟ್ಟರು. ಸನ್ಮಾನ ಮತ್ತು ನಿಧಿ ಅರ್ಪಣೆ ಎಂದು ಚರ್ಚೆ ಮಾಡಿದಾಗ ಕೆಲವರು ಮೂಗು ಮುರಿದಿದ್ದರು.

ಬೇರೆ ಸಾಹಿತಿಗಳು ನಿಮಗೆ ಸಿಗಲಿಲ್ವಾ ಎಂದರು. ಈಗ ಅವರು ಚಾಲ್ತಿಯಲ್ಲಿಲ್ಲದಿರಬಹುದು. ಆದರೆ ಒಂದು ಕಾಲಕ್ಕೆ ಕನ್ನಡಿಗರಲ್ಲಿ ವಾಚನಾಭಿರುಚಿಯನ್ನ ಅತ್ಯದ್ಭುತವಾಗಿ ಬೆಳೆಸಿದ್ದು ಎನ್. ನರಸಿಂಹಯ್ಯ ಎಂದು ನಾನು ವಿವರಿಸಿದೆ.

ಎಪ್ಪತ್ತರ ದಶಕದಲ್ಲಿ ಅವರ ಕೃತಿಗಳನ್ನು ಓದದ ಕನ್ನಡಿಗನೇ ಇರಲಿಲ್ಲ ಎನ್ನಬಹುದು. ಜನರು ಕಾದಂಬರಿಗಳಿಗೆ ಮುಗಿ ಬೀಳುವಂತೆ ಮಾಡಿದ್ದು ಎನ್.ನರಸಿಂಹಯ್ಯನವರ ಆಕರ್ಷಕ ಶೈಲಿ.

ಅವರನ್ನು ಸಮಾರಂಭಕ್ಕೆ ಕರೆತರಲು ನಾನು ಮತ್ತು ಕಾರ್ಯದರ್ಶಿ ಸೂರ್ಯಕಾಂತ್ ರಾಜಾಜಿನಗರದ ಎಂಟ್ರೆನ್ಸ್ ಬಳಿಗೆ ಹೋದೆವು. ನೀಲಿ ಗೇಟಿನ ಮನೆ. ಎನ್.ನರಸಿಂಹಯ್ಯ ಅವರನ್ನು ಮೊದಲ ಬಾರಿಗೆ ನೇರವಾಗಿ ನೋಡಿ ನನಗೆ ಷಾಕ್ ಆಯಿತು. ಐದಡಿಯ ಪುಟ್ಟ ಹುಡುಗನಂತೆ ಕಂಡರು. ತೆಳುವಾದ ವ್ಯಕ್ತಿ. 45 ಕೇಜಿ ತೂಕ. ಪಂಚೆ ಉಟ್ಟು ಸರಳವಾದ ಷರಟು ಧರಿಸಿದ್ದರು. ನಮ್ಮ ಗಾಬರಿ ಅವರಿಗೆ ಅರ್ಥವಾಗಿತ್ತು.

“ನನ್ನ ನೋಡಿ ನೀವು ಷಾಕ್ ಆದಿರಿ ಅಲ್ವಾ?” ನರಸಿಂಹಯ್ಯನವರೇ ಒಂದು ಘಟನೆ ವಿವರಿಸಿದರು.

“ಕಳೆದ ವರ್ಷ ನಾನು ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ನಿಗೆ ಒಂದು ಕೇಸಲ್ಲಿ ಸಾಕ್ಷಿ ಕೊಡೋಕೆ ಅಂತ ಹೋಗಿದ್ದೆ. ಅಲ್ಲೊಬ್ಬ ಕಾನ್ಸ್ಟೇಬಲ್ ನನ್ನ ಕಾದಂಬರಿಯನ್ನೇ ಚಪ್ಪರಿಸಿಕೊಂಡು ಓದುತ್ತಾ ಕುಳಿತಿದ್ದ. ನಾನು ಹೋಗಿ ನಿಂತರೂ ನನ್ನತ್ತ ನೋಡಲಿಲ್ಲ.

“ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ನಾನು ಎನ್.ನರಸಿಂಹಯ್ಯ ಸಾರ್. ನೀವು ಓದ್ತಾ ಇದ್ದೀರಲ್ಲ, ಆ ಪುಸ್ತಕ ನಾನೇ ಬರೆದಿದ್ದು’ ಎಂದೆ. ಅವನಿಗೆ ಕೋಪ ಉಕ್ಕಿ ಬಂತು.

“ಅಂಥ ದೊಡ್ಡ ಸಾಹಿತಿ ಎಲ್ಲಿ, ನೀನೆಲ್ಲಿ. ಅವನ ಹೆಸರನ್ನೇ ದುರುಪಯೋಗ ಮಾಡೋಕೆ ಎಷ್ಟು ದಮ್ಮು?” ಎಂದು ಎಗರಿ ಬಿದ್ದ. ಅಷ್ಟರಲ್ಲಿ ನನ್ನ ಜೊತೆ ಇದ್ದವರು,

“ಇವರೇ ಆ ಸಾಹಿತಿ. ಬೇಕಿದ್ದರೆ ಬಳೇಪೇಟೆಯ ಪ್ರಕಾಶಕರನ್ನು ಕೇಳಿ ಎಂದೆಲ್ಲಾ ಹೇಳಿದಾಗ ಆ ಕಾನ್ಸ್ಟೇಬಲ್ ದಿಢೀರನೆ ನನ್ನ ಕಾಲಿಗೆ ಬಿದ್ದ. ನಿಮ್ಮ ನೂರಾರು ಪುಸ್ತಕಗಳನ್ನ ಓದಿದ್ದೀನಿ ಸಾರ್. ನಿಮ್ಮಿಂದ ಕನ್ನಡ ಕಾದಂಬರಿಗಳು ಓದುವ ಚಾಳಿ ಬಂತು” ಎಂದು ಹೇಳಿ ಕಾಫಿ ತರಿಸಿಕೊಟ್ಟಿದ್ದ ಎಂಬುದನ್ನು ನರಸಿಂಹಯ್ಯ ಸ್ವಾರಸ್ಯಕರವಾಗಿ ಹೇಳಿದರು.

ವರ್ಷ 1991ರಲ್ಲಿ ಮೈಸೂರು ಬ್ಯಾಂಕ್ ರಾಜ್ಯೋತ್ಸವದಲ್ಲಿ ಅವರಿಗೆ ಸನ್ಮಾನ ಮತ್ತು ನಿಧಿ ಸಮರ್ಪಣೆ ಆಯಿತು. ನಮ್ಮ ಆಹ್ವಾನ ಪತ್ರಿಕೆ ನೋಡಿದ ಆಕಾಶವಾಣಿಯವರು ನರಸಿಂಹಯ್ಯ ಅವರನ್ನು ಕರೆಸಿದರು. ಅನೇಕ ಕಡೆ ಚೀಫ್ ಗೆಸ್ಟ್ ಆಗಿ ಹೋಗುವ ಅವಕಾಶ ಅವರಿಗೆ ದೊರೆಯಿತು. ಇದಕ್ಕೆ ಮೈಸೂರು ಬ್ಯಾಂಕ್ ಕಾರಣ ಎಂದು ಎಷ್ಟೋ ಸಲ ಅವರು ಹೇಳಿದ್ದರು.

1992ರಲ್ಲಿ ದಾವಣಗೆರೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಸನ್ಮಾನಿಸಲಾಯಿತು. 1997ರಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂತು.

ಒಂದು ಯೂನಿವರ್ಸಿಟಿಯವರು ಮಾಡುವ ಕೆಲಸ ಎನ್.ನರಸಿಂಹಯ್ಯನವರು ಮಾಡಿದ್ದಾರೆ. ಅವರು ಬರೆದಿರುವ ಪೋಲಿ ಪುಸ್ತಕಗಳನ್ನು ಪಕ್ಕದಲ್ಲಿಟ್ಟು ನೋಡಿದರೆ ಅವರ ಪತ್ತೇದಾರಿ ಕಾದಂಬರಿಗಳು ಇಂಗ್ಲಿಷ್ ಥ್ರಿಲ್ಲರುಗಳಂತಿವೆ. ಕೇವಲ 4ನೇ ಕ್ಲಾಸಿನವರೆಗೆ ಓದಿದ ಎನ್.ನರಸಿಂಹಯ್ಯನವರು ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಬೆಳೆಸಿದವರು. ಜನ ಮರೆತಿದ್ದ ಕಾಲದಲ್ಲಿ ಅವರನ್ನ ಮೈಸೂರು ಬ್ಯಾಂಕಿಗೆ ಕರೆತಂದು ಸನ್ಮಾನಿಸುವ ಅವಕಾಶ ಸಿಕ್ಕ ಬಗ್ಗೆ ನನಗೆ ಇಂದಿಗೂ ಹೆಮ್ಮೆ ಇದೆ.

*****

ಮಣ್ಣಿನ ಧೀರಧ್ಯಾನ

– ಶಾಂತಿವಾಸು

ಕರಿಯೇನು? ಕುರಿಯೇನು? ಬಿದ್ದುದನುಣ್ಣುವ ಅವಳು ಬಾಯಿಲ್ಲದವಳು....

ನೀಯಾರೆಂದು ಕೇಳುವಳೇ? ನಿನ್ನ ಸ್ವಾದ ಹೇಳುವಳೇ? ಅರಗಿಸಿಕೊಳ್ವ ಕರುಳಿಲ್ಲದವಳು....

ಆಸೆಗೋ, ವೈರಾಗ್ಯಕೋ ನಿನ್ನಾಕರ್ಷಿಸಿ ನೀನಾಡುವ ನಾಟಕ ನೋಡುವ ಕಣ್ಣಿಲ್ಲದವಳು....

ಮಳೆಯೊಡನೆ ಬೆರೆತು, ಹರಿದು, ಬಸುರಾಗಿ ಫಲ ನೀಡುವ ಕಾಲಿಲ್ಲದವಳು....

ಮೌನಿ ನಾನು, ಧ್ಯಾನವೆನ್ನಂತರಾಳವೆಂದು ಸಾರುವ ಮಣ್ಣವಳು, ಧೀರ ಹೆಣ್ಣವಳು....

*****

ಪೆನ್ಸಿಲ್ ಎಂಬ ದಾರ್ಶನಿಕನ ಜೀವನ ದೃಷ್ಟಿ...!!

– ರಾಧಿಕಾ ವಿ ಗುಜ್ಜರ್

ಇಂದು ನಾನು ಸೀಸದ ಕಡ್ಡಿಯ ಜನ್ಮ ವೃತ್ತಾಂತ ಹಾಗೂ ಜೀವನವನ್ನು ಪ್ರಬಂಧ ರೂಪದಲ್ಲಿ ಬರೆಯುತ್ತಿದ್ದೇನೆ.

'ಅಯ್ಯೋ..... ಪ್ರೈಮರಿ ಶಾಲೆಯ ಮಕ್ಕಳಿಗೂ ಇದು ಗೊತ್ತು ಬಿಡಿ' ಅಂತಾ ಹುಬ್ಬೇರಿಸುತ್ತಿದ್ದೀರೇನೋ ಅಲ್ವಾ !!?
ಗೊತ್ತು.... ಅದು ಸಹಜ ಬಿಡಿ.   ಆದರೆ ಇದನ್ನು ನಮ್ಮ ಬದುಕಿನೊಡನೆ ಸಮೀಕರಿಸಬಹುದು ಅಲ್ವೇ?

ಈ ಒಂದು ಕೋನದಿಂದ ನನಗೆ ಕಂಡ ಕೆಲವು ವೈಶಿಷ್ಟ್ಯಗಳನ್ನು ಹಂಚಿಕೊಳ್ಳಬೇಕೆನಿಸಿ ಅದು ನನ್ನ ಪ್ರಬಂಧಕ್ಕೆ ಪ್ರೇರಣೆಯಾಯಿತು.

ಗ್ರಾಫೈಟ್ (ಇಂಗಾಲದ ಸಂಯುಕ್ತ – Graphite) ಹಾಗೂ ಜೇಡಿಮಣ್ಣನ್ನು (Clay) ನಾಲ್ಕು ದಿನಗಳ ಕಾಲ ಅರೆದು, ಧೂಳಿ ಗಿಂತಲೂ ಸಣ್ಣ ಹುಡಿಮಾಡಿ ನೀರು ಬೆರೆಸುತ್ತಾರೆ. ಈ ಮಿಶ್ರಣ ಒಣಗಿದ ನಂತರ 1800° ಫ್ಯಾರನ್ ಹೀಟ್ ಗೆ ಕಾಯಿಸಲು ಒಡ್ಡಿ, ಬರೆಯುವ ಸೀಸದ ಕಡ್ಡಿ/ಪೆನ್ಸಿಲ್ ಗೆ ಉಪಯೋಗಿಸಬಲ್ಲ ಸಣ್ಣ ಶಾವಿಗೆಯಂತಹ ನೇರ ಎಳೆಗಳನ್ನು ತಯಾರಿಸುತ್ತಾರೆ. ಎಂಟು ತೆಳು ಹಾಳೆಯಂತಹ ಹಲಗೆಯ ಪಟ್ಟಿಗಳ ಮಧ್ಯದಲ್ಲಿ ಈ ಮಿಶ್ರಣದ ಎಳೆಯನ್ನು ಇರಿಸಿ, ಅಂಟಿನಂತಹ ದ್ರವದ ಸಹಾಯದಿಂದ ಮೆಷಿನ್ ನಲ್ಲಿ ಹದವಾಗಿ ಒತ್ತಿ, ಸುರುಳಿ ಸುತ್ತಿ, ಕರಾರುವಾಕ್ ಅಳತೆಗೆ ಕತ್ತರಿಸುತ್ತಾರೆ. ನಂತರ ೫ ರಿಂದ ೮ ತೆಳು ಲೇಪಗಳ ಆಕರ್ಷಕ ಹೊರಬಣ್ಣವನ್ನು ಕೊಡುತ್ತಾರೆ. ಈಗ ನಾವು ಬರೆಯುವ ಪೆನ್ಸಿಲ್ / ಸೀಸದ ಕಡ್ಡಿ ಸಿದ್ಧ.

ನವಮಾಸಗಳ ಕಳೆದು ಜನ್ಮತಾಳಿದ ಶಿಶುವು, ಆಹಾರ, ಗಾಳಿ, ನೀರು, ಉಡುಪು, ಸಂಸ್ಕಾರ, ಶಿಕ್ಷಣ ಇತ್ಯಾದಿಗಳೊಡನೆ ಪೋಷಿಸಿಕೊಂಡು, ಸುರೂಪ ಪಡೆದು, ಬದುಕೆಂಬ ಪಯಣಕ್ಕೆ ಪ್ರಾಪ್ತ ವಯಸ್ಕನಾಗಿ/ಳಾಗಿ ನಿಂತಂತೆ.

ಇದು ಮೇಲ್ನೋಟವಾಯಿತು. ಈಗ ಒಳನೋಟವನ್ನು ನಮ್ಮ ಬದುಕಿಗೆ ಸಮೀಕರಿಸಿ ನೋಡುವ ಬನ್ನಿ.

1. ಸೀಸದ ಕಡ್ಡಿಯಿಂದ ಬರೆಯಬೇಕೆಂದರೆ, "ಕೈ" ಯೊಂದು ಬರೆಯುವ ಕಾರ್ಯವನ್ನು ನೆರವೇರಿಸುತ್ತದೆ.
   - ನಮ್ಮ ಬದುಕಲ್ಲಿ ಆ "ಕೈ" ಭಗವಂತ. ನಮ್ಮ ಬದುಕು ಪರಮಾತ್ಮನ ಪೂರ್ವನಿರ್ಣಯದ ನಿಯೋಜಿತ ಪ್ರಯಾಣ.

2. ಆಗಾಗ ಸೀಸದ ಕಡ್ಡಿಯಿಂದ ಬರೆಯುವುದನ್ನು ನಿಲ್ಲಿಸಿ, ಕೆತ್ತಿ, ಚೂಪು ಮಾಡಿ ಉತ್ತಮವಾಗಿ ಬರೆಯುವಂತೆ ಮರು ಸಿದ್ಧಗೊಳಿಸುತ್ತೇವೆ.
   - ನಾವು ಸಹಾ ನಮ್ಮ ಜೀವನದ ಪ್ರಯಾಣದಲ್ಲಿ ಆಗಾಗ ಓಟವನ್ನು ನಿಲ್ಲಿಸಿ ಕೊಂಚ ವಿಶ್ರಮಿಸಬೇಕು. ಮನಸ್ಸಿನಲ್ಲಿ ಮಂಥಿಸಬೇಕು. ಬದಲಾವಣೆಯಿಂದ ನೋವಾದರೂ ಸಹಾ ಹೊಸತನಕ್ಕೆ ತೆರೆದು ಕೊಂಡು ಜಡ್ಡುಗಟ್ಟಿದ, ಮಾಸಿದ, ಅನುಪಯುಕ್ತ ವಿಚಾರಗಳ ಪೊರೆಕಳಚಿ ಪುನಶ್ಚೇತನಗೊಳ್ಳಬೇಕು. ವಿವೇಕಿಗಳಾಗಬೇಕು.

3. ಅಳಿಸಿಹಾಕುವ ಸಾಧನ/ ರಬ್ಬರ್ ಬಳಸಿ ತಪ್ಪುಗಳಿದ್ದರೆ ಅಳಿಸಬೇಕು.

   - ರಬ್ಬರ್ ಎಂದರೆ ಸಲಹೆಗಳು. ಬದುಕಲ್ಲಿ ತಪ್ಪುಗಳನ್ನು ತಿದ್ದಿಕೊಂಡು, ತೊಡೆದು ಹಾಕುವುದು ಸಾರ್ಥಕ ಉನ್ನತೋಮುಖ ನಡೆಯ ಲಕ್ಷಣ.

4. ಹೊರಮೈಯ ಹೊಳೆವ ಆಕರ್ಷಕ ಬಣ್ಣ ಮುಖ್ಯವಲ್ಲ. ಒಳತಿರುಳಾದ ಸದೃಢ ಕಪ್ಪು ಸೀಸವೇ ಜೀವಾಳ.

   - ಮನುಷ್ಯನ ಕ್ರಿಯಾಶೀಲತೆ, ಸದ್ಗುಣಗಳು, ಒಳ್ಳೆಯತನ, ಸಕಾರಾತ್ಮಕ ಯೋಚನೆಗಳು ಆತನನ್ನು ಗುರ್ತಿಸುವ ಮಾನದಂಡವಾಗಬೇಕು.

5. ಒಮ್ಮೆ ಕೈಗೆ ತೆಗೆದುಕೊಂಡರೆ ಸಾಕು ಮೂಡುತ್ತದೆ. ಖಂಡಿತ ಬರೆಯುತ್ತದೆ.

   - ಮನುಷ್ಯನೂ ಅಷ್ಟೇ, ತಾನು ಇರುವಲ್ಲಿ ತನ್ನ ಛಾಪುಗಳನ್ನು ಮೂಡಿಸುತ್ತಾನೆ. ಹಾಗಾಗಿ ಅಡಿ ಇಟ್ಟಲ್ಲೆಲ್ಲಾ ಸಶಕ್ತ ಹೆಜ್ಜೆ ಗುರುತುಗಳನ್ನು ಮೂಡಿಸಬೇಕು.

6. ಪೆನ್ಸಿಲ್ ನಿಂದ ಬರೆಯುತ್ತಾ, ಕೆತ್ತುತ್ತಾ, ಉಪಯೋಗಿಸುತ್ತಾ ಹೋದಂತೆ ಅದು ಚಿಕ್ಕದಾಗುತ್ತದೆ.

   - ನಮ್ಮ ಜೀವತಾವಧಿಯೂ ಕೂಡಾ ಕಾಲದ ಜೊತೆ ನಡೆಯುತ್ತಾ ಕಡಿಮೆಯಾಗುತ್ತಿರುತ್ತದೆ. ಹಾಗಾಗಿ ಸಮಯದ ಮಿತಿ ಅರಿತು ಸಾರ್ಥಕವಾಗಿ ಬದುಕಬೇಕು.

7. ಪೆನ್ಸಿಲ್, ಕೊನೆಯ ಚುಕ್ಕಿಯಷ್ಟು ಉಳಿವ ಸೀಸದವರೆಗೂ ಬರೆಯುತ್ತದೆ.

   - ನಾವು ಸಹಾ ಕೊನೆಯ ಉಸಿರಿನವರೆಗೂ ಕಾಯಾ, ವಾಚಾ, ಮನಸಾ ಶುದ್ಧಾತ್ಮರಾಗಿ ಕಾಯಕ ಯೋಗಿಗಳಾಗಿ ಬದುಕಬೇಕು.

8. ಸೀಸದ ಕಡ್ಡಿಗೆ ಯಾವುದೇ ಮರುಪೂರಣ/ ರೀಫಿಲ್ ಇಲ್ಲ. ಯಾವುದೇ ಎರವಲು, ಸಹಾಯ, ಕಡ ಬೇಡದ, ಬಯಸದ ಸ್ವಯಂಪೂರ್ಣ. ಸಂಪೂರ್ಣ ಜೀವಿತ ಸ್ವಾವಲಂಬಿ.

   - ಮನುಷ್ಯನಿಗೆ ಇದು ಮಾದರಿ ನೀತಿ. ತನ್ನ ಬದುಕಿನ ಹೊಣೆ ಸಂಪೂರ್ಣ ತನ್ನದೆಂಬ ಅರಿವಿರಬೇಕು. ಯಾರಿಗೂ ಹೊರೆಯಾಗದೆ ಸ್ವಾವಲಂಬಿಯಾಗಿ ತನ್ನ ಶ್ರಮ ಹಾಗೂ ಬುದ್ಧಿಶಕ್ತಿಗೆ ದಕ್ಕಿದಷ್ಟರಲ್ಲೆ ತೃಪ್ತನಾಗಿ ಆನಂದೀಭಾವದಲ್ಲಿ ಬದುಕಬೇಕು.

9. ಎಂತಹ ಅವಘಡ, ದುರಂತ, ವಿಕೋಪದಿಂದ ತುಂಡಾದರೂ, ಈ ಪೆನ್ಸಿಲ್ ಎಂಬ ಧೀರ ಮತ್ತೆ ಸಾವರಿಸಿಕೊಂಡು ಉಳಿದ ಭಾಗದಿಂದಲೇ ಓಟಕ್ಕೆ ಸಿದ್ಧವಾಗುತ್ತದೆ.

   - ಜೀವನದಲ್ಲಿ ಏಳು-ಬೀಳು, ಅಪಘಾತ, ಹತಾಶೆ, ನಿರಾಸೆ, ಸೋಲು, ಸಾವು-ನೋವು ಏನುಂಟು... ಏನಿಲ್ಲ... ಅವೆಲ್ಲವನ್ನೂ ಮೀರಿ ಮತ್ತೆ ಗಟ್ಟಿಯಾಗಿ ನಿಂತು ಸಾವರಿಸಿಕೊಂಡು ಧೈರ್ಯದಿಂದ ಮುಂದೆ ನಡೆಯಬೇಕು

ನನ್ನ ಮತಿಗೆ ಹೊಳೆದಷ್ಟು ವಿಚಾರಗಳನ್ನು ಸಮೀಕರಿಸಿದ್ದೇನೆ. ತಮಗೇನಾದರೂ ಹೊಸ ವಿಚಾರಗಳು ಹೊಳೆದರೆ ಖಂಡಿತ ತಿಳಿಸಿ.

*****

ಕಷ್ಟು– ಬಿಳಿಯಾಟ

– ರೇಣುಕಾ ದೇಸಾಯಿ

ದೇಶದಿ ಸಂಪತ್ತು ತುಂಬಿದೆ, ನದಿಯಾಗಿ
ಹರಿದಿಹಳು ಲಕ್ಷ್ಮಿ ಝುರಿಝುರಿಯಾಗಿ
ಕೈ ಆಡಿಸಿ ಕಲಕುವರು ಕೊಳೆಯಾಗಿಸಿ
ಕಂಡಲ್ಲಿ ತುಂಬಿಡುವರು ಕಪ್ಪಾಗಿಸಿ

ಅವನೊಬ್ಬ ಸರಕಾರಿ ನೌಕರ ಬಂತು ಬಿಗುಮಾನ
ಏರಿತವನ ಹಣ ಸಂಪತ್ತು ಬೆಟ್ಟದ ಸಮಾನ
ತುಂಬಿಸಿಟ್ಟನದನು ಕೊಳಾಯಿ ಪೈಪುಗಳಲಿ
ಕಪ್ಪಾಗಿ ಕುಳಿತಳು ಲಕ್ಷ್ಮಿ ಕುದಿಯುತ ಅದರಲಿ

ಬೆಳಕು ಕಾಣಲು ಹಾತೊರೆದಳು ಅವಳು
ಇದ್ದಾಳೆ ಕಪ್ಪಾಗಿ? ಹೆಣ್ಣೊಬ್ಬಳು ಅವಳು
ಏರಿದಳು ಮಗಳ ಯೌವನದ ಚೀಲಕೆ
ನೂಕಿದಳು ಚೆಲುವೆಯ ಸ್ವೇಚ್ಚಾಚಾರಕೆ

ಬಂದಿತು ಮಗನಿಗೆ ಭರ್ಜರಿ ಕಾರು
ರಸ್ತೆಯಲ್ಲಿ ಅದರದೇ ಕಾರು ಬಾರು
ಹುಡುಗ ಬುದ್ಧಿಗೆ ತಿಳಿಯಲಿಲ್ಲ ಅದರ ಕಿಮ್ಮತ್ತು
ಲಗಾಮು ಇಲ್ಲದೆ ಓಡಿ ತೋರಿಸಿತು ತನ್ನ ಹಿಕ್ಮತ್ತು

ಬಿಳಿಯಾಗಲು ಲಕ್ಷ್ಮಿ ತಂದಳು ದಾಳಿಗಳ ಕುತ್ತು
ದುಃಖ ಭರಿಸಲು ಬೇಕು ಮನಕೆ ಮತ್ತು
ಕೈ ಬಿಟ್ಟ ಮಗ, ಮಗಳು, ಮಾನ ಸಂಪತ್ತು
ಸೆರೆ ಸೇರಿ, ಕೋರ್ಟು ಕಛೇರಿ
ಕರಗಿತು ಸಂಪತ್ತು ನೀರಾಗಿ ಬಿಳಿಯಾಗಿ

*****

ಅಶ್ರು ತರ್ಪಣ

– ರೇಣುಕಾ ದೇಸಾಯಿ

ಕಾಲನ ಕರೆಗೆ ಓ!.... ಗೊಟ್ಟ
ಮಹನೀಯರಿಬ್ಬರಿಗೂ ನಮ್ಮ ಅಶ್ರುತರ್ಪಣ
ಸರದಿಯಲ್ಲಿರುವೆವು ಎಲ್ಲಾ, ಬಂದಿಹುದು
ನಿಮ್ಮ ಸರದಿ ಇಂದು

ವಿಶ್ರಾಂತರಿಗೆ ಸ್ವಾಂತನ ಹೇಳುತ್ತ
ಲವಲವಿಕೆಯಿಂದ ಇದ್ದೀರಿ ಶಾಂತ
ಸುಕುಮಾರರು, ಹೊರಟು ನಿಂತಿರಿ
ಒಬ್ಬರ ಹಿಂದೆ ಇನ್ನೊಬ್ಬರು

ಬಣಗುಡುತಿದೆ ನೀವಿಲ್ಲದೆ ಕಛೇರಿ
ಬಂದ ನಾವುಗಳಿಗೆ ಹೇಳುವರಾರು ಸಮಜಾಯಿಷಿ
ನಿಂತಿಹರು ಕುಟುಂಬ ಪಿಂಚಣಿದಾರರು
ನಿಮಗೆ ತಮ್ಮ ಧನ್ಯವಾದಗಳ ಹೇಳಲು

ಸ್ವೀಕರಿಸಿ ಅಲ್ಲಿಂದಲೇ ಅವರ ನಮನ
ಹರಸಿ ನೀವಿಗ ಇರುವಿರಿ ಆ ಲೋಕದಲಿ
ಇಲ್ಲಿರುವ ನಿಮ್ಮ ಸ್ಥಾನ ಖಾಲಿಯಾಗಿರುವವು
ತುಂಬುವದು ಯಾರನ್ನು ಚಿಂತೆಯಿದೆ ನಮಗಿನ್ನು

*****

ಜೀವನ ಕಲಿಸಿದ ಪಾಠ

– ಮಾಲತಿ ಶ್ರೀನಿವಾಸನ್

ಈ ಜೀವನ ಕಲಿಸಿದ ಪಾಠ
ನಿತ್ಯ ಭವದಲಿ ಅತ್ತಿತ್ತ ನಿನ್ನ
ಉರುಳಾಟ.

೧. ಹಗಲು ಇರುಳಿನ ಕತ್ತಲು–ಬೆಳಕಿನ
ಚಿನ್ನಾಟ ಕಣ್ಣುಮುಚ್ಚಾಲೆಯಾಟ
ದಿನನಿತ್ಯ ಕಣ್ಣುಮುಚ್ಚಾಲೆಯಾಟ (ಈ ಜೀವನ. . .)

೨. ಒಮ್ಮೊಮ್ಮೆ ಮೇಲೆ ಮತ್ತೊಮ್ಮೆ
ಕೆಳಗೆ ಏರಿ ಜಾರುವ ಆಟ
ಮೋಜಿನ ಹಾವು–ಏಣಿಯಾಟ
ಮೋಜಿನ ಹಾವು–ಏಣಿಯಾಟ (ಈ ಜೀವನ. . .)

೩.ಮೂರಕ್ಕೆ ಇಳಿಯದೆ ಆರಕೆ ಏರದೆ
ಇರಲು ಎಲ್ಲ ಸೆಣಸಾಟ
ಸೂತ್ರಧಾರಿಯ ಮುಷ್ಟಿಯ ಹಿಡಿತದ
ಆಡುವ ಗೊಂಬೆ ಆಟ
ಎಲ್ಲವು ಆಡುವ ಗೊಂಬೆಯಾಟ (ಈ ಜೀವನ. . .)

೪.ಏನು ಗಳಿಸಿದರು ಏನು ಉಳಿಸಿದರು
ಬೊಗಸೆಯ ಹಿಡಿತದಿ ತೂತು,
ನಿನಗೆಷ್ಟು ದಕ್ಕುವುದು, ಎಷ್ಟು ಜಾರುವುದೋ
ಹಣೆಬರಹದ ಮಾತು, ನಿನ್ನ
ಹಣೆಬರಹದ ಮಾತು (ಈ ಜೀವನ. . .)

೫. ಮನದಲಿ ಚೇತನ ತುಂಬಿ
ಆ ದೇವನ ಇರುವಿಕೆ ನಂಬಿ
ನಕ್ಕು ನಲಿಯುತ, ಸಂಭ್ರಮಿಸಿ
ಪಯಣದಿ, ನೀನಾಗು ಜಗದ
ಕಣ್ ಗೊಂಬಿ.

ಈ ಜೀವನ ಕಲಿಸಿದ ಪಾಠ
ನಿತ್ಯ ಭವದಲಿ ಅತ್ತಿತ್ತ ನಿನ್ನ
ಉರುಳಾಟ.

******

ಕೆಲವು ಕವನಗಳು ಹಾಗೆ

– ಮಾಲತಿ ಶ್ರೀನಿವಾಸನ್

ಕೆಲವು ಕವನಗಳು ಹಾಗೆ
ಕವಿ ಕಲ್ಪನೆಗೆ ಬೆರಗಾಗಿ,
ಪದ ಲಾಲಿತ್ಯಕೆ ಮನಸೋತು
ಮನದ ಭಾವ ಹೊಮ್ಮಿಸುವ
ಅರಿವಿಲ್ಲದೆ ರಾಗರೂಪಿಸುವ
ಗಿರಿಶಿಖರದ ಮೇಲಿಂದ
ಕೆಳಕಂದರಕೆ ಸಪೂರ ಜಾರುವ
ಜಲಧಾರೆಯಾ ಹಾಗೆ.

ಅರ್ಥೈಸಿದ ಭಾವವೋ ಒಳ
ಹರಿವನ ಚೇತನದ ಚಿಲುಮೆಯೋ
ಸಾಹಿತ್ಯದ ಸುಧೆಯೋ, ಮತ್ತೇರಿಸಿದಂತೆ
ಅದನೆ ಮತ್ತೆ ನುಡಿಯುವ ಪರಿಯೋ,
ರಾಗರೂಪಿಸುತ್ತ,ಸಾಗಿದಾಗ
ಶಾಂತತೆಯ ಸಾರ್ಥಕ್ಯಭಾವ ಮನದಿ.

ಕೆಲವು ಕವನಗಳು ಹಾಗೇನೆ ಬಚ್ಚಿಟ್ಟ
ಮನದ ಭಾವ,ಬಿಚ್ಚಿಟ್ಟ ಲಯದ
ಲಹರಿ,ಕಣ್ಣಹಾಯಿಸಿದಾಗೆಲ್ಲ,
ಶ್ರುತಿ ಹಿಡಿದು ಹಾಡಿದಾಗೆಲ್ಲ
ನೂತನತೆಯಲಿ ಮೆರೆದು
ಭಾವುಕರಾಗಿ, ಮೈಮರೆತು
ಮನತುಂಬಿ ಹಾಡಬೇಕೆನಿಸುವ ಹಾಗೆ.
ಹಾಡಬೇಕೆನಿಸುವ ಹಾಗೆ

*****

ಬೇರಿನ ಆಸರೆಯ ಸೆಲೆಯ ಹುಡುಕುತ್ತಾ

- ಜಿ. ವಿ. ಅರುಣ

ಒಮ್ಮೊಮ್ಮೆ ನಮಗೆ ಏನೂ ತಿಳಿದಿರದ, ಇಲ್ಲ ಅಸ್ಪಷ್ಟವಾಗಿ ತಿಳಿದಿರುವ, ನಮ್ಮ ಹಿರಿಯರ ಬಗ್ಗೆ ಇತರರು ಗೌರವಯುತವಾಗಿ ಮಾತನಾಡಿದರೆ ಹೆಮ್ಮೆ ಎನ್ನಿಸುತ್ತದೆ. ನಮಗೆ ಹೆಚ್ಚು ತಿಳಿದಿರದಿದ್ದರೂ ನಮ್ಮ ಹಿರಿಯರ ಅಂಥವರು, ಇಂಥವರು ಎಂದು ಊಹಾತ್ಮಕವಾಗಿ ಹೇಳಲು ಪ್ರಾರಂಭಿಸಿಬಿಡುತ್ತೇವೆ. ಆದರೆ ಕೆಲವರಿಗೆ ತಮ್ಮ ಮನೆತನದ ಹಿರಿಯರು ಅಷ್ಟು ಒಳ್ಳೆಯ ಹೆಸರು ಹೇಗೆ ಸಂಪಾದಿಸಿದರು? ಅವರ ಕಾರ್ಯಕ್ಷೇತ್ರ ಎಂಥದು? ಅವರು ಇದ್ದ ಪರಿಸರವು ಎಂಥದು? ಯಾರ, ಯಾರ ಪ್ರಭಾವ ಅವರ ಮೇಲೆ ಆಗಿದ್ದಿರಬಹುದು? ಅವರ ಕಾರ್ಯದ ಬಗ್ಗೆ ಗೌರವಯುತವಾಗಿ ಮಾತನಾಡಿದವರ ಹಿನ್ನೆಲೆ ಏನು? ಮುಂತಾಗಿ ಯೋಚನೆಗಳು ಬಂದುಬಿಡುತ್ತವೆ. ಆಗ ಅವರು ತಮ್ಮ ಬೇರಿನ ಆಸರೆಯ ಸೆಲೆಯನ್ನು ಹುಡುಕುತ್ತ ಹೊರಟ ಭಗೀರಥರಾಗುತ್ತಾರೆ.



ನಾನು ಇಂದು ಅಂಥ ಅನ್ವರ್ಥನಾಮದ ವ್ಯಕ್ತಿಯ ಹಾಗೂ ಅವರು ಬರೆದಿರುವ ಒಂದು ಪುಸ್ತಕದ ಬಗ್ಗೆ ತಿಳಿಸುತ್ತಿದ್ದೇನೆ. ಹೌದು, ಆತನ ಹೆಸರು **ಡಾ॥ ಭಗೀರಥ್ ಎಸ್. ನಾಗನಾಥ್. ಅವರು ಬರೆದ ಆಂಗ್ಲ ಪುಸ್ತಕ 'ಮೆಮೊರೆಬಲ್ ಮೈಸೂರಿಯನ್ಸ್'** [1]. ಅದರ ಕನ್ನಡ ಅನುವಾದ, **'ಮೈಸೂರಿನ ರತ್ನಗಳು'** (ಕನ್ನಡಕ್ಕೆ ಶ್ರೀ ಎಚ್.ಎಂ.ನಾಗರಾಜರಾವ್).

ಡಾ॥ ಭಗೀರಥ್ ಅವರು ಒಬ್ಬ ವೈದ್ಯರು, ಅರಿವಳಿಕೆ ತಜ್ಞರು, ಸದ್ಯಕ್ಕೆ ಇಂಗ್ಲೆಂಡಿನಲ್ಲಿ ಇದ್ದಾರೆ. ಈ ಅರಿವಳಿಕೆ ತಜ್ಞರಿಗೆ, ಹಿಂದೆ, ಅಂದರೆ ಸುಮಾರು ನೂರೈವತ್ತು ವರ್ಷಗಳಿಗೂ ಹಿಂದೆ, ಮೈಸೂರಿನಲ್ಲಿದ್ದ ಅನೇಕರ ಬಗ್ಗೆ ಆಸಕ್ತಿ ಹುಟ್ಟಿದ್ದಕ್ಕೆ ಒಂದು ಕಾರಣವಿದೆ. ಅದು ಅವರ ತಾತ ಡಾ॥ ಎಸ್.ಶ್ರೀಕಂಠಶಾಸ್ತ್ರಿಗಳು. ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಇತಿಹಾಸದ

---

[1] 'ಮೆಮೋರಬಲ್ ಮೈಸೂರಿಯನ್ಸ್, ಎ ಕಲೆಕ್ಶನ್ ಆಫ್ ಬಯೋಗ್ರಾಫಿಕಲ್ ಸ್ಕೆಚಸ್" ಡಾ॥ ಭಗೀರಥ್ ಎಸ್. ನಾಗನಾಥ್, ನೋಶನ್ ಪ್ರೆಸ್ ಮೀಡಿಯಾ ಪ್ರೈ ಲಿಮಿಟೆಡ್ ಚೆನ್ನೈ, *600 095, 2021; 164* ಪುಟಗಳು, ಪುಸ್ತಕದ ಬೆಲೆ ರೂ.*249/– (*ಐ ಎಸ್ ಬಿ ಎನ್ *978–1–68509–786–8.)*

ಪ್ರಾಧ್ಯಾಪಕರಾಗಿದ್ದವರು. ಅವರು ಕನ್ನಡದಲ್ಲಿ ಬರೆದ "ಭಾರತೀಯ ಸಂಸ್ಕೃತಿ" ಅನೇಕ ಮುದ್ರಣಗಳನ್ನು ಕಂಡ ಮೇರು ಕೃತಿ. ಮೈಸೂರನ್ನು ಮಹಾರಾಜರು ಆಳುತ್ತಿದ್ದ ಕಾಲದಲ್ಲಿಯೇ ತಮ್ಮ ಸಂಶೋಧನೆಗಳಿಂದ "ಸೋರ್ಸಸ್ ಆಫ್ ಕರ್ನಾಟಕ ಹಿಸ್ಟರಿ" ಎಂಬ ಗ್ರಂಥವನ್ನು ಬರೆದು ಕರ್ನಾಟಕದ ಇತಿಹಾಸಕ್ಕೆ ತಳಹದಿಯನ್ನು ಹಾಕಿಕೊಟ್ಟವರು. ಅಲ್ಲದೆ 'ಆರ್ಯರು ಎಲ್ಲಿಂದಲೋ ಬಂದವರು' ಎನ್ನುವ ಹೇಳಿಕೆಯನ್ನು ತಿರಸ್ಕರಿಸಿದ ಭಾರತೀಯ ಚರಿತ್ರಕಾರರ ಮೊದಲ ಸಾಲಿನಲ್ಲಿ ಡಾ॥ ಶ್ರೀಕಂಠ ಶಾಸ್ತ್ರಿಗಳ (1904 – 1974) ಹೆಸರು ಬರುತ್ತದೆ.

ಮನೆಯಲ್ಲಿ ಅವರ ಹಿರಿಮೆಯನ್ನು ಕೇಳುತ್ತ ಬೆಳೆದ ಭಗೀರಥ್ ಅವರ ಮನಸ್ಸನ್ನು ವಿಸ್ಮಯಗೊಳಿಸಿದ್ದು, ಮಿಥಿಕ್ ಸೊಸೈಟಿಯು ಆಚರಿಸಲು ಯೋಜಿಸಿದ ಡಾ॥ ಶ್ರೀಕಂಠಶಾಸ್ತ್ರಿಗಳ ಜನ್ಮ ಶತಮಾನೋತ್ಸವ. ಆ ಯೋಜನೆಯ ಸಂದರ್ಭದಲ್ಲಿ ತನ್ನ ತಾತನ ಬಗ್ಗೆ ಅದುವರೆಗೆ ತಿಳಿದಿದ್ದ ಎಲ್ಲ ವಿಚಾರಗಳನ್ನು ಪೋಣಿಸಿ ಒಂದು ಅಂತರಜಾಲ ತಾಣವನ್ನು ಅವರು ನಿರ್ಮಿಸಿದರು. ಆ ಸಂದರ್ಭದಲ್ಲಿ ನಡೆದ ಕಾರ್ಯಕ್ರಮಗಳೂ ಹೊರಬಂದ ಪುಸ್ತಕಗಳೂ ಅವರ ಮೇಲೆ ಭಾರಿ ಪ್ರಭಾವವನ್ನು ಬೀರಿದವು.

ನನಗೆ ಡಾ॥ ಶ್ರೀಕಂಠಶಾಸ್ತ್ರಿಗಳ ಹಿರಿಮೆಯ ಬಗ್ಗೆ ಅವರ ಶಿಷ್ಯರಾಗಿದ್ದ ನಮ್ಮ ತಂದೆಯವರಿಂದ ಅನೇಕ ಬಾರಿ ತಿಳಿದು ಬಂದಿತ್ತು. ನನಗೆ ಬರುತ್ತಿದ್ದ ಚರಿತ್ರೆಯ ಸಂದೇಹಗಳಿಗೆಲ್ಲ ತಂದೆಯವರು ಸೂಕ್ತ ವಿವರಣೆಗಳನ್ನು ಕತೆಯ ರೀತಿ ತಿಳಿಸುತ್ತಿದ್ದರು. ಭಾರತದ ಅದರಲ್ಲೂ ಕರ್ನಾಟಕದ ಚರಿತ್ರೆಯ ಬಗ್ಗೆ ಕರಾರುವಕ್ಕಾಗಿ ಅವರು ತಿಳಿಸುತ್ತಿದ್ದ ವಿಧಾನ ನನಗೆ ಹೊಸದಾಗಿ ಕಾಣುತ್ತಿತ್ತು. ಆಗೆಲ್ಲ ಶ್ರೀಕಂಠಶಾಸ್ತ್ರಿಗಳ ವಿಚಾರ ತಿಳಿಯುತ್ತಿತ್ತು. "ಚರಿತ್ರೆ ಎಂದರೆ ಏನು?" ಎಂಬುದಕ್ಕೆ ಪ್ರೊ॥ ಜಿ. ವಿ. ಅವರು ಡಾ॥ ಶ್ರೀಕಂಠಶಾಸ್ತ್ರಿಗಳನ್ನು ಕುರಿತ ಲೇಖನದಲ್ಲಿ ಹೀಗೆ ಬರೆದಿದ್ದಾರೆ[2].

> *"ಎಸ್. ಶ್ರೀಕಂಠಶಾಸ್ತ್ರಿಗಳು ನಮ್ಮ ತರಗತಿಗೆ ಬಂದ ಮೊದಲನೆಯ ದಿನ, ಅವರು ಪ್ರಾರಂಭದ ಪಾಠಮಾಡಿದಾಗ, ನಾವು ಕಲಿಯಬೇಕಾಗಿದ್ದ ವಿಷಯಗಳ ವ್ಯಾಪ್ತಿಯನ್ನು ಕುರಿತು ಭಯವಾಯಿತು. ಶಾಸ್ತ್ರಿಗಳು ಚರಿತ್ರೆಯೆನ್ನುವುದು ಒಂದು ಕಲೆಯಲ್ಲ, ಅದೊಂದು ವಿಜ್ಞಾನ, ಅದು ಪ್ರಪಂಚದಲ್ಲಿ ಮಾನವನ ವಿಕಾಸವನ್ನು ತಿಳಿಸುವ ವಿಜ್ಞಾನ, ಮಾನವನು ಇನ್ನೂ ವಿಕಾಸಗೊಳ್ಳುತ್ತಿದ್ದಾನೆ. ಇಲ್ಲಿಯವರೆಗೆ ಮಾನವನು ಸಾಧಿಸಿದ ಜೀವನವಿಧಾನಗಳನ್ನೂ ಮತೀಯ ತತ್ವಗಳನ್ನೂ ಆಡಳಿತ ವಿವರಗಳನ್ನೂ ಕಲೆಗಳ ವಿಕಾಸವನ್ನೂ ಸಾಹಿತ್ಯ, ಚಿತ್ರಕಲೆ, ಶಿಲ್ಪ, ನಾಟ್ಯ ಮುಂತಾದವುಗಳ ಬೆಳವಣಿಗೆಯನ್ನೂ ತಿಳಿಸುವ ವಿಜ್ಞಾನವಿದು. ಇದು ದೇಶದೇಶಕ್ಕೆ ಬೇರೆಯಾಗಿದೆ. ವಿಶ್ವದ ಅಗಾಧವಾದ ವಿಸ್ತಾರದಲ್ಲಿ ಏನೇನು ಸಾಧಿತವಾಗಿದೆಯೋ ಅವೆಲ್ಲ ಪರಸ್ಪರ ಸಂಬಂಧವುಳ್ಳವು. ಅವು ಮಾನವ ವಿಕಾಸವನ್ನು ಸಷ್ಟಪಡಿಸುತ್ತವೆ - ಚರಿತ್ರೆಯನ್ನು ಈ ದೃಷ್ಟಿಯಿಂದ ಅಭ್ಯಾಸ ಮಾಡಬೇಕು. ಕರ್ನಾಟಕದ ಚರಿತ್ರೆಯು ಪ್ರಪಂಚದ ಚರಿತ್ರೆಗೆ ನೀಡಿರುವ ವಿಷಯಗಳನ್ನು ಗುರುತಿಸುವುದು ನಮ್ಮ ಕೆಲಸ, ಮುಂತಾಗಿ ಶ್ರೀಕಂಠಶಾಸ್ತ್ರಿಗಳು ತಿಳಿಸಿದ ಅಂದಿನ ಉಪನ್ಯಾಸ ಇನ್ನೂ ಕಿವಿಯಲ್ಲಿ ಅನುರಣಿಸುತ್ತಿದೆ."*

---

2 (ಪ್ರೊ॥ ಜಿ. ವೆಂಕಟಸುಬ್ಬಯ್ಯ, ಸಿರಿಗನ್ನಡ ಸಾರಸ್ವತರು ಪುಟ : *353)*

2016ರ ವೇಳೆಗೆ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಸಂದರ್ಭದಲ್ಲಿ ಆ ವಿಶ್ವವಿದ್ಯಾನಿಲಯದ ಚರಿತ್ರೆ ಹಾಗೂ ಅದರ ಪ್ರತಿಭಾನ್ವಿತ ಗುರುಶಿಷ್ಯ ಪರಂಪರೆಗಳು ಮತ್ತೆ ಮುನ್ನೆಲೆಗೆ ಬಂದು ನೆನೆಪಿನ ಸುರುಳಿಗಳು ಬಿಚ್ಚಿಕೊಂಡವು. ಆಗ ಡಾ।। ಭಗೀರಥ್ ಅವರು ಆ ಸ್ವರ್ಣಯುಗದ ಹಿನ್ನೆಲೆಯಲ್ಲಿ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗೆ ಇಂಗ್ಲಿಷಿನಲ್ಲಿ ಅನೇಕ ಲೇಖನಗಳನ್ನು ಬರೆದರು. ಅವುಗಳಲ್ಲಿ ಆ ಸಮಯದ ಮೈಸೂರಿನ ವಿಶಿಷ್ಟ ವ್ಯಕ್ತಿಗಳ ಚಿತ್ರವನ್ನು ಕಟ್ಟಿಕೊಟ್ಟಿದ್ದರು. ಅವರಲ್ಲಿ ಆಕರ್ಷಕವಾಗಿ ಕಂಡ ವಿಚಾರಗಳನ್ನು ತಮ್ಮದೇ ಮಾತುಗಳಲ್ಲಿ ನೀಡಿದ್ದರು. ಹಾಗಾಗಿ ಅದು ಜನಪ್ರಿಯ ಲೇಖನಗಳಾದವು. ಎಲ್ಲರ ವ್ಯಕ್ತಿ ಚಿತ್ರಣಗಳಿಗೆ ಅವರು ಒಂದೇ ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಂಡಿಲ್ಲ. ಆದ್ದರಿಂದ ಫ್ರೀ ವೀಲಿಂಗ್ ರೀತಿಯ ಈ ಬರಹಗಳು ಒಂದು ರೀತಿಯ ಆತ್ಮೀಯತೆಯನ್ನು ತಂದುಕೊಡುತ್ತವೆ.

ಮೈಸೂರು ವಿಶ್ವವಿದ್ಯಾನಿಲಯವು ಪ್ರಾರಂಭವಾಗುವುದು ಎಂಬ ಯಾವ ಸೂಚನೆಯೂ ಇಲ್ಲದಿದ್ದಾಗ ಹೆಚ್.ವಿ. ನಂಜುಂಡಯ್ಯನವರು ಮಹಾರಾಜರ ಆಡಳಿತದಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. ಜಿಲ್ಲಾಧಿಕಾರಿಯಾಗಿ, ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ಆಗ ವಿದ್ಯಾಭ್ಯಾಸಕ್ಕೆ ಅನೇಕ ಸುಧಾರಣೆಗಳನ್ನು ತಂದರು. ಇವುಗಳ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಯೋಜನೆಗಳು ಸಿದ್ಧವಾಗುವಾಗ ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರೇ ವಿಶ್ವವಿದ್ಯಾಲಯವು ಸ್ಥಾಪನೆಯಾದಾಗ ಅದರ ಮೊದಲ ಕುಲಪತಿಗಳಾದರು. ಅವರು ಮಾಡಿದ ಮೊದಲ ಕಾರ್ಯ ಎಂದರೆ ದೇಶ ವಿದೇಶಗಳಿಂದ ಅತ್ಯುತ್ತಮ ಪ್ರಾಧ್ಯಾಪಕರನ್ನು ಆಹ್ವಾನಿಸಿ ನೇಮಿಸಿಕೊಂಡದ್ದು. ಈ ವಿಚಾರಗಳೆಲ್ಲ ಹೆಚ್.ವಿ. ನಂಜುಂಡಯ್ಯನವರ ಬಗ್ಗೆ ಬರೆದಿರುವ ಲೇಖನದಲ್ಲಿ ಬಂದಿವೆ.

ಹಾಗೆಯೇ ಹನ್ನೆರಡನೇ ಶತಮಾನದಲ್ಲಿ ಪ್ರಚಲಿತವಿದ್ದ ಚಾಣಕ್ಯನ ಅರ್ಥಶಾಸ್ತ್ರವು ಇದ್ದಕ್ಕಿದ್ದಂತೆ ಮರೆಯಾಗಿ ಹೋಗಿತ್ತು. ಮೈಸೂರಿನ ಒರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟಿನಲ್ಲಿ ಆರ್.ಶಾಮಾಶಾಸ್ತ್ರಿಗಳಿಂದ ಅದು ಮತ್ತೆ ಪತ್ತೆಯಾಗಿ 1909ರಲ್ಲಿ ಪ್ರಚಲಿತವಾಯಿತು. ಹಾಗೆ ಚಾಣಕ್ಯನ ಮರುಹುಟ್ಟಿಗೆ ಮೈಸೂರು ಕಾರಣವಾಯಿತು. ಇದು ಹಾಗೂ ಅವರ ಇತರ ಕಾರ್ಯಗಳು ಡಾ॥ ಆರ್.ಶಾಮಾಶಾಸ್ತ್ರಿಗಳ ವ್ಯಕ್ತಿಚಿತ್ರದಲ್ಲಿ ಚೆನ್ನಾಗಿ ಮನದಟ್ಟಾಗುತ್ತದೆ.

ಈ ಪುಸ್ತಕದಲ್ಲಿನ 20 ವ್ಯಕ್ತಿಗಳೆಲ್ಲರೂ ಶಿಕ್ಷಣ ಕ್ಷೇತ್ರಕ್ಕೆ ಸೇರಿದವರಲ್ಲ. ಚಿತ್ರಕಾರರಾದ ಕೆ. ವೆಂಕಟಪ್ಪ, ಪಿಟೀಲು ಚೌಡಯ್ಯ, ಸೇನೆಯ ಮಹಾದಂಡನಾಯಕ ಜನರಲ್ ಕಾರ್ಯಪ್ಪ, ಸ್ವಾತಂತ್ರ್ಯ ಹೋರಾಟ, ಸ್ವಾತಂತ್ರ್ಯ ಹೋರಾಟದಲ್ಲಿ ಮನ್ನಣೆ ವಂಚಿತ ನಾಯಕ ವೈ.ಜಿ.ಕೃಷ್ಣಮೂರ್ತಿ, ಮೂವರು ಪ್ರಧಾನಿಗಳಿಗೆ ಪತ್ರಿಕಾ ಕಾರ್ಯದರ್ಶಿಯಾಗಿದ್ದ ಎಚ್.ವೈ. ಶಾರದಾ ಪ್ರಸಾದ್, ಖ್ಯಾತ ಕಾದಂಬರಿಗಾರ್ತಿ ತ್ರಿವೇಣಿ, ಖ್ಯಾತ ಲೇಖಕ ಹಾಗೂ ಪತ್ರಕರ್ತ ನಾಡೋಜ ಎಸ್.ಆರ್. ರಾಮಸ್ವಾಮಿ ಅವರ ಬಗ್ಗೆಯೂ ಲೇಖನಗಳಿವೆ.

ಪಿಟೀಲು ಚೌಡಯ್ಯನವರ ಮತ್ತು ಶ್ರೀಕಂಠಶಾಸ್ತ್ರಿಗಳ ಸ್ನೇಹದ ಸಂಬಂಧ ಹೃದಯವನ್ನು ತಟ್ಟುತ್ತದೆ. ಒಮ್ಮೆ ಅನಾರೋಗ್ಯದಿಂದ ಆಸ್ಪತ್ರೆಗೆ ಸೇರಿದ್ದು, ಗುಣವಾದ ಮೇಲೆ ಶ್ರೀಕಂಠಶಾಸ್ತ್ರಿಗಳು ಮನೆಗೆ ಹಿಂದಿರುಗಿದರು. ಆಗ ಚೌಡಯ್ಯನವರು, ಶಾಸ್ತ್ರಿಗಳು

ಪ್ರಫುಲ್ಲರಾಗಿ ಬೇಗ ಗುಣಮುಖರಾಗಲೆಂದು ಇವರ ಮನೆಗೆ ಬಂದು ಕಚೇರಿ ಮಾಡಿದರು. ಇಂಥ ಅನೇಕ ಪ್ರಸಂಗಗಗಳು ಈ ಪುಸ್ತಕದಲ್ಲಿವೆ.

ಈ ಪುಸ್ತಕದಲ್ಲಿ ಚಿತ್ರಿತರಾಗಿರುವ ಇತರ ವ್ಯಕ್ತಿಗಳಲ್ಲಿ ಅನೇಕರು ಡಾ॥ ಶ್ರೀಕಂಠಶಾಸ್ತ್ರಿಗಳ ಹಿರಿಯರಾಗಿ, ಸಮಕಾಲೀನರಾಗಿ ಇಲ್ಲವೆ ವಿದ್ಯಾರ್ಥಿಗಳಾಗಿ ಸಂಪರ್ಕದಲ್ಲಿದ್ದವರು. ಅವರುಗಳ ಪಟ್ಟಿಯೇ ರೋಮಾಂಚನವನ್ನು ಉಂಟುಮಾಡುತ್ತದೆ: ೧) ಎಚ್.ವಿ. ನಂಜುಂಡಯ್ಯ, ೨) ಬ್ರಜೇಂದ್ರನಾಥ ಸೀಲ್, ೩) ಆರ್. ಶಾಮಾಶಾಸ್ತ್ರಿ, ೪) ಎಂ. ಹಿರಿಯಣ್ಣ, ೫) ಎಂ.ಎಚ್. ಕೃಷ್ಣ, ೬) ವಿ. ಸೀ., ೭) ಡಿ.ಎಲ್. ನರಸಿಂಹಾಚಾರ್ಯ, ೮) ಜಿ.ವೆಂಕಟಸುಬ್ಬಯ್ಯ, ೯) ಎಂ. ಷಡಕ್ಷರಸ್ವಾಮಿ ೧೦) ಎಚ್ಚೆಸ್ಕೆ ೧೧) ಎಚ್.ಎನ್. ಮೂರ್ತಿ ೧೨) ಟಿ.ವಿ. ವೆಂಕಟಾಚಲ ಶಾಸ್ತ್ರಿ.



ಈ ಪುಸ್ತಕದಲ್ಲಿ ತ್ರಿವೇಣಿ ಅವರನ್ನು ಕುರಿತ ಲೇಖನದಲ್ಲಿ ಹಲವು ಚಿತ್ರಗಳ ಮಧ್ಯೆ ನನ್ನ ಗಮನ ಸೆಳೆದದ್ದು ಚಿತ್ರ 101. ಅದಕ್ಕೆ ಲೇಖಕರು ಕೊಟ್ಟಿರುವ ತಲೆಬರಹ 'ತ್ರಿವೇಣಿ ಅವರ ವಸಂತಗಾನ, ಅವರ ಕೈಬರಹದಲ್ಲಿ'. ಈ ಚಿತ್ರವು ವಸಂತಗಾನ ಕಾದಂಬರಿಯ ಮೊದಲ ಒಳಪುಟ. ಅದರ ಮೇಲಿರುವ ಕೈಬರಹದ ಒಕ್ಕಣೆ ಹೀಗಿದೆ "ಮಾ। ತಂಗಮ್ಮನಿಗೆ, ಅನಸೂಯ". ಇದು ತ್ರಿವೇಣಿ ಅವರು ತಮ್ಮ ತಾಯಿ ತಂಗಮ್ಮ ಅವರಿಗೆ ನೀಡಿದ ಪ್ರತಿ. ಆ ಒಕ್ಕಣೆಯನ್ನು ಗಮನಿಸಿ. ಹೆಸರಿನ ಮೊದಲು 'ಮಾ' –ನಮ್ಮ ಪರಂಪರೆಯಿಂದ ಬಂದಿರುವ ಗೌರವ ಸೂಚಕವಾದ ಮಾತೃಶ್ರೀ ಎನ್ನುವುದರ ಹ್ರಸ್ವರೂಪ. ಅನಂತರ 'ತಂಗಮ್ಮನಿಗೆ' ಎನ್ನುವಲ್ಲಿ, ಮಗಳು ತಾಯಿಯನ್ನು ಏಕವಚನದಲ್ಲಿ ಕರೆಯುವ ಪ್ರೀತಿಯ ಸಾಮೀಪ್ಯ ಕಂಡು ಬರುತ್ತದೆ. ಅದರ ಕೆಳಗಿನ ಸಹಿ ತ್ರಿವೇಣಿ ಎಂದು ಅಲ್ಲ, ಅನುಸೂಯ. ಇದು ತಾಯಿ ಇಟ್ಟ ಪ್ರೀತಿಯ ಹೆಸರಿನಲ್ಲಿ ಮಾಡಿದ ಸಹಿ.

ಈ ವ್ಯಕ್ತಿ ಚಿತ್ರಗಳಲ್ಲಿ ಪ್ರೊ॥ ಎಚ್ಚೆಸ್ಕೆ ಅವರ ಬಗ್ಗೆಯೂ ಒಂದು ಲೇಖನವಿದೆ,

ಎಂಟು ಚಿತ್ರಗಳ ಜೊತೆಗೆ. ಡಾ॥ ಭಗೀರಥ್ ಅವರು ಈ ಲೇಖನಗಳನ್ನು ಬರೆಯಲು ಸಾಕಷ್ಟು ಸಂಶೋಧನೆ ನಡೆಸಿದ್ದಾರೆ. ಅನೇಕ ಕುಟುಂಬಗಳಿಗೆ ಭೇಟಿ ಕೊಟ್ಟು ಅವರ ಹಿರಿಯರ ಬಗ್ಗೆ ಮಾಹಿತಿಗಳನ್ನು, ಚಿತ್ರಗಳನ್ನು ಕಲೆಹಾಕಿದ್ದಾರೆ. ಆ ವ್ಯಕ್ತಿಗಳ ಜೊತೆ ಸಂಪರ್ಕ ಇದ್ದಿರಬಹುದಾದ ಅನೇಕರೊಡನೆ ಮಾತುಕತೆ ನಡೆಸಿದ್ದಾರೆ. ಅವುಗಳ ಪಟ್ಟಿಯೇ ನಾಲ್ಕು ಪುಟಗಳಷ್ಟಿದೆ. ಪ್ರೊ॥ ಜಿ ವಿ ಅವರೊಡನೆ ಹಲವಾರು ಬಾರಿ ಮಾತುಕತೆಗೆ ಬಂದಾಗ ನಾನು ಅವರ ವಿಷಯ ಸಂಗ್ರಹಣೆಗೆ ಸಾಕ್ಷಿಯಾಗಿದ್ದೆ.

ಈ ಇಂಗ್ಲಿಷ್ ಪುಸ್ತಕವನ್ನು ಪರಿಚಯಿಸುವುದಕ್ಕೆ ಮುಖ್ಯ ಕಾರಣವೆಂದರೆ ಅದರಲ್ಲಿ 19 ಕನ್ನಡಿಗರನ್ನು ಒಳಗೊಂಡಂತೆ ಮೈಸೂರಿನ 20 ರತ್ನಗಳನ್ನು ಜಗತ್ತಿಗೆ, ಕನ್ನಡವನ್ನು ಓದಲು ಬರದವರಿಗೆ ಪರಿಚಯಿಸುವ ಅತ್ಯುತ್ತಮ ಕಾರ್ಯವನ್ನು ಮಾಡಿರುವುದು. ಅದರ ಕನ್ನಡ ಅನುವಾದವು ಬಂದಿದ್ದರೂ ನನಗೆ ಇಂಗ್ಲಿಷಿನ ಮೂಲವೇ ತೃಪ್ತಿಯನ್ನು ನೀಡಿದೆ. ಇದಕ್ಕೆ ನಾನು ನನ್ನ ತರುಣ ಮಿತ್ರ, ಡಾ॥ ಭಗೀರಥ್ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರಿಂದ ಇನ್ನೂ ಅನೇಕ ಕೃತಿಗಳನ್ನು ನಿರೀಕ್ಷಿಸುತ್ತೇನೆ. ಡಾ॥ ಭಗೀರಥ್ ಅವರ ಈ ಕಾರ್ಯದಲ್ಲಿ ನೆರವಾದವರು ಅವರ ತಂದೆ ಹಾಗೂ ನನ್ನ ಮಿತ್ರರಾದ ಪ್ರೊ॥ ಎಸ್. ನಾಗನಾಥ್ ಅವರು.



ಮತ್ತೊಂದು ಸಂತೋಷದ ವಿಚಾರ; ಪ್ರೊ॥ ಎಸ್. ನಾಗನಾಥ್ ಅವರು ಇಂಗ್ಲಿಷಿಗೆ ಅನುವಾದಿಸಿರುವ ಡಾ॥ ಶ್ರೀಕಂಠ ಶಾಸ್ತ್ರಿಗಳ ಖ್ಯಾತ ಗ್ರಂಥ 'ಭಾರತೀಯ ಸಂಸ್ಕೃತಿ' ಯು "**ಇಂಡಿಯನ್ ಕಲ್ಚರ್**" ಎಂಬ ಹೆಸರಿನ 670 ಪುಟಗಳ ಉದ್ಗ್ರಂಥವು ಈಗಷ್ಟೇ ಬಿಡುಗಡೆಯಾಗಿದೆ. ಕನ್ನಡ ಬಾರದ ಓದುಗರಿಗೆ, ಹೊರದೇಶಗಳಲ್ಲಿ ನೆಲೆಸಿರುವ ನಮ್ಮ ಸಂಸ್ಕೃತಿಯ ಬಗ್ಗೆ ತಿಳಿಯಬೇಕು ಎನ್ನುವವರಿಗೆ ಇದೊಂದು ಉತ್ತಮ ಪುಸ್ತಕ. (ಐ ಎಸ್ ಬಿ ಎನ್ 978–1–43806–510–4)

*****

ನೋಡಿಯೋ ಸಾಹಿತ್ಯ ದಾಸೋಹ ೧೯೬ – ಅಧ್ಯಕ್ಷರ ಅನಿಸಿಕೆಗಳು

– ಕೆ.ಆರ್. ವೆಂಕಟೇಶ್

ಎಲ್ಲರಿಗೂ ನಮಸ್ಕಾರಗಳು. ೧೯೬ನೇ ನೋಡಿಯೋ ಸಾಹಿತ್ಯ ದಾಸೋಹದ ಅಧ್ಯಕ್ಷತೆ ನನಗೆ ನೀಡಿರುವುದಕ್ಕೆ ನಾನು ಸಂಚಾಲಕ ಸಮಿತಿಗೆ ಆಭಾರಿಯಾಗಿದ್ದೇನೆ.

ಇಂದು ಒಟ್ಟು ೧೫ ಜನ ವೇದಿಕೆಯಲ್ಲಿ ಪ್ರಸ್ತುತಿಗಳನ್ನು ಮಾಡಿದ್ದಾರೆ. ಒಂದೂವರೆ ವರ್ಷದಿಂದ ನಡೆದ ಸಾಹಿತ್ಯ ದಾಸೋಹಗಳ ಸರಾಸರಿಗಿಂತ ಇಂದಿನ ಪ್ರಸ್ತುತಿಗಳ ಸಂಖ್ಯೆ ಕಡಿಮೆಯಾಗಿರುವುದು ಕಂಡುಬಂತು. ಆದರೂ ಪ್ರಸ್ತುತಿಗಳಲ್ಲಿ ವೈವಿಧ್ಯತೆಯಿತ್ತು.

ಮೊದಲನೆಯದಾಗಿ ಗುರುರಾಜ ಶಾಸ್ತ್ರಿಗಳು "ನೀವು ನಕ್ಸಲರೇ" ಎಂಬ ಶೀರ್ಷಿಕೆಯಡಿ ಒಂದು ಪ್ರವಾಸ ಕಥನವನ್ನು ಪ್ರಸ್ತುತಿ ಮಾಡಿದರು. ಶೀರ್ಷಿಕೆಯೇ ಕುತೂಹಲಕಾರಿಯಾಗಿದ್ದು ಒಂದು ಪ್ರವಾಸ ಕಥನಕ್ಕೆ ಈ ರೀತಿಯ ಶೀರ್ಷಿಕೆ ಆಶ್ಚರ್ಯ ತಂದಿತು. ಪ್ರಸ್ತುತಿ ಓದುತ್ತಾ ಅವರು, ಅವರ ಸಹೋದರ ಹಾಗೂ ಸ್ನೇಹಿತರೊಂದಿಗೆ ಕೈಗೊಂಡ ಆಗುಂಬೆ ಪ್ರವಾಸ ಪ್ರಕೃತಿಯ ಸೊಬಗನ್ನು ಸವಿಯುವುದರಿಂದ ಆರಂಭವಾಗಿ ಕಡೆಗೆ ಸ್ಥಳೀಯರಿಂದ "ನೀವು ನಕ್ಸಲರೇ" ಎಂಬ ಪ್ರಶ್ನೆಯನ್ನು ಎದುರಿಸುವ ಎದುರಿಸುವಂತಾಗಿ, ನಂತರ ಅನುಮಾನ ಪರಿಹಾರವಾಗಿ ನಿರಾಳವಾದ ಪ್ರಸಂಗ ಕುತೂಹಲಕಾರಿಯಾಗಿತ್ತು.

ಎರಡನೆಯದಾಗಿ ಎನ್.ವಿ.ರಘುರಾಮ್ "ಪ್ರಕೃತಿಯಲ್ಲಿ ಹೊಂಗಿರಣ" ಎಂಬ ಗದ್ಯಲಹರಿಯನ್ನು ಪ್ರಸ್ತುತಿ ಮಾಡಿದರು. ಪ್ರಸ್ತುತಿ ಮಾಡುತ್ತಾ ಹೋದಂತೆ ಅದು ಅವರ ಶ್ರೀಮತಿಯ ಜೊತೆ ಮಾಡಿದ ೧೮ ದಿನಗಳ ಅಮೇರಿಕಾ ಪ್ರವಾಸದ ಕಥನದಂತೆ ತೋರಿತು. ಅಲ್ಲಿ ಭೇಟಿ ಕೊಟ್ಟ ಸ್ಥಳಗಳ ಬಗ್ಗೆ ಪರಿಚಯ ಮಾಡುತ್ತಾ ಕಡೆಗೆ ಅವರು ಅದು ಅವರು ಅವರ ಮನೆಯಲ್ಲಿ ಹಾಡುಹಗಲಲ್ಲೇ ಕಂಡ ಕನಸೆಂದು ಕೊಟ್ಟ ತಿರುವು ಆಶ್ಚರ್ಯತಂದಿತು. ಅವರು ಪ್ರಸ್ತುತಿಯನ್ನು ಯಾಂತ್ರಿಕವಾಗಿ ಓದಿದ ಸಲುವಾಗಿ ಇಂಥ ಪ್ರಸ್ತುತಿಗಳನ್ನು ಹುರುಪಿನಿಂದ ಓದುವಂತೆ ಸಲಹೆ ಕೊಡಲಾಯಿತು.

ಮೂರನೆಯದಾಗಿ ಶೀಲಾ ಅರಕಲಗೂಡು ಅವರು "ತೊದಲು ಮಾತು" ಎಂಬ ಶೀರ್ಷಿಕೆಯಲ್ಲಿ ಚೌಪದಿಯಲ್ಲಿ ರಚಿಸಿದ ಹತ್ತು ಮುಕ್ತಕಗಳನ್ನು ಪ್ರಸ್ತುತಿ ಮಾಡಿದರು. ಇದಕ್ಕೆ ಮುಂಚಿತವಾಗಿ ಅವರು ಅದರ ಬಗ್ಗೆ ಪೀಠಿಕೆ ನೀಡುತ್ತಾ ಈ ಮುಕ್ತಕಗಳು ಡಿ.ವಿ.ಗುಂಡಪ್ಪನವರ "ಮಂಕುತಿಮ್ಮನ ಕಗ್ಗ"ದ ಮುಕ್ತಕಗಳಿಂದ ಪ್ರಭಾವಿತರಾಗಿ ತಾವು ಬರೆದ ಮುಕ್ತಕಗಳು. ಅವು ಮಂಕುತಿಮ್ಮನ ಕಗ್ಗದ ಭಾವಾರ್ಥವಲ್ಲ ಎಂದು ಸ್ಪಷ್ಟಪಡಿಸಿದರು. ಶೀಲಾರವರ ಪ್ರಸ್ತುತಿ ಮಾಡಿದ ಮುಕ್ತಕಗಳು ಪಾರಮಾರ್ಥಿಕ ವಿಷಯಗಳಿಂದ ಕೂಡಿದ್ದು ಮನಮುಟ್ಟುವಂತೆ ಇತ್ತು.

ನಾಲ್ಕನೆಯದಾಗಿ ಗಣಪತಿ ಹೆಗಡೆಯವರು "ಸಮಾಜಸೇವೆ ಹಾಗೂ ರಾಜಕಾರಣ" ಎಂಬ ಶೀರ್ಷಿಕೆಯಡಿ ಒಂದು ಲೇಖನವನ್ನು ಪ್ರಸ್ತುತಪಡಿಸಿದರು. ಅವರ ಲೇಖನ ಸಮಾಜಸೇವೆ ಹಾಗೂ ರಾಜಕಾರಣದ ಲಕ್ಷಣಗಳನ್ನು, ಅವುಗಳ ನಡುವೆ ಇರುವ ವ್ಯತ್ಯಾಸ, ವೈರುಧ್ಯಗಳನ್ನು ವಿವರಿಸುತ್ತಾ ಯಾವ ಯಾವ ಸಂದರ್ಭಗಳಲ್ಲಿ ವ್ಯಕ್ತಿಗಳು ಈ ಕ್ಷೇತ್ರಗಳನ್ನು ಆರಿಸಿಕೊಳ್ಳುತ್ತಾರೆ, ಅವುಗಳ ಇತಿಮಿತಿಗಳೇನು ಎಂಬುದನ್ನು ಉಲ್ಲೇಖಿಸಿದರು. ಈ ಪ್ರಸ್ತುತಿ ವ್ಯಕ್ತಿಗಳು ಸಮಾಜ ಸೇವೆಗೋಸ್ಕರ ರಾಜಕಾರಣಕ್ಕೆ ಬರುವ ಹಂಬಲವುಳ್ಳವರಾಗಿರುತ್ತಾರೋ ಇಲ್ಲಾ ರಾಜಕಾರಣಕ್ಕೆ ಬರುವುದಕ್ಕೋಸ್ಕರ ಸಮಾಜ ಸೇವೆ ಮಾಡಬಯಸುತ್ತಾರೋ ಎಂಬ ವಿಚಾರವನ್ನು ಹುಟ್ಟುಹಾಕಿತು.

ಐದನೆಯದಾಗಿ ನಾಗರತ್ನ ಚಂದ್ರಶೇಖರ್ ಅವರು "ಸಾಹಿತಿ ಬುಕ್ಕಪ್ಪ ಹಾಗೂ ಪತ್ನಿ ಶಾಲೂ" ಎಂಬ ಲೇಖನ ಪ್ರಸ್ತುತಿ ಮಾಡಿದರು. ಅವರು ಇದನ್ನು ನಗೆಲೇಖನ ಎಂದು ಉಲ್ಲೇಖೀಸಿದ್ದರು. ಆದರೆ ನನಗಿದು ಒಂದು ಸಂದೇಶವಿರುವ ತಿಳಿಹಾಸ್ಯದ ಲೇಖನ ಎಂದೆನಿಸಿತು. ಇದರಲ್ಲಿ ಅವರು ಒಬ್ಬ ಶಾಲೆಯ ಶಿಕ್ಷಕನನ್ನು ಅವನ ಶಿಷ್ಯರು ಸನ್ಮಾನಿಸುವ ಉದ್ದೇಶದಿಂದ ತಮ್ಮ ಮೇಷ್ಟ್ರು ಬಡಸಾಹಿತಿಯಾಗಿ ಬಡಾವಣೆಯೊಂದರಲ್ಲಿ ವಾಸವಾಗಿರುವುದು ತಿಳಿದು ಭೇಟಿಯಾಗಲು ಬಂದಾಗ ಅವನ ಪತ್ನಿಯಿಂದ ಬಡಸಾಹಿತಿಗಳ ವಾಸ್ತವ ಸ್ಥಿತಿಯನ್ನು ಅರಿಯುವ ವಸ್ತು ತಿಳಿಹಾಸ್ಯದಿಂದ ಕೂಡಿದೆ. ಬಡಸಾಧಕರನ್ನು ಸನ್ಮಾನಿಸುವಾಗ ಬೇರೆ ಬೇರೆ ಸ್ಮರಣಿಕೆಗಳಿಗಿಂತ ಅವರಿಗೆ ನಗದು ಹಣ ಕೊಡುವುದು ಮುಖ್ಯ ಹಾಗೂ ಅದರ ಅವಶ್ಯಕತೆ ಹೆಚ್ಚಾಗಿರುತ್ತದೆ ಎಂಬ ಸಂದೇಶ ನೀಡಿದೆ.

ಆರನೆಯದಾಗಿ ಎನ್. ಶಂಕರ್ ರಾವ್ "ಮನ್ವಂತರ" ಎಂಬ ಶೀರ್ಷಿಕೆಯ ಕವನವನ್ನು ಪ್ರಸ್ತುತಪಡಿಸಿದರು. ಅವರು ಈ ಕವನದ ಮೂಲಕ ಹೇಗೆ ಕನ್ನಡ ನಾಡಿನಲ್ಲಿರುವವರಿಗೆ ಹಾಗೂ ಎಲ್ಲೆಡೆ ವಾಸವಾಗಿರುವ ಕನ್ನಡಿಗರಿಗೆ ಕನ್ನಡ ಭಾಷೆಯನ್ನು ಬಳಸಿ, ಬೆಳೆಸಿ ಪೋಷಿಸಿ ಉಳಿಸುವ ಮನೋಭಾವವನ್ನು ಹೊಂದಿರಬೇಕೆಂದು ಅಭಿವ್ಯಕ್ತಿಪಡಿಸಿದ್ದಾರೆ. ಕನ್ನಡ ಭಾಷೆಯ ಬಳಕೆಯಲ್ಲಿ ಪ್ರಸ್ತುತಿ ಹಾಗೂ ಮುಂಬರುವ ತಲೆಮಾರಿನವರು ಒಂದು ಆಮೂಲಾಗ್ರ ಬದಲಾವಣೆ ತರಬೇಕೆಂಬೆನ್ನುವ ವಿಚಾರವನ್ನು ಹುಟ್ಟುಹಾಕಿದ್ದಾರೆ.

ಏಳನೆಯದಾಗಿ ರತ್ನಾಮೂರ್ತಿಯವರು ತಮ್ಮ "ಗಣೇಶ ದಂಡಕ"ವನ್ನು ಒಂದು ರಾಗದ ಮೂಲಕ ಪ್ರಸ್ತುತಿ ಪಡಿಸಿದರು. ಗಣೇಶ ದೇವರ ವಿವಿಧ ನಾಮಾವಳಿಗಳನ್ನು ಹಾಗೂ ವಿಶೇಷಣಗಳೊಂದಿಗೆ ದಂಡಕವನ್ನು ಅಚ್ಚುಕಟ್ಟಾಗಿ ಪ್ರಸ್ತುತಿಗೊಳಿಸಿದರು.

ಎಂಟನೆಯದಾಗಿ ಪ್ರಮೋದಾ ಎಸ್. ಮೂರ್ತಿಯವರು "ಮನಸ್ಸಿದ್ದರೆ ಮಾರ್ಗ ಎಂಬ ಗಾದೆಮಾತು ಸುಳ್ಳಲ್ಲ" ಎಂಬ ಶೀರ್ಷಿಕೆಯಲ್ಲಿ ಇದೇ ಗಾದೆಯ ಸಮರ್ಥನೆ ಮಾಡುವ ಪ್ರಯತ್ನವನ್ನು ತಮ್ಮ ಒಂದು ಅನುಭವ ಲೇಖನದ ಮೂಲಕ ಮಾಡಿದ್ದಾರೆ. ತಮ್ಮ ಸ್ನೇಹಿತರೊಬ್ಬರು ಹಿರಿಯ ನಾಗರಿಕರಾದ ಮೇಲೂ ಸಂಗೀತ ಕಲಿಯುವ ಉತ್ಸಾಹದಿಂದ ತರಬೇತಿ ಪಡೆಯಲು ಶಿಕ್ಷಕರೊಬ್ಬರ ಬಳಿಗೆ ಹೋಗುತ್ತಿದ್ದು, ಸ್ಪರ್ಧೆಯಲ್ಲಿ ಬಹುಮಾನವನ್ನೂ ಪಡೆದು ತಮ್ಮ ಮೇಲೆ ಪ್ರಭಾವ ಬೀರಿ ತಾವೂ ಸಂಗೀತ ಕಲಿಯುವಂತೆ ಮಾಡಿದ ಸಂದರ್ಭವನ್ನು ಬಹಳ ಅಚ್ಚುಕಟ್ಟಾಗಿ ಬರೆದಿದ್ದಾರೆ.

ಒಂಭತ್ತನೆಯದಾಗಿ ವಿಠಲ್ ಇಜೇರಿಯವರು ಪಾರಮಾರ್ಥಿಕ ವಿಷಯಗಳನ್ನು ಹೊಂದಿದ ವೇದಾಂತ ಕಥೆಗಳ ಸರಣಿಯಲ್ಲಿ "ಮನಸ್ಸು ಹಗುರಾಗಲಿ" ಎಂಬ ಶೀರ್ಷಿಕೆಯ ಕಥೆಯೊಂದನ್ನು ಪ್ರಸ್ತುತಿ ಮಾಡಿದರು. ಇದರ ಮೂಲ ಬರಹಗಾರರು ಮತ್ತೊಬ್ಬರು. ಈ ಕಥೆಯ ಮೂಲಕ ಅವರು ಒಬ್ಬ ಗುರು, ಶಿಷ್ಯ ಹಾಗೂ ಶಿಷ್ಯ ಸಾಕಿದ ಗಿಣಿಯ ಪಾತ್ರೆಗಳನ್ನು ಪರಿಚಯಿಸಿ ಆ ಗಿಣಿಯು ಹೇಗೆ ತನ್ನ ಯಜಮಾನನ ಗುರುಗಳ ಮಾತನ್ನು ಗ್ರಹಿಸಿ ಬಿಡುಗಡೆ ಹೊಂದಿತು ಎಂಬುದನ್ನು ತಿಳಿಸಿದ್ದಾರೆ. ಈ ಕಥೆ ಸರಳವಾಗಿ ಚಿಕ್ಕದಾಗಿದ್ದರೂ ಅದರಿಂದ ಕಲಿಯುವ ನೀತಿ ದೊಡ್ಡದಾಗಿದೆ.

ಹತ್ತನೆಯದಾಗಿ ಶಾಂತಿವಾಸು ಅವರು ತಮ್ಮ "ಶಾವಾತ್ಮ ಪದಗಳು" ಎಂಬ ಕವನ ಸರಣಿಯಡಿಯಲ್ಲಿ ಒಂದು ಕವನ "ಮಣ್ಣಿನ ಧೀರಧ್ಯಾನ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಸ್ತುತಿಪಡಿಸಿದರು. ಇದರಲ್ಲಿ ಅವರು ಮಣ್ಣು. ಅಂದರೆ ಭೂಮಿಯ ಮಹತ್ವವನ್ನು ಹೇಗೆ ಯಾವ ಪ್ರತಿರೋಧವೂ ಮಾಡದೆ ಎಲ್ಲಾ ನಿಸರ್ಗದ ಕ್ರಿಯೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ರೀತಿಯ ಬಗ್ಗೆ ಬರೆದಿದ್ದಾರೆ.

ಹನ್ನೊಂದನೆಯದಾಗಿ ಎಂ.ಎಸ್.ನರಸಿಂಹಮೂರ್ತಿಯವರು "ಗಿಣಿ ಕಚ್ಚಿದ ಹಣ್ಣು" ಎಂಬ ಶೀರ್ಷಿಕೆಯಡಿ ಒಂದು ಲೇಖನವನ್ನು ಪ್ರಸ್ತುತಿಪಡಿಸಿದರು. ಶೀರ್ಷಿಕೆ ಲೇಖನದ ಉದ್ದೇಶಕ್ಕೆ ಹೊಂದಾಣಿಕೆಯಾಗದಿದ್ದರೂ ಅವರು ಈ ಮೂಲಕ ಒಬ್ಬ ಪ್ರತಿಭಾವಂತ ಲೇಖಕರಾದ ನರಸಿಂಹಯ್ಯ ಅವರನ್ನು ಪರಿಚಯಿಸುತ್ತಾ, ಹೇಗೆ ತಮ್ಮ ಬಾಲ್ಯ ಯೌವ್ವನಗಳಲ್ಲಿ ಈ ಲೇಖಕರ ಪತ್ತೇದಾರಿ ಕಾದಂಬರಿಗಳಿಂದ ತಾವೂ ಹಾಗೂ ಸಮಾನ ವಯಸ್ಕರು ಪ್ರಭಾವಿತಗೊಂಡಿದ್ದೆವು ಎಂಬುದರ ಬಗ್ಗೆ ಹೇಳುತ್ತಾ, ಮುಂದೊಂದು ದಿನ ತಮ್ಮ ಹಾಗೂ ಈ ಲೇಖಕರನ್ನು ಸನ್ಮಾನಿಸುವ ಸಲುವಾಗಿ ಅವರೊಂದಿಗೆ ಇದ್ದು ಒಡನಾಟದ ಬಗ್ಗೆ ಮಾಹಿತಿ ನೀಡಿದ್ದಾರೆ.

ಹನ್ನೆರಡನೆಯದಾಗಿ ರಾಧಿಕಾರವರು "ಸೀಸದ ಕಡ್ಡಿಯ ಬಗ್ಗೆ ಒಂದು ದಾರ್ಶನಿಕ ದೃಷ್ಟಿ" ಎಂಬ ಶೀರ್ಷಿಕೆಯಡಿಯಲ್ಲಿ ಎಲ್ಲರೂ ತಿಳಿದಿರುವ ಸೀಸದ ಕಡ್ಡಿಯ ಭೌತಿಕ ಪ್ರಪಂಚದ ಉಪಯೋಗಗಳ ಜೊತೆಗೆ ಹೇಗೆ ಜೀವನದ ಮೌಲ್ಯಗಳನ್ನು ದಾರ್ಶನಿಕವಾಗಿ ಈ ಸೀಸ ಕಲಿಸುತ್ತದೆ ಎಂಬ ಬೇರೆ ಆಯಾಮದ ಹೊಸ ವಿಷಯಗಳನ್ನು ಬಿಚ್ಚಿಟ್ಟಿದ್ದಾರೆ.

ಹದಿಮೂರನೆಯದಾಗಿ ರೇಣುಕಾ ದೇಸಾಯಿರವರು ಎರಡು ಕವನಗಳಗಳಲ್ಲೊಂದಾದ "ಕಪ್ಪು ಬಿಳಿಯಾಟ" ಶೀರ್ಷಿಕೆ ಯಡಿಯಲ್ಲಿ ಕಪ್ಪು ಹಣವನ್ನು ದುರ್ಮಾರ್ಗಗಳಿಂದ ಗಳಿಸಿದ ವ್ಯಕ್ತಿಗಳು ಮೆರೆಯುವ ರೀತಿ ಹಾಗೂ ಸಿಕ್ಕಿಬಿದ್ದಾಗ ಅನುಭವಿಸುವ ನೋವುಗಳ ಬಗ್ಗೆ ಬರೆದಿದ್ದಾರೆ. ಎರಡನೆಯ ಕವನ "ಅಶ್ರುತರ್ಪಣ" ತಮ್ಮ ಪ್ರೀತಿಪಾತ್ರರಾದ ಸಹದ್ಯೋಗಿಗಳಿಬ್ಬರ ಆಕಸ್ಮಿಕ ಮರಣದಿಂದ ನೊಂದು ಅವರಿಗೆ ಅರ್ಪಿಸಿದ ಶ್ರದ್ಧಾಂಜಲಿಯಾಗಿದೆ.

ಹದಿನಾಲ್ಕನೆಯದಾಗಿ ಮಾಲತಿ ಶ್ರೀನಿವಾಸನ್ ಅವರು ಎರಡು ಕವನಗಳನ್ನು ಪ್ರಸ್ತುತಿಪಡಿಸಿದರು. "ಜೀವನ ಕಲಿಸಿದ ಪಾಠ" ಎಂಬ ಶೀರ್ಷಿಕೆಯುಳ್ಳ ಮೊದಲನೆಯ ಕವನವನ್ನು ಸಂಗೀತಕ್ಕೆ ಅಳವಡಿಸಿ ಹಾಡಿದರು. ಈ ಕವನದಲ್ಲಿ ಅವರು ಜೀವನದ ಸಾರಾಂಶವನ್ನು ಅದು ಕಣ್ಣು ಮುಚ್ಚಾಲೆಯಾಟ, ಹಾವು ಏಣಿಯಾಟ ಎಂದು ಹೇಳುವ ಮೂಲಕ ಎಲ್ಲಾ ಜೀವಿಗಳು ಇಲ್ಲಿ ಪಾತ್ರಧಾರಿಗಳು, ಈ ನಾಟಕದ ಸೂತ್ರಧಾರಿಯೊಬ್ಬನ (ದೇವರು, ವಿಧಿ) ಮುಷ್ಟಿಯಲ್ಲಿ ಎಲ್ಲಾ ಇರುವುದು ಎಂದು ವ್ಯಕ್ತಪಡಿಸಿದ್ದಾರೆ. ಎರಡನೆಯ ಕವನ "ಕೆಲವು ಕವನಗಳೇ ಹಾಗೆ" ಎಂಬ ಶೀರ್ಷಿಕೆ ಹೊಂದಿದ್ದು ಇದು ಈ ಸಾಹಿತ್ಯ ವೇದಿಕೆಯಲ್ಲಿ ಪ್ರಸ್ತುತವಾಗುವ ಸದಸ್ಯರ ಕವನಗಳ ಕುರಿತಾಗಿಯೇ ಬಂದ ಒಂದು ಪ್ರಸ್ತುತಿ. ಕೆಲವು ಕವನಗಳು ಹೇಗೆ ಕಲ್ಪನಾಶಕ್ತಿ, ಪದಲಾಲಿತ್ಯ, ಸೌಮ್ಯತೆ ಹೊಂದಿದ್ದು ರಾಗ, ತಾಳ ಲಯಗಳಿಗೂ ಹೊಂದಿಕೊಂಡು ಸಾಹಿತ್ಯ ಸುಧೆಯ ಜೊತೆಜೊತೆಗೆ ಸಂಗೀತ ಸುಧೆಯನ್ನೂ ಹರಿಸುತ್ತದೆ ಎಂಬುದನ್ನು ವ್ಯಕ್ತಪಡಿಸಿದ್ದಾರೆ.

ಹದಿನೈದನೆಯ ಹಾಗೂ ಕಡೆಯದಾಗಿ ಜಿ.ವಿ.ಅರುಣರು "ಬೇರಿನ ಆಸರೆಯ ಸೆಲೆಯ ಹುಡುಕುತ್ತಾ" ಎಂಬ ಶೀರ್ಷಿಕೆಯಡಿ ಡಾ.ಭಗೀರಥ್ ಎಸ್. ನಾಗನಾಥ್ ಎಂಬ ಲೇಖಕರ ಬಗ್ಗೆ, ಅವರು ನೀಡಿರುವ ಕೊಡುಗೆಯ ಬಗ್ಗೆ ಪ್ರಸ್ತುತಿಪಡಿಸಿದರು. ನಾಗನಾಥ್ ಅವರನ್ನು ಮೂಲತಃ ವೈದ್ಯರೆಂದು ಪರಿಚಯಿಸುತ್ತಾ ಅವರು ತಮ್ಮ ಹುಟ್ಟೂರಾದ ಮೈಸೂರಿನ ಸಾಧಕರ ಸಾಧನೆಗಳ ಬಗ್ಗೆ ತಮ್ಮ ತಾತ ಶ್ರೀಕಂಠಶಾಸ್ತ್ರಿಗಳನ್ನೂ ಒಳಗೊಂಡಂತೆ ಸಂಶೋಧಿಸಿ ಮಾಹಿತಿ ಕಲೆಹಾಕಿ ಆಂಗ್ಲಭಾಷೆಯಲ್ಲಿ "ಮೆಮೋರಬಲ್ ಮೈಸೂರಿಯನ್ಸ್" ಎಂಬ ಪುಸ್ತಕವನ್ನು ಬರೆದು ಲೋಕಾರ್ಪಣೆ ಮಾಡಿರುವ ಬಗ್ಗೆ ತಿಳಿಸಿದರು. ಇದು ಎಚ್.ಎಂ.ನಾಗರಾಜರಾವ್ ಎಂಬುವರಿಂದ ಕನ್ನಡಕ್ಕೂ "ಮೈಸೂರಿನ ೨೦ ರತ್ನಗಳು" ಎಂಬ ಶೀರ್ಷಿಕೆಯಡಿ ಅನುವಾದವಾಗಿ ಲೋಕಾರ್ಪಣೆಯಾಗಿದೆಯೆಂದು ತಿಳಿಸಿದರು.

– ಶುಭಂ –